ದರೋ ಗೊತ್ತಿಲ್ಲ. ನೀವು ನಮಗೆ ಏನು ಮತ ಕೊಟ್ಟಿಲ್ಲವೆಂದು ಅರ್ಜಿಯಲ್ಲಿ ಹೇಳಿದ್ದಾರೆ. ಬಹುಶಃ ಅವರು ಇವತ್ತು ತಮಗೂ ಅರ್ಜಿಯನ್ನು ಕೊಟ್ಟಿದ್ದಾರೆಂದು ಕಾಣುತ್ತದೆ. ಅವರಿಗೆ ನ್ಯಾಯ ದೊರಕಿಸುವ ವಿಶ್ವಾಸ ಮೂಡಿಸತಕ್ಕದ್ದು ತಮ್ಮ ಆದ್ಯ ಕರ್ತವ್ಯವಾಗಿದೆ. ಅದನ್ನು ದಯಮಾಡಿ ನೋಡಿ, ಈ ರೀತಿ ಸೀರೀಸ್ ಆಗಿ ನಡೆದ ಘಟನೆಗಳಿಂದ ಹತಾಶರಾಗಿ ಪೋಲೀಸ್ ರಕ್ಷಣೆಯಾಗಲಿ ಯಾವುದೇ ರಕ್ಷಣೆ ಆಗಲಿ ಇಲ್ಲದೆ ಅವರು ಈಗಲೂ ಕೂಡ ಭಯಭೀತರಾಗಿದ್ದಾರೆ. ತಾವು ಮಾತನಾಡಿದ್ದರಿಂದ ಸಮಾಧಾನವಾಗಿರಬಹುದು. ಈಗಲೂ ಕೂಡ ಹರಿಜನರ ಗುಂಪಿಗೆ ಯಾವ ರಕ್ಷಣೆಯೂ ಇಲ್ಲವಾಗಿದೆ. ಇಷ್ಟು ತೀವ್ರತರವಾಗಿ ಗಾಯವಾದರೂ ಕೂಡ ಯಾವುದೇ ರೀತಿಯ ರಕ್ಷಣೆ ಇಲ್ಲದಿದ್ದರೆ ಹೇಗೆ ? ಇನ್ನು ಮುಂದಾದರೂ ಅವರಿಗೆ ರಕ್ಷಣೆ ಸಿಗತಕ್ಕ ಭರವಸೆಯನ್ನು ಹುಟ್ಟಿಸಬೇಕಾಗುತ್ತದೆ. ಪೋಲೀಸರು ನಿರ್ಲಕ್ಷ್ಯ ಭಾವನೆಯಿಂದ ನಡೆದರೂ ಕೂಡ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಯಾವ ರೀತಿ ಅವರಿಗೆ ರಕ್ಷಣೆ ಕೊಡುತ್ತೀರಿ, ವಿಶ್ವಾಸ ಹುಟ್ಟಿಸುತ್ತೀರಿ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ವಿರೋಧ ಪಕ್ಷದ ನಾಯಕರಿಗೆ ಯಾರು ಅರ್ಜಿ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಅಲ್ಲಿಗೆ ಹೋದಾಗ ನನ್ನ ಕೈಯಲ್ಲಿ ಅರ್ಜಿ ಕೊಟ್ಟರು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಅರ್ಜಿ ಬೇರೆ ತರಹ ಇದೆ. ನಮ್ಮ ಅರ್ಜಿ ಬೇರೆ ತರಹ ಇದೆ.

ಶ್ರೀ ಹೆಚ್. ಡಿ. ಚೌಡಯ್ಯ.—ನಮ್ಮ ಪಕ್ಷದವರೇನಾದರೂ ಈ ರೀತಿ ಮಾಡಿದ್ದರೆ ಚಪ್ಪಾಳೆ ಹೊಡೆಯುತ್ತಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಜನತಾ ಪಕ್ಷ, ಕಾಂಗ್ರೆಸ್ ಪಕ್ಷ ಎಂಬ ಪ್ರಶ್ನೆ ಬಂದಿಲ್ಲ. ಆ ಆಧಾರದ ಮೇಲೆ ನಾವು ಹೋಗಿಲ್ಲ

ಶ್ರೀ ಎಂ. ವೀರಪ್ಪ ಮೊಯಿಲಿ.—ಚಾಕು-ಚೂರಿಯವರನ್ನು ಯಾರ ಪಕ್ಷಕ್ಕೂ ಸೇರಿಸಬೇಡಿ. ಅವರು ಎಲ್ಲಿದ್ದರೂ ಹಿಡಿದು ಸರಿಯಾದ ಕ್ರಮ ತೆಗೆದುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಪಕ್ಷವೇ ಇರಲಿ, ಚಾಕು-ಚೂರಿಯವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಇಲ್ಲಿ ಏನು ಜಗಳವಾಯಿತು ಎಂದರೆ, ವೈಯಕ್ತಿಕವಾಗಿ ಕೆಲವೊಂದು ಘರ್ಷಣೆಗಳು ನಡೆದವು ಅವರ ಕಡೆ ಕೆಲವು ಕೋಪ, ಇವರ ಕಡೆ ಕೆಲವು ಕೋಪ ಇರಬಹುದು. ಇಲ್ಲಿ ರಾಜಕೀಯ ಇಲ್ಲ ಚುನಾವಣೆ ಕಾರಣವಲ್ಲ. ಚಿಕ್ಕೇಗೌಡರ ಕ್ಷೇತ್ರದಲ್ಲಿ ಬಹಳ ಜನ ಅವರ ಅಭಿಮಾನಿಗಳು ಇರುತ್ತಾರೆ ಅಂದಾಕ್ಷಣ ಎಲ್ಲರೂ ಅವರ ಪಕ್ಷದವರು ಇರಬೇಕೆಂದು ಇಲ್ಲ. ಚುನಾವಣೆಯಲ್ಲಿ ವಿರುದ್ಧವಾಗಿ ಮಾಡಿರಬಹುದು, ಅವರಿಗೆ ಒಂದು ರೀತಿ ಸೇಡು ಇರುತ್ತದೆ. ಶಾರೀರಕವಾಗಿ ಸೇಡು ತೀರಿಸಿಕೊಳ್ಳದಿದ್ದರೆ ಅವರಿಗೆ ಸಮಾಧಾನವಾಗುವುದಿಲ್ಲವೆಂದು ಕಾಣುತ್ತದೆ. ಹೋಗುವಾಗ, ಬರುವಾಗ, ನಿಮ್ಮ ಸರ್ಕಾರ ಹೋಗಿ ನಮ್ಮ ಸರ್ಕಾರ ಬಂದರೆ ಏನು ಮಾಡುತ್ತೀರೆಂದು ಹೇಳುತ್ತಾರೆ. ಆ ದಿವಸ ಒಂದು ಘಟನೆ ಪೋಲೀಸರ ಕಾವಲಿನಲ್ಲೇ ಆಯಿತೆಂದು ಹೇಳಿದರು. ಅದನ್ನು ನಾನು ಕೇಳಿದೆ. ಆ ಬಗ್ಗೆ ಹೇಳಿದರೆ ಮಾನ್ಯ ಸದಸ್ಯರು ನಗಕೂಡದು. ಅವರು ನೇಚರ್ ಕಾಲ್‌ಗೆ ಹೋಗಿದ್ದರಂತೆ. ಅದೇ ಸಮಯವನ್ನು ಇವರು ಸಾಧಿಸಿ, ಆ ಸಂದರ್ಭದಲ್ಲಿ ಒಬ್ಬರನ್ನು ಹೊಡೆದಿದ್ದಾರೆ. ಅವರಿಗೆ ಹೆಚ್ಚು ಗಾಯವೇನು ಆಗಿಲ್ಲ. ಅವರ ಬೇಡಿಕೆ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರಿಂದ ಅವರಿಗೆ ಸಮಾಧಾನವಾಗಿದೆ. ಹಗಲೂ ರಾತ್ರಿ ನಾವು ಅವರಿಗೆ ಪೋಲೀಸರ ರಕ್ಷಣೆ ಕೊಡುತ್ತೇವೆ.

ರಾಜ್ಯಪಾಲರ ಭಾಷಣಕ್ಕೆ ಮಂಡಿಸಿದ ವಂದನಾರ್ಪಣ ಪ್ರಸ್ತಾವ (ಮುಂದುವರೆದುದು)

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ಮುನ್ನ ಈ ರಾಜ್ಯದ ಜನತೆಗೂ ಹಾಗೂ ವಿರೋಧ ಪಕ್ಷದ ನಾಯಕರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ. ಏತಕ್ಕೆಂದರೆ, ಮೊದಲನೆಯದಾಗಿ ಅನೇಕ ವರ್ಷಗಳ ನಂತರ ಒಂದು ಹೊಸ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಕ್ಕೆ ಜನತೆಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ವಿರೋಧ ಪಕ್ಷದವರಿಗೆ ಏತಕ್ಕೆ ಅರ್ಪಿಸಬೇಕಾಗಿದೆ ಎಂದರೆ, ವಿರೋಧ ಪಕ್ಷದ ಮಿತ್ರರು ಚುನಾವಣೆಗೆ

ಮುನ್ನ ಬಹಳಷ್ಟು ಜನ ಮುಖ್ಯ ಮಂತ್ರಿಗಳು, ಮಂತ್ರಿಗಳು ಏನೇನೋ ಆಗಬೇಕೆಂದು ಚಿಂತನೆ ಮಾಡಿ ಈ ಪಕ್ಷಕ್ಕೆ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಶ್ರೀಮಾನ್ ಮೊಯಿಲಿಯವರು ಉತ್ತಮವಾದ ಸಲಹೆಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನು ತಮ್ಮ ಅನುಭವದಿಂದ ಕೊಟ್ಟಿರುವುದಕ್ಕೆ ಅವರಿಗೂ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಈ ಪಕ್ಷದವರು ಇನ್ನೂ ೫ ವರ್ಷಗಳ ಕಾಲ ರಾಜ್ಯಭಾರ ಮಾಡಬೇಕಾಗಿದ್ದರೆ ಸ್ವಲ್ಪ ಎಚ್ಚರಿಕೆಯಿಂದ ಆಡಳಿತ ಮಾಡಬೇಕೆಂದು ಹೇಳಿದ್ದಾರೆ. ಇದು ಅವರ ಅನುಭವದ ಮಾತು. ಈ ಪಕ್ಷದಲ್ಲಿ ಮಂತ್ರಿಗಳು, ಮುಖ್ಯ ಮಂತ್ರಿಗಳು ಆಗಬೇಕೆಂಬ ಆಪೇಕ್ಷೆಯಿಂದ ಹೇಗೆ ಈ ಪಕ್ಷದ ಜನ ಅಲ್ಲಿದ್ದವರು ಇಲ್ಲಿಗೆ ಬರುವಂತಾಯಿತು ಅದೇ ರೀತಿ ಈ ಕಡೆಯವರೂ ಕೂಡ ಆ ಪದ್ಧತಿಯನ್ನು ಅನುಸರಿಸುವುದಾದರೆ, ಇಲ್ಲಿರತಕ್ಕವರು ನಾವು ಮಂತ್ರಿಗಳು, ಅಧ್ಯಕ್ಷರಾಗಬೇಕೆಂದು ಚಿಂತಿಸುವುದಾದರೆ ಅವರು ಹೇಳಿದ ಮಾತು ಸತ್ಯವಾದೀತು.

ಒಬ್ಬರು ಮಾನ್ಯ ಸದಸ್ಯರು.--ಈ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದಾರೆ.

ಶ್ರೀ ಹೆಚ್. ಗಂಗಾಧರನ್.--ನಿಜವಾಗಿಯೂ ಈ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಏಕೆಂದರೆ ಇವತ್ತು ಅವರು ಹೇಳಿದ್ದರಲ್ಲಿ ನಿಜವಾದ ಅರ್ಥ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಗಂಗಾಧರನ್‌ರವರು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿರಬೇಕಾದರೆ ಅದರಲ್ಲಿ ಏನೋ ಇರಬಹುದೆಂದು ಅರ್ಥವಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.—ಇರಲಿಕ್ಕೆ ಸಾಧ್ಯತೆ ಇದೆ, ಅದರಲ್ಲೇನು ಅನುಮಾನ ಇಲ್ಲ. ನನ್ನ ಗೆಳೆಯರು ಆ ಸಂದೇಶವನ್ನು ಕೊಟ್ಟಾಗ ಅದು ಅವರ ಅನುಭವಕ್ಕೆ ಬಂದಿದೆ, ಅವರ ಜೊತೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಈ ದೇಶ ಗಮನಿಸುತ್ತಿದೆ. ಏಕೆಂದರೆ ಈ ದೇಶದಲ್ಲಿ ಕೂಡ, ಅದರಲ್ಲೂ ಕನ್ನಡ ನಾಡಿನಲ್ಲಿ ಸಂಜಯಗಾಂಧಿ, ರಾಜನಾರಾಯಣ್, ಚರಣಸಿಂಗ್ ಅವರಂತಹವರು ಇದ್ದಾರೆಂಬ ಅನುಮಾನಕ್ಕೆ ಜನ ಬರುತ್ತಿದ್ದಾರೆ. ಆ ಒಂದು ಕೃತ್ಯ ನಡೆದೀತು ಎಂಬ ದೃಷ್ಟಿಯಿಂದ ನಾನು ಎಚ್ಚರಿಕೆ ಕೊಟ್ಟಿದ್ದೇನೆ. ಎಲ್ಲರೂ ಮಂತ್ರಿಗಳಾಗಬೇಕೆಂದು ಅಪೇಕ್ಷೆ ಮಾಡಿ ಪ್ರಯತ್ನ ಮಾಡಿದರೆ ನಾವು ಜನತೆಗೆ ದ್ರೋಹ ಬಗೆದಂತಾದೀತು ಎಂಬ ಕಡೆಗೆ ಗಮನ ಹರಿಸಬೇಕಾಗಿದೆ. ಈ ಪಕ್ಷದ ಸರ್ಕಾರ ಉಳಿಯಲಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಜನರು ಈ ಸರ್ಕಾರವನ್ನು ಏತಕ್ಕೆ ಅಧಿಕಾರಕ್ಕೆ ತಂದದ್ದು ಎಂದರೆ. ಪಕ್ಷ ಬದಲಾಗಬೇಕೆಂದು ಅಲ್ಲ, ವ್ಯವಸ್ಥೆ ಬದಲಾಗಬೇಕೆಂದು ಆ ದೃಷ್ಟಿಯಿಂದ ಬೇರೊಂದು ಪಕ್ಷಕ್ಕೆ ಅಧಿಕಾರ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ವಿಚಾರ ಮಾಡಿದಾಗ ರಾಜ್ಯಪಾಲರ ಭಾಷಣವನ್ನು ನಾನು ಬಹಳಷ್ಟು ಮೆಚ್ಚಿಕೊಂಡಿದ್ದೇನೆಂದು ಹೇಳುವುದಕ್ಕೆ ಹೋಗುತ್ತಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಸಾಕಷ್ಟು ಬೋಧನೆಗಳಿವೆಯೇ ಹೊರತಾಗಿ ಸಾಧನೆಗಳ ವಿವರ ಇಲ್ಲ. ವಿವರಗಳಿರುವುದು ಸಾಧ್ಯವೂ ಇಲ್ಲ. ಸರ್ಕಾರ ಅಧಿಕಾರ ವಹಿಸಿಕೊಂಡ ಕೇವಲ ಒಂದು ತಿಂಗಳ ಅವಧಿಯಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿ ಮುಗಿಸಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೂ, ಒಂದೆರಡು ಸಾಧನೆಗಳಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಅದೇನೆಂದರೆ, ವಿದೇಶಗಳಿಂದ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ನಮ್ಮ ದೇಶಕ್ಕೆ ಹಣ ಕೊಟ್ಟಿರುವುದು. ಕರ್ನಾಟಕ ಮತ್ತು ಮಧ್ಯ ಪ್ರದೇಶಗಳ ಗ್ರಾಮಾಂತರ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಒದಗಿಸುವ ಸಲುವಾಗಿ ಡೆನ್ಮಾರ್ಕ್ ಸರ್ಕಾರ ೭ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅದರಲ್ಲಿ ನಮ್ಮ ರಾಜ್ಯಕ್ಕೆ ಬರುವ ಹಣ ಬರುತ್ತದೋ. ಹೋಗುತ್ತದೋ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಡೆನ್ಮಾರ್ಕ್ ಸರ್ಕಾರ ಕೊಟ್ಟಿರತಕ್ಕ ಕೊಡುಗೆ ಮತ್ತು ಸಾಧನೆಗಳ ಬಗ್ಗೆ ರಾಜ್ಯಪಾಲರು ಹೇಳಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಇದನ್ನು ಹೇಳುತ್ತಾರೆಂದು ನಾನ ನಿರೀಕ್ಷೆ ಮಾಡಿದ್ದೆ. ಆದರೆ ಅವರ ಭಾಷಣದಿಂದ ಬಂದಿದ್ದು ಬರೀ ಬೋಧನೆ. ಇತ್ತ ಆಡಳಿತ ಪಕ್ಷದವರು ಮಾಡಿದ ಕೆಲವು ಆಪಾದನೆಗಳೇನಿದ್ದವು ಅದರ ಬಗ್ಗೆ ಅವರು ಉತ್ತರ ಕೊಡಲಿಲ್ಲ. ಅವರ ಕೈಯಲ್ಲಿ ಅಧಿಕಾರ ಇದ್ದಾಗ ಏನೇನು ಮಾಡಿದ್ದಾರೆ ಎಂಬ ವಿವರಣೆ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಹಿಂದಿನ ಆಡಳಿತಪಕ್ಷ ಈ ರಾಜ್ಯಕ್ಕೆ ಏನೇನು ಅನ್ಯಾಯ ಮಾಡಿದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಬೋಧನೆಯಲ್ಲೂ ಕೆಲವು ಉತ್ತಮವಾದ ವಿಚಾರಗಳನ್ನು ತಂದಿದ್ದಾರೆ. ಆಡಳಿತ ಪಕ್ಷದ ಮಿತ್ರರು ಮತ್ತು ವಿರೋಧಪಕ್ಷದ ಮಿತ್ರರು ಮಾತನಾಡುವಂಥ ಕಾಲದಲ್ಲಿ ಪಕ್ಷಾಂತರ ನಿಷೇಧ ಶಾಸನ ತರುವುದಕ್ಕೆ

ನಿಮಗೆ ಭಯ ಇದೆ ಎಂದು ಅವರು ಅವರಿಗೆ ಭಯ ಇದೆ ಎಂದು ಇವರು ಹೇಳಿದ್ದಾರೆ. ಆದರೆ ನಾನು ಹೇಳುತ್ತಿದ್ದೇನೆ, ಇಬ್ಬರಿಗೂ ಭಯವಿದೆ ಎಂದು ನಿರ್ಭಯವಾಗಿ ಇರುವವರು ಎಂದರೆ ನಾವೇ. ಇದನ್ನು ತರತಕ್ಕದ್ದು ಸ್ವಾಗತಾರ್ಹವಾದುದಾದರೂ ಕೂಡ ದೇಶದ ಘನತೆ ಗೌರವದ ದೃಷ್ಟಿಯಿಂದ ನಮ್ಮ ರಾಜ್ಯದಲ್ಲೂ ಕೂಡ ಇಂಥ ಶಾಸನವನ್ನು ತರಬೇಕಾಯಿತಲ್ಲ ಎಂಬುದು ದುಃಖದ ಸಂಗತಿ. ಜೇಬುಗಳ್ಳರಿದ್ದಾರೆ ಎಂದು ಬೋರ್ಡ್ ಹಚ್ಚುವುದರಿಂದ ಜನರ ರಕ್ಷಣೆಯಾಗುವುದಿಲ್ಲ ಆ ರೀತಿ ಬೋರ್ಡ್ ಹಚ್ಚುವುದರಿಂದ ಅದನ್ನು ವ್ಯಕ್ತಪಡಿಸಿದಂತಾಗುತ್ತದೆ. ಹಾಗೆ ಪಕ್ಷಾಂತರ ನಿಷೇಧ ಮಸೂದೆ ತರಬೇಕಾದರೆ ಇಂಥ ಜನರು ಇದ್ದಾರೋ ಏನೋ ಎಂದು ಅನುಮಾನದಿಂದ ದೇಶದ ಜನ ನೋಡಬೇಕಾಗುತ್ತದೆ. ೭ ನೇ ವಿಧಾನಸಭೆ ಘನತೆಯುಳ್ಳ ವ್ಯಕ್ತಿಗಳಿಂದ ಕೂಡಿದೆಯೆಂಬ ಬಾವನೆ ನನಗಿದೆ. ಮಾನ ಮರ್ಯಾದೆಯುಳ್ಳ ವ್ಯಕ್ತಿ, ಘನತೆ ಗೌರವವುಳ್ಳ ವ್ಯಕ್ತಿ ಯಾವಾಗಲೂ ಕೂಡ ಜನತೆಗೆ ಕೊಟ್ಟ ಆಶ್ವಾಸನೆಗೆ ವಿರುದ್ಧವಾಗಿ ನಡೆಯಲಾರ. ಆದ್ದರಿಂದ ಈ ಪಕ್ಷದವರು ಮತ್ತು ಆ ಪಕ್ಷದವರು ಭಯ ಭಯಪಡಬೇಕಾಗಿಲ್ಲ. ಈ ಪಕ್ಷದವರು ಆ ಪಕ್ಷದವರು ರಾಜ್ಯತಂತ್ರವನ್ನು ನಡೆಸಬಹುದೇ ಹೊರತು ಕುತಂತ್ರ ಮಾಡುವ ಮಾನಗೆಟ್ಟ ಜನ ಅಲ್ಲ ಎಂಬ ಭರವಸೆ ನನಗಿದೆ. ಅಪ್ಪಿತಪ್ಪಿ ಕಾಲುಜಾರಿ ನಡೆಯುತಕ್ಕ ಜನ ಇದ್ದಾರೇನೋ ಎಂಬ ದೃಷ್ಟಿಯಿಂದ ಈ ಶಾಸನ ತರುವುದಕ್ಕೆ ಎಲ್ಲರೂ ಸಹಕರಿಸುತ್ತಾರೆಂದು ನಾನು ಭಾವಿಸಿದ್ದೇನೆ. ಇದರಲ್ಲಿ ಇನ್ನೊಂದು ಬಹಳ ಮುಖ್ಯವಾದ ಮತ್ತು ಸ್ವಾಗತಾರ್ಹವಾದ ಅಂಶ ಎಂದರೆ ಲೋಕಾಯುಕ್ತದಲ್ಲಿ ಮುಖ್ಯಮಂತ್ರಿಗಳನ್ನು ಕೂಡ ಅಳವಡಿಸತಕ್ಕದ್ದು. ಆದರೆ ಇದರಿಂದಲೇ ತೃಪ್ತಿಪಡಬೇಕಾಗಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಸರ್ಕಾರದ ಪರವಾಗಿ ಕೆಲಸ ಮಾಡತಕ್ಕ ಯಾವ ಅಧಿಕಾರಿಗಳಿದ್ದಾರೆ ಅವರನ್ನೂ ಕೂಡ ಇದರಲ್ಲಿ ಅಳವಡಿಸಬೇಕಾದ ಅಗತ್ಯವಿದೆ. ನಮ್ಮ ರಾಜ್ಯದಲ್ಲಿ ಅನೇಕ ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಅದಕ್ಕೆ ಛೇರ್ಮನ್ನರುಗಳನ್ನು ನೇಮಿಸಿರುತ್ತಾರೆ. ೧೯೭೨ ರಿಂದ ಇಲ್ಲಿಯವರೆಗೆ ಇದ್ದಂಥ ಬಿ. ಡಿ. ಎ. ಛೇರ್ಮನ್ನರುಗಳು ಏನಿದ್ದಾರೆ, ಅವರಿಂದ ಎಷ್ಟು ಬಡಜನರ ನಾಶವಾಗಿದೆ, ಎಷ್ಟು ಬಡಜನರ ರಕ್ತ ಹೀರಲ್ಪಟ್ಟಿದೆ, ಎಷ್ಟು ಕೋಟಿ ರೂಪಾಯಿ ಲೂಟಿಯಾಗಿದೆ ಎಂಬ ಬಗ್ಗೆ ಸದನದಲ್ಲಿ ಪದೇಪದೇ ಪ್ರಸ್ತಾಪ ಮಾಡಲಾಗಿದೆ. ಆದರೂ ಅವರನ್ನು ಲೋಕಾಯುಕ್ತದಲ್ಲಿ ಸೇರಿಸಿಲ್ಲ, ಅವರನ್ನು ಸೇರಿಸುವ ಶಕ್ತಿ ನಿಮಗೆ ನಿಜವಾಗಿಯೂ ಇದೆಯೋ ಎಂದು ಕೇಳಬೇಕಾಗಿದೆ. ಸಿ ಐ.ಟಿ.ಬಿ. ಛೇರ್ಮನ್ನರುಗಳನ್ನು ಲೋಕಾಯುಕ್ತದಲ್ಲಿ ಸೇರಿಸಬೇಕು.

SRI A. LAKSHMISAGAR. – All those names you have mentioned now would come under the purview of the proposed Legislation.

ಶ್ರೀ ಎಚ್. ಗಂಗಾಧರನ್.––ಅದನ್ನು ನಾನು ಸ್ವಾಗತಿಸುತ್ತೇನೆ. ಎಲ್ಲರನ್ನೂ ಅದರಲ್ಲಿ ಸೇರಿಸುವ ಅವಶ್ಯಕತೆ ಇದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಖಾಸಗಿ ಅಧ್ಯಕ್ಷರಿದ್ದಾರೆ. ಅಲ್ಲಿ ಕೋಟ್ಯಾಂತರ ರೂಪಾಯಿ ಲೂಟಿಯಾಗುತ್ತಿದೆ. ವಿಜಿಲೆನ್ಸ್ ಕೂಡ ಅಲ್ಲಿ ಹೋಗುವುದಕ್ಕೆ ಅಧಿಕಾರ ಇಲ್ಲ. ಆದ್ದರಿಂದ ಅವರನ್ನೂ ಕೂಡ ಲೋಕಾಯುಕ್ತ ದೊಳಗೆ ಅಳವಡಿಸುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.––ತಮ್ಮ ಗಮನಕ್ಕೆ ತರುತ್ತಿದ್ದೇನೆ, ಕರ್ನಾಟಕ ವಿದ್ಯುಚ್ಛಕ್ತಿ, ಮಂಡಳಿಯಲ್ಲಿ ಖಾಸಗಿ ಅಧ್ಯಕ್ಷರಿರುವುದಿಲ್ಲ. ಅಧಿಕಾರಿಗಳೇ ಅಧ್ಯಕ್ಷರಾಗಿರುತ್ತಾರೆ.

ಶ್ರೀ ಎಚ್. ಗಂಗಾಧರನ್.––ನಿವೃತ್ತ ಮುಖ್ಯ ಇಂಜಿನಿಯರ್ ಅವರನ್ನು ನೇಮಕ ಮಾಡಿದ್ದಾರೆ. ನಿವೃತ್ತರಾದಮೇಲೆ ಅವರು ಖಾಸಗಿ ಮನುಷ್ಯರೇ. ಆದ್ದರಿಂದ ಅವರನ್ನು ಈ ಶಾಸನದಡಿಯಲ್ಲಿ ತರುವುದಕ್ಕೆ ಸಾಧ್ಯವಿಲ್ಲವೆ ? ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅಧ್ಯಕ್ಷರಾಗಿದ್ದವರು ೫ ಕೋಟಿ ರೂಪಾಯಿ ಅವ್ಯವಹಾರ ನಡೆಸಿರುವ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಲಾಗಿತ್ತು. ಮಾನ್ಯ ಮೊಯಿಲಿಯವರು ಮಂತ್ರಿಗಳಾಗಿದ್ದ ಕಾಲದಲ್ಲಿ ಇದರ ಪ್ರಸ್ತಾಪವಾಗಿತ್ತು. ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಹಿಂದಿನ ಬಿ.ಡಿ.ಎ. ಅಧ್ಯಕ್ಷರ ಬಗ್ಗೆ ವರದಿ ತರಿಸಿದ್ದರೂ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಂಥವರನ್ನು ಲೋಕಾಯುಕ್ತದೊಳಗೆ ಅಳವಡಿಸದೆ ಮುಖ್ಯಮಂತ್ರಿ

ಮತ್ತು ಮಂತ್ರಿಗಳನ್ನು ಮಾತ್ರ ಅಳವಡಿಸಿದರೆ ಏನೂ ಪ್ರಯೋಜನವಿಲ್ಲ. ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲರನ್ನೂ ಇದರಲ್ಲಿ ಅಳವಡಿಸುವ ಪ್ರಯತ್ನ ಮಾಡಿದರೆ ಇದು ಸ್ವಾಗತಾರ್ಹವಾದುದು. ಕನ್ನಡಕ್ಕೆ ಅಗ್ರಸ್ಥಾನ ನೀಡುವ ಬಗ್ಗೆ ಹೇಳಿದ್ದಾರೆ. ಕನ್ನಡಕ್ಕೆ ಅಗ್ರಸ್ಥಾನ ಕೊಟ್ಟರೆ ಮಾತ್ರ ತೃಪ್ತರಾಗುವುದಕ್ಕಾಗುವುದಿಲ್ಲ. ಕನ್ನಡ ಭಾಷೆ ಮಾತ್ರವಲ್ಲ, ಕನ್ನಡತನ ಮತ್ತು ಕನ್ನಡ ಜನ ಉಳಿಯಬೇಕಾಗಿದೆ. ಇವತ್ತು ಆಗುತ್ತಿರುವ ಅನ್ಯಾಯವನ್ನು ಗಮನಿಸಬೇಕಾಗಿದೆ, ಕನ್ನಡ ಚಿತ್ರಗಳಿಗೆ ಸಬ್ಸಿಡಿ ಕೊಡುವಾಗ ಮದ್ರಾಸಿನಲ್ಲಿ ತೆಗೆದ ಚಿತ್ರಗಳಿಗೆ ಕೂಡ ಕೊಡುತ್ತಿದ್ದಾರೆ. ಕನ್ನಡ ನಾಡಿನಲ್ಲಿ ೧೦ ಸಾವಿರ ಜನ ನಿರ್ಗತಿಕರಾಗಿದ್ದಾರೆ. ಕನ್ನಡ ನಾಡಿನಲ್ಲಿರತಕ್ಕ ತಾರಕಮಂದಿರಗಳು ಬಾಗಿಲು ಮುಚ್ಚುತ್ತಿವೆ. ಕರ್ನಾಟಕದಲ್ಲೇ ಪ್ರಿಂಟಿಂಗ್. ರೆಕಾರ್ಡಿಂಗ್ ಎಲ್ಲವನ್ನೂ ಮಾಡಲು ವ್ಯವಸ್ಥೆ ಮಾಡಬೇಕು. ಕನ್ನಡ ನಾಡಿನಲ್ಲಿ ತಯಾರಾದ ಚಿತ್ರಗಳಿಗೆ ಮಾತ್ರ ಸಬ್ಸಿಡಿ ಕೊಡಬೇಕೇ ಹೊರತು ಬೇರೆ ಕಡೆ ತಯಾರಾದ ಚಿತ್ರಗಳಿಗೆ ಸಹಾಯಧನ ಕೊಡಬಾರದು. ಆ ತರಹ ಕಾನೂನನ್ನು ಕೂಡಲೇ ಜಾರಿಗೆ ತರಬೇಕು. ಇನ್ನೊಂದು ದುಃಖಕರವಾದ ವಿಚಾರ ಎಂದರೆ ಕೋಟ್ಯಾಂತರ ರೂಪಾಯಿಗಳವರೆಗೆ ಸಾರ್ವಜನಿಕ ಹಣ ಲೂಟಿಯಾಗುತ್ತಿದೆ. ನಮ್ಮ ರಾಜ್ಯದಲ್ಲಿ ಕಟ್ಟುವ ಅಣೆಕಟ್ಟುಗಳ ಕಂಟ್ರಾಕ್ಟರುಗಳು ಯಾರು ? ದೊಡ್ಡ ದೊಡ್ಡ ಕಟ್ಟಡಗಳಿಗೆ ಕಂಟ್ರಾಕ್ಟರುಗಳು ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಿಂದ ಬರಬೇಕಾಗಿದೆ. ಇದಕ್ಕೆ ಅಧಿಕಾರಿಗಳು ಕೊಡುವ ಉತ್ತರ ಎಂದರೆ ಅವರು ಸಮರ್ಥರು, ಆದ್ದರಿಂದ ಅವರಿಗೆ ಕೊಡುತ್ತೇವೆ ಎಂದು. ಅವರ ಸಾಮರ್ಥ್ಯ ಯಾವುದೆಂದರೆ ಅಧಿಕಾರಿಗಳಿಗೆ ಹೆಚ್ಚು ಪರ್ಸೆಂಟೇಜ್ ಕೊಡುವುದರಲ್ಲಿ ಅವರು ಬಹಳ ಸಮರ್ಥರು. ಈ ಸಾಮರ್ಥ್ಯಕ್ಕಾಗಿ ಬೇರೆಯವರಿಗೆ ಕಾಂಟ್ರಾಕ್ಟ್ ಕೊಟ್ಟು ಕನ್ನಡ ನಾಡಿನ ಜನರಿಗೆ ಕೆಲಸ ಸಿಗದಂತೆ ಮಾಡುವುದನ್ನು ನೋಡುತ್ತಿದ್ದೇವೆ. ವಿದ್ಯಾ ಕ್ಷೇತ್ರದಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಬಹಳ ದುಃಖದಿಂದ ಹೇಳಬೇಕಾಗಿದೆ. ನಮ್ಮಲ್ಲಿ ಸಾರ್ವಜನಿಕ ಗ್ರಂಥಾಲಯಗಳಿವೆ. ಕನ್ನಡ ನಾಡಿನ ಗ್ರಂಥಾಲಯಗಳಿಗೆ ಕನ್ನಡದ ಉತ್ತಮವಾದ ಪುಸ್ತಕಗಳನ್ನು ಸರಬರಾಜು ಮಾಡದೆ ವಿದೇಶದಿಂದ ಹಡಗಿನಲ್ಲಿ ಬಂದ ತೂಕಕ್ಕೆ ಹಾಕಿದ ಪುಸ್ತಕಗಳನ್ನು ಸರಬರಾಜು ಮಾಡುತ್ತಿದ್ದಾರೆ. ೨ ರೂಪಾಯಿ ಬೆಲೆಯ ಪುಸ್ತಕಕ್ಕೆ ೨೮ ರೂಪಾಯಿ ಎಂದು ಲೆಕ್ಕ ಹಾಕಿ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ತುಂಬಿರತಕ್ಕದನ್ನು ಕಾಣುತ್ತಿದ್ದೇವೆ. ಕೋಟ್ಯಾಂತರ ರೂಪಾಯಿಗಳು ಲೂಟಿಯಾಗಿರುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರೂ ಸರ್ಕಾರ ಗಮನ ಕೊಡಲಿಲ್ಲ. ಇದನ್ನು ಈ ಸರ್ಕಾರದವರು ತೀವ್ರವಾಗಿ ಗಮನಿಸಬೇಕಾಗಿದೆ. ಖನಿಜದ ಬಗ್ಗೆ ಹೇಳಿದ್ದಾರೆ. ನಮ್ಮ ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳ ಖನಿಜ ಉತ್ಪತ್ತಿಯಾಗುತ್ತಿದೆ. ನಮ್ಮ ದೇಶದಲ್ಲಿ ಸಿಗತಕ್ಕಂಥ ಖನಿಜಗಳು ಹೊರದೇಶಕ್ಕೆ ಹೋಗುತ್ತಿವೆ ಹೊಸಪೇಟೆಯಲ್ಲಿ ಸಿಗತಕ್ಕ ಅದಿರು ಜಪಾನಿಗೆ ಮತ್ತು ಇರಾನಿಗೆ ಹೋಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಸಿಗತಕ್ಕ ಕಲ್ಲುಗಳು ಇಟಲಿಗೆ ಹೋಗುತ್ತಿದೆ. ಕನ್ನಡ ನಾಡಿನಲ್ಲಿರತಕ್ಕ ಶಿಲ್ಪಿಗಳಿಗೆ ಅದನ್ನು ಉಪಯೋಗಿಸಿಕೊಳ್ಳಲು ಲೈಸೆನ್ಸ್ ಸಿಗುತ್ತಿಲ್ಲ. ಈ ಖನಿಜಗಳನ್ನು ಹೊರಗೆ ಸಾಗಿಸುವುದರಲ್ಲಿ ಪ್ರಭಾವಿ ವ್ಯಕ್ತಿಗಳ ಕೈವಾಡ ಇದೆ. ಕಳೆದ ಅಧಿವೇಶನದಲ್ಲಿ ನಾನು ಹೇಳಿದ್ದೆ, ವಿಜಯನಗರ ಕಾರ್ಖಾನೆ ಸ್ಥಾಪನೆ ಆಗದೇ ಇರುವುದಕ್ಕೆ ಕೆಲವು ಪ್ರಭಾವಿ ಶಕ್ತಿಗಳ ಕೈವಾಡ ಇದೆ ಎಂದು. ಈ ಪ್ರಭಾವ ಶಕ್ತಿಗಳು ಖನಿಜಗಳನ್ನು ಹೊರದೇಶಕ್ಕೆ ರಫ್ತು ಮಾಡಿ ತಮ್ಮ ಬಂಡವಾಳವನ್ನು ಬೆಳೆಸಿಕೊಳ್ಳುವುದಕ್ಕೆ ಕೇಂದ್ರಸರ್ಕಾರದ ಮೇಲೆ ಪ್ರಭಾವ ಬೀರಿ ಉಕ್ಕಿನ ಕಾರ್ಖಾನೆ ಆಗುವುದಕ್ಕೆ ಅವಕಾಶ ಕೊಡದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ.

ಈ ದಿನ ಆಮದು ಮಾಡಿಕೊಳ್ಳುವ ಜನರಿಗೆ ಬೆಂಬಲ ಕೊಟ್ಟು ಕನ್ನಡ ನಾಡಿನ ಸಂಪತ್ತನ್ನು ಸೂರೆಗೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಈ ದಿನ ಟಾಟಾ ಮತ್ತು ಬಿರ್ಲಾ ಎಂಬ ಕಂಪೆನಿಗಳು ಸೇರಿ ನಮ್ಮ ನಾಡಿನ ಸಂಪತ್ತನ್ನು ನುಂಗಿಹಾಕುತ್ತಿವೆ. ಬಿರ್ಲಾ ಕಂಪೆನಿಯವರಿಂದ ಅರಣ್ಯ ನಾಶವಾಗುತ್ತಿದೆ. ಸತ್ತವರನ್ನು ಸುಡಲು ಒಂದು ಟನ್‌ಗೆ ೪೦೦ ರೂಪಾಯಿ ಕೊಟ್ಟರೂ ಸೌದೆ ಸಿಗುವುದಿಲ್ಲ. ಆದರೆ ೧೫ ರೂಪಾಯಿ, ೨೪ ರೂಪಾಯಿ ೨೬ ರೂಪಾಯಿಗೆ ಒಂದು ಟನ್ ಸೌದೆಯನ್ನು ಬಿರ್ಲಾ ಕಂಪನಿಗೆ ಒದಗಿಸಲಾಗುತ್ತಿದೆ. ಈ ಬಗ್ಗೆ ಕಳೆದ ಸದನದಲ್ಲಿ ಗಲಾಟೆ ಮಾಡಿದಾಗ ಇದನ್ನು ೨೦೫ ರೂಪಾಯಿಗಳಿಗೆ ಏರಿಸಲಾಯಿತು. ಈಗಲೂ ಕೂಡಾ ಶಾಸನವನ್ನು ತಂದು ಸಾರ್ವಜನಿಕರಿಗೆ ಯಾವ ದರದಲ್ಲಿ ಸೌದೆಯನ್ನು ಒದಗಿಸುತ್ತಿದ್ದೀರೋ ಅದೇ ದರದಲ್ಲಿ ಇವರಿಗೂ ಸೌದೆಯನ್ನು ಒದಗಿಸಬೇಕೆಂದು ಹೇಳುತ್ತೇನೆ. ಹೀಗೆ ಮಾಡದಿದ್ದರೆ ೧ ವರ್ಷಕ್ಕೆ ೧೫ ಕೋಟಿಗಳಷ್ಟು ಹಣ ಬಿರ್ಲಾ ಕಂಪೆನಿಯಿಂದ ಬರುವುದನ್ನು ಸರ್ಕಾರ ಕಳೆದುಕೊಳ್ಳುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಕೇಂದ್ರ ಸರ್ಕಾರದ ಉದ್ಯಮದಲ್ಲಿ ಶೇಕಡಾವಾರು ಎಷ್ಟು ಜನ ಕನ್ನಡಿಗರಿದ್ದಾರೆ ? ಇದರ ಬಗ್ಗೆ ಲೆಕ್ಕ ನೋಡಬೇಕು. ಇಷ್ಟು ಹೇಳಿ ರೇಷ್ಮೆ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಬೆಳೆಯುತಕ್ಕ ರೇಷ್ಮೆಯಲ್ಲಿ ಕೇವಲ ಶೇಕಡಾ ೩೦ ಭಾಗ ರೇಷ್ಮೆ ನಮ್ಮ ದೇಶದಲ್ಲಿ ಉಪಯೋಗವಾಗುತ್ತಿದೆ, ಉಳಿದದ್ದು ಹೊರದೇಶಗಳಿಗೆ ಹೋಗುತ್ತಿದೆ. ನಮ್ಮ ದೇಶದಲ್ಲಿ ಸಾಕಷ್ಟು ರೇಷ್ಮೆ ಬೆಳೆದರೂ ಹೋದವರ್ಷ ಊಜಿ ನೊಣದ ಹಾವಳಿ ಪ್ರಯುಕ್ತ ಚೈನಾದಿಂದ ರೇಷ್ಮೆಯನ್ನು ತಂದು ಹಂಚಿದರು. ಆ ದಿನ ಸಾಕಷ್ಟು ರೇಷ್ಮೆ ಉತ್ಪಾದನೆ ಆಗಿತ್ತು. ಆದರೂ ಆಮದು ಮಾಡಿಕೊಳ್ಳಲು ಕಾರಣ ಏನು ? ಯಾವುದೋ ಒಬ್ಬ ಪ್ರಭಾವೀ ವ್ಯಕ್ತಿಯ ಪ್ರಭಾವಕ್ಕೆ ಒಳಗಾಗಿ ಚೈನಾದಿಂದ ರೇಷ್ಮೆಯನ್ನು ತರಿಸಿಕೊಳ್ಳಲಾಯಿತು. ಈ ದಿನ ನಮ್ಮಲ್ಲಿ ರೇಷ್ಮೆ ನೇಕಾರರು ತಮ್ಮ ಬಾಗಿಲು ಹಾಕುತ್ತಿದ್ದಾರೆ. ಫ್ಯಾಕ್ಟರಿಗಳನ್ನು ಮುಚ್ಚುತ್ತಿದ್ದಾರೆ. ಇದಕ್ಕೆ ಕಾರಣ ನಮ್ಮ ಟ್ಯಾಕ್ಸ್ ನೀತಿ. ನಮ್ಮಲ್ಲಿ ಉತ್ಪಾದನೆಯಾಗುವ ರೇಷ್ಮೆಗೆ ೧೦ ಪರ್ಸೆಂಟ್ ಟ್ಯಾಕ್ಸ್ ಹಾಕಲಾಗುತ್ತದೆ. ಇದೇ ರೇಷ್ಮೆ ನಮ್ಮ ಊರಿಂದ ಧರ್ಮಾವರಂ, ಕಾಂಚೀವರಂಗೆ ಹೋದರೆ ಅಲ್ಲಿ ಅದಕ್ಕೆ ಟ್ಯಾಕ್ಸ್ ಬೀಳುವುದಿಲ್ಲ. ಆದರೆ ಇಲ್ಲಿ ರೇಷ್ಮೆ ಉತ್ಪಾದಿಸಲು ಟ್ಯಾಕ್ಸ್, ಸೀರೆ ತಯಾರು ಮಾಡಿದರೆ ಟ್ಯಾಕ್ಸ್, ಸೀರೆ ಮಾರಾಟ ಮಾಡಿದರೆ ಸೇಲ್ಸ್ ಟ್ಯಾಕ್ಸ್. ಹೀಗೆ ಮಲ್ಟಿಪರ್ಪಸ್ ಟ್ಯಾಕ್ಸ್‌ನಿಂದಾಗಿ ಈ ಉದ್ಯಮ ಮುಚ್ಚುವ ಪರಿಸ್ಥಿತಿಗೆ ಬಂದಿದೆ. ಈ ಟ್ಯಾಕ್ಸ್ ಸಿಸ್ಟಮ್ ಏನಿದೆ ಅದನ್ನು ಬದಲಾವಣೆ ಮಾಡಬೇಕು. ಇನ್ನು ಊದುಬತ್ತಿ ತಯಾರು ಮಾಡುವ ಕೆಮಿಕಲ್ಸ್‌ಗೆ ಬೆಂಗಳೂರು, ಮೈಸೂರಿನಲ್ಲಿ ತಯಾರಾದುದಕ್ಕೆ ೧೦ ಪರ್ಸೆಂಟ್ ಟ್ಯಾಕ್ಸ್, ಜೊತೆಗೆ ಸರ್‌ಚಾರ್ಜ್ ಸೇರಿದರೆ ೧೧½ ಪರ್ಸೆಂಟ್ ಟ್ಯಾಕ್ಸ್ ಬೀಳುತ್ತದೆ. ಅದೇ ಮಹಾರಾಷ್ಟ್ರದಲ್ಲಿ ತಯಾರಾಗುವ ಕೆಮಿಕಲ್ಸ್‌ಗೆ ಕೇವಲ ೪ ಪರ್ಸೆಂಟ್ ಟ್ಯಾಕ್ಸ್, ಇದರಿಂದಾಗಿ ನಮ್ಮಲ್ಲಿ ಇರುವ ಕೆಮಿಕಲ್ ಕಂಪೆನಿಗಳು ಬಂದಾಗುತ್ತಿವೆ. ಇದು ಮಾರಾಟ ತೆರಿಗೆಯ ನೀತಿಯೋ ? ಖಾಲಿ ಸೀಸೆಗಳನ್ನು ತಯಾರಿಸಲು ಅದರ ಮೇಲೆ ೧೦ ಪರ್ಸೆಂಟ್ ಟ್ಯಾಕ್ಸ್ ಹಾಕುತ್ತೀರಿ, ಇದರಿಂದಾಗಿ ಈ ಕಂಪೆನಿಗಳು ಬಂದಾಗುತ್ತಿವೆ. ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಟ್ಯಾಕ್ಸ್ ನೀತಿಯ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಇದನ್ನು ಬದಲಾವಣೆ ಮಾಡುವುದರಿಂದ ನಿರುದ್ಯೋಗದ ಸಮಸ್ಯೆಯನ್ನೂ ಬಗೆಹರಿಸಿದಂತಾಗುತ್ತದೆ. ಹಾಗೂ ಕೊನೆಯದಾಗಿ ಒಂದು ಸಾಧನೆ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿರುವುದನ್ನು ಅರ್ಥ ಶಾಸ್ತ್ರದಲ್ಲಿ ಅನುಭವ ಇರುವವರು ಯಾರೂ ಒಪ್ಪಿಕೊಳ್ಳಲಾರದೆಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ ಅಕ್ಕಿಗೆ ಸಬ್ಸಿಡಿ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಈ ರಾಜ್ಯದಲ್ಲಿ ರೇಷನ್‌ಗೆ ಒಳಪಟ್ಟಿರುವ ಜನ ಕೇವಲ ೪೦ ಲಕ್ಷ ಮಾತ್ರ. ೪೦ ಲಕ್ಷ ಜನ ಮಾತ್ರ ಆಹಾರ ಪಡಿತರಕ್ಕೆ ಒಳಪಟ್ಟಿದ್ದಾರೆ. ಈ ೪೦ ಲಕ್ಷ ಜನಕ್ಕೋಸ್ಕರ ೨೫–೩೦ ಕೋಟಿ ಸಬ್ಸಿಡಿ ಹೋಗುತ್ತಿದೆ, ನಮ್ಮ ರಾಜ್ಯದಲ್ಲಿ ಬೆಳೆದ ಭತ್ತವನ್ನು ಹೊರಗಡೆ ಹೋಗದ ಹಾಗೆ ನೋಡಿಕೊಂಡು ಆಂಧ್ರ ಮತ್ತು ಒರಿಸ್ಸಾದಿಂದ ಸಾಕಷ್ಟು ಭತ್ತ ಬರುವ ಹಾಗೆ ಮಾಡಿದರೆ ಆಹಾರ ಪದಾರ್ಥಗಳ ಬೆಲೆ ತನ್ನಿಂತಾನೇ ಇಳಿಯುತ್ತದೆ ಬರೀ ಸಬ್ಸಿಡಿಯಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಈ ಒಂದು ನೀತಿಯನ್ನು ಅರ್ಥಶಾಸ್ತ್ರದ ಆಧಾರದ ಮೇಲೆ ರಚಿಸುವ ಅಗತ್ಯ ಇದೆ ಇಷ್ಟು ಹೇಳಿ ಮಾನ್ಯ ರಾಜ್ಯಪಾಲರ ಭಾಷಣ ಒಂದು ಸೂಚಕವಾಗಿದೆಯೇ ಹೊರತು ಯಾವುದೇ ಸಾಧನೆಯ ವಿವರಣೆ ಅದರಲ್ಲಿ ಇಲ್ಲವೆಂದು ಹೇಳಿ, ಸರ್ಕಾರ ಎಚ್ಚರಗೊಂಡು ಜನತೆಯ ಆಶೋತ್ತರಗಳನ್ನು ನೆರವೇರಿಸುವುದಕ್ಕೆ ಸಮರ್ಥವಾಗಲಿ ಎಂದು ಹೇಳುತ್ತೇನೆ. ಈ ಸದನದ ಎಲ್ಲರೂ ಇದನ್ನು ಒಳ್ಳೆಯ ಹೃದಯದಿಂದ ಬರಮಾಡಿಕೊಳ್ಳಲಿ ಎಂದು ಹೇಳಿ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೂ ವಂದನೆಗಳನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಲಕ್ಷ್ಮೀನರಸಿಂಹಯ್ಯ (ತುಮಕೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾಪ ಮಾಡುವಾಗ ಈ ಭಾಷಣದಲ್ಲಿ ನಮ್ಮ ರಾಜ್ಯದ ಪ್ರಗತಿಗಾಗಿ ಅನೇಕ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿರುವ ಬಗ್ಗೆ ತಿಳಿಸಿದ್ದಾರೆ. ಈ ವಿಷಯ ಮುದ್ರಿತವಾಗಿ ಎಲ್ಲರಿಗೂ ತಲುಪಿದೆ, ಇದರಲ್ಲಿ ಬಹಳ ಒಳ್ಳೆಯ ಸಲಹೆ ಸೂಚನೆಗಳು ಇವೆ. ಆದರೆ ವಿರೋಧ ಪಕ್ಷದ ನಾಯಕರು ಹಿಂದೆ ಆದಂತಹ ಕೆಲವು ವಿಷಯಗಳ ಬಗ್ಗೆ ಬಹಳವಾಗಿ ಮಾತನಾಡಿದ್ದಾರೆ. ಭೂನ್ಯಾಯ ಮಂಡಲಿಗಳಲ್ಲಿ ಆದಂತಹ ಅನ್ಯಾಯಗಳ ಬಗ್ಗೆ ಹೇಳಿ, ಸರ್ಕಾರ ಭದ್ರವಾಗಿಲ್ಲ ಅಲ್ಲಾಡುತ್ತಿದೆಯೆಂದು ಹೇಳಿದ್ದಾರೆ. ಕಾನೂನು ಮತ್ತು ನೆಮ್ಮದಿ ಇಲ್ಲ ಎನ್ನುವ ವಿಷಯವನ್ನು ಹೇಳಿ

ದ್ದಾರೆ. ನನ್ನ ಭಾಗದಲ್ಲಿ ಭೂನ್ಯಾಯ ಮಂಡಲಿಯಲ್ಲಿ ಆದ ಅನ್ಯಾಯದ ಬಗ್ಗೆ ನಾನು ಈ ಸಭೆಯ ಮುಂದೆ ಹೇಳಬಯಸುತ್ತೇನೆ. ಈ ಅನ್ಯಾಯ ಏನಾಗಿದೆ ಅದನ್ನು ಯೋಚನೆ ಮಾಡುವುದಕ್ಕೂ ಕೂಡಾ ಸಾಧ್ಯವಿಲ್ಲವಾಗಿದೆ. ನಮ್ಮ ತೋಟಕ್ಕೆ ಹೋಗುವ ದಾರಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬ ವೊಂದು ಸುಮಾರು ೫೦-೬೦ ವರ್ಷಗಳಿಂದ ತೋಟ ಮತ್ತು ಗದ್ದೆ ಎಲ್ಲವನ್ನೂ ಮಾಡಿಕೊಂಡು ಬಂದಿದ್ದಾರೆ. ಆ ಜಾಗದ ಮಾಲೀಕರು ಬೆಂಗಳೂರಿನಲ್ಲಿ ಇದ್ದಾರೆ. ಅವರು ಊರನ್ನು ಬಿಟ್ಟಿದ್ದಾರೆ. ಆ ಒಂದು ಭೂಮಿಯ ವಿವಾದ ಭೂನ್ಯಾಯ ಮಂಡಲಿಯ ಮುಂದೆ ಇತ್ತು. ಈ ಭೂಮಿಯ ಪಹಣಿ ಯಾರ ಹೆಸರಿನಲ್ಲಿ ಇತ್ತೋ ಆ ಮನುಷ್ಯ ಸತ್ತುಹೋಗಿದ್ದಾನೆ. ಆದರೆ ಅವರ ಅಣ್ಣತಮ್ಮಂದಿರ ಮಕ್ಕಳು ಬಹಳ ಜನರು ಇದ್ದಾರೆ. ಈ ಜಮೀನಿಗೆ ವಾರಸುದಾರರು ಇಲ್ಲ ಎಂದು ಭೂನ್ಯಾಯ ಮಂಡಲಿಯಲ್ಲಿ ತೀರ್ಮಾನ ಮಾಡಿ ವಾಪಸ್ ಮಾಲೀಕರಿಗೆ ಕೊಡಬೇಕೆಂದು ಹೇಳಿದ್ದಾರೆ. ೫-೬ ಲಕ್ಷ ರೂಪಾಯಿಯ ಈ ಭೂಮಿಯನ್ನು ಕೇವಲ ೪೦ ಸಾವಿರ ರೂಪಾಯಿಗೆ ಒಬ್ಬ ಬೇನಾಮಿ ಹೆಸರಿಗೆ ಬರೆಸಿ ಅವರವರೇ ಹಂಚಿಕೊಳ್ಳುವ ವ್ಯವಸ್ಥೆ ಮಾಡುತ್ತಿದ್ದಾರೆ. ಭೂಮಾಲೀಕರ ಸಂಬಂಧಿಗಳು ಹೈಕೋರ್ಟಿನಿಂದ ಸ್ಟೇಯನ್ನು ಪಡೆದಿದ್ದರೂ ಕೂಡಾ ಈ ದಿನ ಆ ಜಮೀನು ಮಾಡಿಕೊಂಡು ಬಂದಿರುವ ವ್ಯಕ್ತಿ ಜಮೀನಿನ ಒಳಗೆ ಹೋಗುವುದಕ್ಕೆ ಅವಕಾಶವಾಗುತ್ತಿಲ್ಲ.

೧ ಪಿ.ಎಂ.

ಭೂ ಮಾಲೀಕರ ಕಡೆಯವರು ಕಾನೂನಿಗೆ ವಿರುದ್ಧವಾಗಿ ಇದನ್ನೆಲ್ಲಾ ಮಾಡುವುದುಬೇಡ ಎಂದರೂ, ನೀವು ಸುಮ್ಮನೆ ಬರೆದುಕೊಡಿ, ಮಿಕ್ಕಿದ್ದೆಲ್ಲಾ ನಾವು ನೋಡಿಕೊಳ್ಳುತ್ತೇವೆಂದು ಹೇಳಿ ಈ ರೀತಿಯ ವ್ಯವಹಾರ ಮಾಡಿದ್ದಾರೆ. ಭೂನ್ಯಾಯ ಮಂಡಲಿಯ ಅಧ್ಯಕ್ಷರೂ ಕೂಡ ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವಿರುದ್ಧವಾಗಿ ವ್ಯಕ್ತಪಡಿಸಿದ್ದಾರೆ. ಭೂ ನ್ಯಾಯ ಮಂಡಲಿಯ ಸದಸ್ಯರ ಒಂದು ಕುತಂತ್ರದಿಂದ ಇದೆಲ್ಲಾ ನಡೆದಿದೆ. ಭೂ ನ್ಯಾಯದ ಹಕ್ಕು ಯಾರು ಪಡೆಯಬೇಕಾಗಿತ್ತೊ, ಅವರಿಗೆ ಹಕ್ಕು ಸಿಕ್ಕದೇ ಬೇರೆಯವರು ಅದನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಇಂಥ ಪ್ರಕರಣಗಳು ರಾಜ್ಯದಲ್ಲಿ ನೂರಾರು ನಡೆದಿರಬಹುದು. ಇವುಗಳ ಬಗ್ಗೆ ನಮ್ಮ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನ್ಯಾಯವಾಗಿರತಕ್ಕ ಗೇಣಿದಾರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಈ ಸರ್ಕಾರ ಭದ್ರವಾಗಿಲ್ಲ. ಅಲ್ಲಾಡುತ್ತಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ ಅವರು ಎಲ್ಲಿ ಅಲ್ಲಾಡಿಸಿ ನೋಡಿದರೋ ನನಗೆ ಗೊತ್ತಿಲ್ಲ. ಜನತಾಪಕ್ಷ ಜನತೆಯ ಇಚ್ಛೆ ಮೇಲೆ ಅಧಿಕಾರಕ್ಕೆ ಬಂದಿದೆ, ಜನತೆಯ ಇಚ್ಛೆಯನ್ನು ಅರಿತುಕೊಂಡು ಬಂದಿರುವ ಸದಸ್ಯರನ್ನು ಯಾವ ಒಬ್ಬ ಸದಸ್ಯನೂ ಅಲ್ಲಾಡಿಸುವುದಕ್ಕಾಗುವುದಿಲ್ಲ. ಅದರಲ್ಲಿಯೂ ಹೊಸದಾಗಿ ಬಂದಿರತಕ್ಕ ಸದಸ್ಯರನ್ನು ಯಾರೂ ಕೂಡ ಅಲ್ಲಾಡಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೊಸದಾಗಿ ಆರಿಸಿ ಬಂದಿರತಕ್ಕ ಸದಸ್ಯರ ಪರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕಾನೂನು ವ್ಯವಸ್ಥೆ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಕಾನೂನು ವ್ಯವಸ್ಥೆಯ ಬಗ್ಗೆ ಪೋಲೀಸಿನವರನ್ನು ದುರುಪಯೋಗಪಡಿಸಿಕೊಂಡ ಬಗ್ಗೆ, ನಾನು ಜನತಾ ಪಕ್ಷದ ಸದಸ್ಯನಾಗಿದ್ದಾಗ, ೧೯೭೮ನೇ ಇಸವಿಯಲ್ಲಿ. ಶ್ರೀಮತಿ ಇಂದಿರಾಗಾಂಧಿಯವರನ್ನು ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಇವರ ಗೊಂಡಾವೃತ್ತಿಗೆ ಮತ್ತು ದಬ್ಬಾಳಿಕೆಗೆ ಒಳಗಾದವರಲ್ಲಿ ನಾನು ಮತ್ತು ನನ್ನ ಕುಟುಂಬವೂ ಒಂದು ಕ್ಯಾತಸಂದ್ರದ ರೈಲ್ವೇ ಗೇಟ್ ಹಾಳು ಮಾಡಿ, ಬೇಕಾದಷ್ಟು ಪೆಟ್ರೋಲ್ ಬಂಕುಗಳನ್ನು ಅಂಗಡಿ ಮುಂಗಟ್ಟುಗಳನ್ನು ಲೂಟಿ ಮಾಡಿದರು. ನಮ್ಮ ಮನೆ ಕ್ಯಾತಸಂದ್ರದಿಂದ ಒಂದು ಕಿಲೋಮೀಟರ್ ದೂರದಲ್ಲಿದೆ ನಮ್ಮ ಹಳ್ಳಿಯಲ್ಲಿ ೭-೮ ಮನೆಗಳು ಮಾತ್ರ ಇವೆ. ನಾನು ತುಮಕೂರು ಜಿಲ್ಲೆಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದೆ, ನಾನು ಗಲಾಟೆ ನಡೆಯಬಹುದೆಂದು ಊಹಿಸಿ, ಮುಂಚಿತವಾಗಿ ನಮಗೆ ರಕ್ಷಣೆ ಬೇಕೆಂದು ಪೋಲೀಸಿನವರಿಗೆ ಸೂಚನೆ ಕೂಡ ಕಳಸಿದ್ದೆ. ಆದರೂ ೪೦೦ ಜನರ ಗುಂಪು ನಮ್ಮ ಮನೆಯ ಮೇಲೆ ದಾಳಿ ಮಾಡಿದರು ನಾನೂ ಒಂದು ಕಡಿಮೆ ಬೆಲೆಯ ವಾಹನವನ್ನು ಇಟ್ಟುಕೊಂಡಿದ್ದೆ, ಅದಕ್ಕೆ ಬೆಂಕಿ ಹಚ್ಚಿದರು ಮನೆಯ ಬಾಗಿಲು ಕಿಟಕಿಗಳನ್ನು ಒಡೆದುಹಾಕಿದರು. ವಯಸ್ಸಾದ ನನ್ನ ತಾಯಿಯ ತಾಳಿ ಕಿತ್ತುಹಾಕಿದರು

ನನ್ನನ್ನು ಪ್ರಜ್ಞೆ ತಪ್ಪುವವರೆಗೂ ಹೊಡೆದು ಹೋದರು. ಇವತ್ತು ನಮ್ಮ ಸುತ್ತಮುತ್ತ ಯಾವದೇ ಒಂದು ಸಣ್ಣ ಶಬ್ದವಾದರೂ ನಮ್ಮ ಮನೆಯವರು ಬೆಚ್ಚಿ ಬೀಳುತ್ತಾರೆ. ಆಗ ಮಾನ್ಯ ಮುಖ್ಯ ಮಂತ್ರಿಯವರಾಗಿದ್ದ ದೇವರಾಜ ಅರಸು ಅವರ ಅಳಿಯ ಅಂದು ರಾಯಭಾರಿಯಾಗಿ ಬಂದಿದ್ದರು. ಸುಮಾರು ೨೯–೩೦ ಕೇಸುಗಳನ್ನು ಹಾಕಿದ್ದರು. ನಂತರ ರಾಜಕೀಯ ದುರುದ್ದೇಶದಿಂದ ಹಾಕಿರತಕ್ಕ ಕೇಸುಗಳು ಎಂದು ವಾಪಸ್ಸು ತೆಗೆದುಕೊಂಡರು. ಈ ರೀತಿ ನಡೆದಂಥ ಘಟನೆಗಳನ್ನು ತನಿಖೆ ಮಾಡು ವುದಕ್ಕಾಗಿ ಒಂದು ಕಮೀಷನ್ ನೇಮಕ ಮಾಡಿದಾಗ ಆ ಕಮೀಷನ್ ಮುಂದೆ ಯಾರು ಕೂಡ ಬಂದು ಸಾಕ್ಷಿ ಹೇಳಲಿಲ್ಲ. ಇದಕ್ಕೆ ಕಾರಣವೇನೆಂದರೆ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಿದ್ದರಿಂದ ಸಾಕ್ಷಿ ಹೇಳುವುದಕ್ಕೆ ಯಾರೂ ಮುಂದೆ ಬರಲಿಲ್ಲ.

ಮತ್ತೆ ನಮ್ಮ ವಿರೋಧ ಪಕ್ಷದ ಸದಸ್ಯರು ಪಕ್ಷಾಂತರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ತಾವು ಮಾಡಿದ್ದೆ ಪ್ರಜಾಪ್ರಭುತ್ವದ ನೀತಿಯೆಂದು ಅವರಿಗೆ ಕಾಣಿಸುತ್ತಿದೆ. ಪ್ರಜಾಪ್ರಭುತ್ವದಲ್ಲಿ ನಮಗೆ ನೀತಿ ನಿರೂಪಣೆ ಮಾಡಬೇಕಾಗಿಲ್ಲ. ಜನತೆಯಿಂದ ಆರಿಸಿ ಬಂದಂಥ ಸದಸ್ಯರಿಗೆ ನಾವು ಹೇಗೆ ನಡೆದು ಕೊಳ್ಳಬೇಕೆಂಬ ಅರಿವು, ಪ್ರಜ್ಞೆ ಇದ್ದರೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವ ಪದ್ಧತಿಗೆ ಅನುಗುಣವಾಗಿ ನಗರಸಭೆಗಳ, ಮುನಿಸಿಪಾಲಿಟಿಗಳ, ಸಹಕಾರ ಸಂಘಗಳ ಚುನಾವಣೆಗಳನ್ನು ಮಾಡಬೇಕಾಗಿತ್ತು. ಆದರೆ ಹಿಂದಿನ ಸರ್ಕಾರ ಚುನಾವಣೆಗಳನ್ನು ಏತಕ್ಕೆ ಮಾಡಲಿಲ್ಲ ? ಅವರ ಪಕ್ಷ ದಲ್ಲಿಯೇ ಇದುವರೆವಿಗೂ ಒಂದೂ ಕೂಡ ಚುನಾವಣೆಗಳು ನಡೆದಿಲ್ಲ ಎನ್ನುವ ವಿಷಯವನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಮನಗಾಣಬೇಕೆಂದು ಹೇಳುತ್ತೇನೆ.

ಇನ್ನು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವ ಬಹಳ ಇದೆ ''ಈ ದಿಸೆಯಲ್ಲಿ ನನ್ನ ಸರ್ಕಾರವು ಅಣು ವಿದ್ಯುತ್ ಸ್ಥಾವರವೊಂದನ್ನು ನಮ್ಮ ರಾಜ್ಯದಲ್ಲಿ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸ ಲಾಗುವುದು. ಈ ಬಗ್ಗೆ ಪೂರ್ವ ಭಾವಿ ಸಮೀಕ್ಷೆ ಈಗಾಗಲೇ ನಡೆದಿದೆ. ಕಡಿಮೆ ವೆಚ್ಚದಲ್ಲಿ ಎಲ್ಲ ಮೂಲಗಳಿಂದ ದೊರೆಯಬಹುದಾದ ವಿದ್ಯುತ್‌ನ್ನು ಪಡೆಯುವ ಬಗ್ಗೆ ಚಿಕ್ಕ ಹಾಗೂ ಸಣ್ಣ ಪ್ರಮಾಣದ ಜಲವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವುದು ನನ್ನ ಸರ್ಕಾರದ ಆಶಯವಾಗಿದೆ'' ಎನ್ನುವ ಅಂಶವನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಬೃಹದಾಕಾರವಾಗಿರುವ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರದವರು ಸ್ವಯಂ ಉದ್ಯೋಗಾವಕಾಶಗಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶರಣಪ್ಪ ಭಿಂಷ (ಶಹಬಾದ್).—ಮಾನ್ಯ ಅಧ್ಯಕ್ಷರೇ, ೨೪ನೇ ತಾರೀಖಿನ ದಿವಸ ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಸರ್ಕಾರದ ನೀತಿ ನಿರೂಪಣೆಗಳನ್ನೂ, ರೂಪರೇಷೆಗಳನ್ನು ಮತ್ತು ಕರ್ನಾಟಕ ಜನತೆಗೆ ಅನೇಕ ಆಶೋತ್ತರಗಳನ್ನು ವಿವರಿಸಿ ಹೇಳಿದ್ದಾರೆ. ಮೊಟ್ಟ ಮೊದಲಿಗೆ ನಮ್ಮ ರಾಜ್ಯದಲ್ಲಿ ಹೊಸ ಸರ್ಕಾರ ಬಂದಿರುವುದಕ್ಕಾಗಿ ಸ್ವಾಗತ ಮಾಡಬೇಕಾಗಿದೆ. ಏಕೆಂದರೆ, ಈ ರಾಜ್ಯದಲ್ಲಿ ಕಾಂಗ್ರೆಸ್ ಬಿಟ್ಟು ಬೇರೆ ಯಾವುದೇ ಪಕ್ಷವೂ ಅಧಿಕಾರಕ್ಕೆ ಬರುವುದಿಲ್ಲವೆಂಬ ಶಂಕೆ ಇತ್ತು. ಇದಕ್ಕೆ ಕಾರಣವೇನೆಂದರೆ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಶ್ರೀಸ್ಟೀಫನ್ ನಿಂತು ಗೆದ್ದುಹೋದರು. ಜನತೆಯಲ್ಲಿ ಕಾಂಗ್ರೆಸ್ ಮಬ್ಬು ಚನ್ನಾಗಿ ಬೇರೂರಿತ್ತು. ಆದರೆ, ಇವತ್ತು ಕರ್ನಾಟಕದ ಜನತೆ ಕಾಂಗ್ರೆಸ್ ಸರ್ಕಾರದ ಆಡಳಿತದಿಂದ ಬೇಸತ್ತು. ಇಂದು ನಮ್ಮ ರಾಜ್ಯಕ್ಕೆ ಹೊಸ ಸರಕಾರವನ್ನು ಕೊಟ್ಟಿದ್ದಾರೆ, ಹೊಸ ಸರ್ಕಾರ ರಚನೆ ಮಾಡಬೇಕಾದರೂ ಜನತಾ ಪಕ್ಷಕ್ಕೆ ೧೧೩–೧೨೦ ಸೀಟುಗಳ ಸ್ಪಷ್ಟ ಬಹುಮತ ಬಂದಿಲ್ಲ. ಹಲವಾರು ಪಕ್ಷಗಳು ಬೆಂಬಲ ಕೊಟ್ಟು ಕಾಂಗ್ರೆಸ್ಸೇತರ ಸರ್ಕಾರ ರಚನೆ ಮಾಡುವುದಕ್ಕೆ ಅವಕಾಶ ಕೊಟ್ಟಿವೆ. ಸರ್ಕಾರ ಒಂದು ಪಕ್ಷ ತಪ್ಪಿ ನಡೆದರೆ, ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಮಾನ್ಯ ರಾಜ್ಯಪಾಲರು ಅನೇಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯದ ಕಾರ್ಮಿಕ ವರ್ಗದ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ರೈತರ ಬಗ್ಗೆ, ಹೀಗೆ ಅನೇಕ ಸಮಸ್ಯೆಗಳ ಬಗ್ಗೆ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಕಾರ್ಮಿಕರ ಅಭಿವೃದ್ಧಿ ಬಗ್ಗೆ ಕಳೆದ ಎರಡೂವರೆ ತಿಂಗಳ ಆಳ್ವಿಕೆ ಯಲ್ಲಿ ನಾವು ಕಂಡಿದ್ದು ಏನು ? ಹೋರಾಟಗಳು ಮೊದಲಿನಿಂದಲೂ ನಡೆದಿವೆ. ಈ ಹೋರಾಟ ಗಳೆಲ್ಲವೂ ಅವರ ಸಂಬಳಕ್ಕಾಗಿ, ಅವರ ಸಾಮಾಜಿಕ ಜೀವನದ ಉನ್ನತಮಟ್ಟಕ್ಕಾಗಿ ಕಾರ್ಮಿಕ ವರ್ಗದ

ಬಗ್ಗೆ ಹಳೇ ಸರ್ಕಾರ ಅನುಸರಿಸಿಕೊಂಡುಬಂದಂಥ ನೀತಿಯನ್ನು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆಂದು ನನಗೆ ಅನಿಸುತ್ತಿದೆ. ಮಾನ್ಯ ರಾಮಚಂದ್ರರಾವ್ ಅವರು ಕೃಷಿ ಕಾರ್ಮಿಕರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಸರ್ಕಾರದಿಂದ ಸರಿಯಾದಂಥ ಅಂಕಿಅಂಶಗಳು ಬರಲಿಲ್ಲ. ಇವೊತ್ತು ೧೩–೧೪ ಸಾವಿರ ಜನ ಪೋಸ್ಟ್ ಗ್ರಾಜ್ಯುಯೇಟ್, ಗ್ರಾಜ್ಯುಯೇಟ್ಸ್ ಸ್ವೈಫಂಡರಿಯಲ್ಲಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಬರೀ ಹೇಳಿಕೆಗಳು ಬರುತ್ತಿವೆಯೇ ಹೊರತು ಈ ಭಾಷಣದಲ್ಲಿ ಅವರ ಬಗ್ಗೆ ಏನು ಬಂದಿಲ್ಲ. ಈ ದೇಶದಲ್ಲಿ, ಈ ರಾಜ್ಯದಲ್ಲಿ ಸಾವಿರಾರು ಜನ ವಿದ್ಯಾವಂತರು ಕೆಲಸ ಇಲ್ಲದೇ ಇದ್ದಾಗ ಸರ್ಕಾರ ತಮ್ಮ ಭಾಷಣದಲ್ಲಿ ಏನು ಹೇಳುತ್ತಿದ್ದಾರೆ ಎಂದರೆ, ಅವರಿಗಾಗಿ ಉನ್ನತ ಭವಿಷ್ಯ ರೂಪಿಸುತ್ತಿದ್ದೇವೆ ಮುಂದೆ ನೌಕರಿ ಕೊಡುತ್ತೇವೆಂದು ಹೇಳುತ್ತಿದ್ದಾರೆ, ನೌಕರಿಯನ್ನು ಯಾವರೀತಿಯಿಂದ ಕೊಡುತ್ತೇವೆಂದು ಹೇಳಿಲ್ಲ. ನೌಕರಿಗಳನ್ನು ಕೊಡಬೇಕಾದರೆ ಕಾರ್ಖಾನೆಗಳು ಬೇಕಾಗುತ್ತವೆ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದ ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ಸಿಮೆಂಟ್ ಕಾರ್ಖಾನೆಗಳು ಆಗಿದ್ದರೂ ಸಹ ಅಲ್ಲಿ ಇನ್ನೂ ಹೇರಳವಾಗಿ ಲೈಮ್ ಸ್ಟೋನ್ ಇದೆ. ಸರ್ಕಾರ ಹೊಸ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸುವ ಬಗ್ಗೆ ಯಾವುದೇ ರೀತಿಯಲ್ಲಿ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಇನ್ನು ನೀರಾವರಿ ಬಗ್ಗೆ ಯಾವುದೇ ಒಂದು ವಿಚಾರ ಇದರಲ್ಲಿ ಬರಲಿಲ್ಲ. ಇನ್ನು ಕ್ಯಾಪಿಟೇಷನ್ ಫೀ ಬಗ್ಗೆ ವಿರೋಧ ಪಕ್ಷದಲ್ಲಿದ್ದಾಗ ಒಂದು ದೊಡ್ಡ ಗುಲ್ಲನ್ನು ಎಬ್ಬಿಸಿದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಕ್ಯಾಪಿಟೇಷನ್ ಫೀ ತೆಗೆಯುವ ಬಗ್ಗೆ ಯಾವ ಒಂದು ಪ್ರಚಾರದ ಚರ್ಚೆ ಇವರಲ್ಲಿ ಇಲ್ಲ. ಕಸ್ತೂರ್ ಬಾ ಮೆಡಿಕಲ್ ಕಾಲೇಜ್ ಬಗ್ಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. ಪ್ರೈವೇಟ್ ಕಾಲೇಜುಗಳವರು ವಿದ್ಯಾರ್ಥಿಗಳಿಗೆ ನಾಲ್ಕೂವರೆ ವರ್ಷದೊಳಗೆ ೩೪ ಸಾವಿರ ರೂಪಾಯಿ ಖರ್ಚು ಮಾಡುವಾಗ ಸರ್ಕಾರಿ ಕಾಲೇಜುಗಳಲ್ಲಿ ಓದುವವರು ಸುಮಾರು ೧೦ ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಈ ಅವ್ಯವಸ್ಥೆಯ ಬಗ್ಗೆ ಹೊಸ ಸರ್ಕಾರ ಬಂದನಂತರ ಒಂದು ದೊಡ್ಡ ಮೂವ್‌ಮೆಂಟ್ ನಡೆದಿದೆ. ಹಳೇ ರಾಜಕೀಯ ಮಾಡುವಂತ ನಾಯಕರು ಹಿಂದೆ ಅನುಸರಿಸುತ್ತಿದ್ದಂತೆ ಪದ್ಧತಿಯ ಬಗ್ಗೆ ಎಚ್ಚರಿಕೆ ವಹಿಸಿದರೆ ಜನರ ಭವಿಷ್ಯ ಉತ್ತಮಗೊಳ್ಳುತ್ತದೆ. ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೆಲವು ಯೋಜನೆಗಳ ಬಗ್ಗೆ ಹೇಳಿದ್ದಾರೆ. ಥಿಂಕ್ ಬ್ಯಾಂಕ್ ಎಂದು ಹೇಳಿದ್ದಾರೆ. ಬ್ಯೂರೋಕ್ರಾಟ್ಸ್ ಕೈಯಲ್ಲಿ ರಾಜಕೀಯ ಕೊಟ್ಟು ನಿಮ್ಮ ತಲೆಯನ್ನು ಕೂಡ ಕೊಟ್ಟರೆ ಜನರ ಪ್ರತಿನಿಧಿಗಳಾಗಿ ಬಂದಿರುವ ನಾವು ಅವರ ಕೈಯಲ್ಲಿ ನುಚ್ಚು ನೂರಾಗುತ್ತೇವೆ ಎಂದು ಹೇಳುತ್ತೇನೆ. ಇನ್ನು ಸರ್ಕಾರದ ಎಫಿಷಿಯನ್ಸಿ ಬಗ್ಗೆ ಹೇಳಬೇಕೆಂದರೆ ಎಂ.ಎಲ್.ಎ. ಕೆ.ಬಿ. ಶಾನಪ್ಪ ಆಯ್ಕೆಯಾಗಿ ಬಂದಿರತಕ್ಕದ್ದು, ಗೆಜಿಟ್ ನೋಟಿಫಿಕೇಷನ್ ಆಗಿದೆ. ಇವರ ಎಫಿಷಿಯೆನ್ಸಿ ಎಷ್ಟು ಅಂದರೆ, ಟೆಲಿಫೋನ್ ಡೈರೆಕ್ಟರಿಯಲ್ಲಿ ಶರಣಪ್ಪ ಭೈರಿ ಎಂದು ಕೊಡುತ್ತಿದ್ದಾರೆ. ನಾನು ಸೆಕ್ರೆಟರಿಗೆ ಅಪ್ಲಿಕೇಷನ್ ಕೊಟ್ಟಿದ್ದೇನೆ, ಈ ರೀತಿ ಆದರೆ ಎಫಿಷಿಯೆಂಟ್ ಗವರ್ನ್‌ಮೆಂಟ್ ಏನು ಕೊಡುತ್ತಾರೆ ಎಂದು ಕೇಳಬೇಕಾಗಿದೆ? ಇವೊತ್ತು ಕೆಲವು ಮಿನಿಸ್ಟರ್‌ಗಳು ಅದೇ ಪದ್ಧತಿ ಇಟ್ಟುಕೊಂಡಿದ್ದಾರೆ. ಇವೊತ್ತು ಒಬ್ಬ ಮಂತ್ರಿಗಳನ್ನು ನೂರಾರು ಜನ ಭೇಟಿ ಮಾಡುವುದು ಇರುತ್ತದೆ. ಹಾಗೆ ನಾವುಗಳು ಸಹ ಭೇಟಿ ಮಾಡುವಂತಾದ್ದು ಇರುತ್ತದೆ. ನಾವು ಭೇಟಿಯಾದ ಸಂದರ್ಭದಲ್ಲಿ ಕೆಲವು ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಬೇಕು. ಪ್ರತಿಯೊಂದು ಕ್ಷೇತ್ರದ ಸಮಸ್ಯೆಯನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಸಾಮಾನ್ಯ ಮನುಷ್ಯರ ಜೊತೆ ಮಾತನಾಡಿದ ಹಾಗೆ ಮಾತನಾಡಿ ಕಳುಹಿಸಿದರೆ ನಾವು ಅವರಿಗೆ ಏನೂ ಹೇಳಲಿಕ್ಕೆ ಆಗುವುದಿಲ್ಲ. ನಮ್ಮ ಕ್ಷೇತ್ರದ ಸಮಸ್ಯೆ ಏನು ಎಂದು ಸರ್ಕಾರದ ಗಮನಕ್ಕೆ ತರಲಿಕ್ಕೆ ಆಗುವುದಿಲ್ಲ. ರಾಜಕೀಯ ವಿಚಾರದಲ್ಲಿ ಒಂದು ಬದಲಾವಣೆ ಬರಬೇಕು. ಇದು ಬರದೇ ಇದ್ದರೆ ತಾವು ಸ್ವಚ್ಛ ಸರ್ಕಾರವನ್ನು ಹೇಗೆ ಕೊಡುತ್ತೀರಾ ? ಇನ್ನು ತಾವು ಕರಪ್‌ಷನ್ ತೆಗೆಯಲಿಕ್ಕೆ ಲೋಕಾಯುಕ್ತವನ್ನು ರಚಿಸುತ್ತೇವೆಂದು ಹೇಳುತ್ತಿದ್ದೀರಿ. ನನಗೆ ತಿಳಿದಮಟ್ಟಿಗೆ ಬಂಡವಾಳಶಾಹಿ ಸಮಾಜದ ಆರ್ಥಿಕ ಚೌಕಟ್ಟಿನಲ್ಲಿ ನಡೆಯುವಂಥ ಪ್ರತಿಯೊಂದು ಸರ್ಕಾರದಲ್ಲೂ ಈ ಕರಪ್‌ಷನ್ಸ್ ಇದೆ. ಅದಕ್ಕಾಗಿ ಒಬ್ಬ ದೊಡ್ಡ ನಾಯಕರು ಈ ರೀತಿ ಹೇಳಿದ್ದಾರೆ. "Capitatism is the back-bone of the corruption" ಎಂದು. ಪ್ರತಿಯೊಂದು ಕಡೆಯೂ ಕರಪ್‌ಷನ್ಸ್ ಇರುತ್ತದೆ. ನೀವು ಕರಪ್‌ಷನ್ಸ್ ತೆಗೆಯಲಿಕ್ಕೆ ಲೋಕಾಯುಕ್ತವನ್ನೇ ಮಾಡಿ, ನೂರಾರು ಆಯುಕ್ತ ಮಾಡಿದರೂ ಅದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಬಹುದೇ ಹೊರತು ಸಂಪೂರ್ಣವಾಗಿ ತೆಗೆಯಲಿಕ್ಕೆ ಆಗುವುದಿಲ್ಲ. ಇವೊತ್ತು ನಮ್ಮ ಪಕ್ಷದವರು ಹೊಸ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದೇವೆ. ಬಿ.ಜೆ.ಪಿ. ನಾಯಕರು

ಈ ಸರ್ಕಾರವನ್ನು ಹೊಗಳಿದ್ದು ನೋಡಿದರೆ ಜನತಾ ಪಕ್ಷದವರು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಇವೊತ್ತು ಬಹಳ ಗದ್ದಲದಲ್ಲಿದ್ದೀರಿ. ತಮ್ಮಲ್ಲಿ ಇದ್ದವರು ಹೊರಗೆ ಹೋಗಿದ್ದಾರೆ ಎನ್ನುವ ಶಂಕೆ ಜನರಲ್ಲಿ ಬಂದಿದೆ. ತಾವು ಸರಿಯಾದ ಕ್ರಮಗಳನ್ನು ತೆಗೆದುಕೊಂಡು ಜನರ ಭಾವನೆಗಳನ್ನು ತಮ್ಮಲ್ಲಿ ಕ್ರೋಢೀಕರಿಸದೆ ಇದ್ದರೆ ತಮ್ಮದು ಮಾದರಿಯಾಗುವುದಿಲ್ಲ. ನಾವು ಕೊಟ್ಟ ಸಲಹೆಗಳನ್ನು, ತಾವು ಕೊಟ್ಟಿರತಕ್ಕ ಪ್ರಾಮಿಸ್‌ಗಳನ್ನು ಪೂರ್ತಿಗೊಳಿಸಿ ಕರ್ನಾಟಕದ ಜನತೆಗೆ ಸಹಿ ನೆಸಪನ್ನು ಮರೆಸುವಂತೆ ಮಾಡುತ್ತೀರೆಂದು ಹೇಳಿ ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಧಾನಮಂಡಲ ದಲ್ಲಿ ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೇಲೆ ಮಾತನಾಡುತ್ತಾ ಅನಿವಾರ್ಯವಾಗಿ ನಾನು ವಿರೋಧವನ್ನು ವ್ಯಕ್ತಪಡಿಸಬೇಕಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಅನೇಕ ಮಾನ್ಯ ಹಿರಿಯ ಸದಸ್ಯರು ತಮ್ಮ ತಮ್ಮ ಶೈಲಿಗಳಲ್ಲಿ ತಮ್ಮ ತಮ್ಮ ವಿಚಾರಧಾರೆಗಳನ್ನು ಇಲ್ಲಿ ಚೆಲ್ಲಿದ್ದಾರೆ.

ಮಾನ್ಯ ರಾಜ್ಯಪಾಲರ ಭಾಷಣದ ವರದಿಯನ್ನು ನೋಡುವಾಗ ನಾನು ಬಹಳ ಆಸಕ್ತಿಯಿಂದ ಪ್ರತಿಯೊಂದು ಅಂಶಗಳನ್ನೂ ಕೂಲಂಕಷವಾಗಿ ವಿಚಾರ ಮಾಡಿ ನೋಡಿದೆ. ಬಹುಶಃ ಈ ಹೊಸ ಸರ್ಕಾರ ಬಂದಮೇಲೆ ಹೊಸ ವಿಚಾರಗಳನ್ನು ಮಂಡಿಸಿದ ಮೇಲೆ ಇದರಲ್ಲಿ ಯಾವುದಾದರೂ ಕಾರ್ಯ ರೂಪಕ್ಕೆ ಬರಬಹುದೆಂದು ಸುಮಾರು ೧೦ ಪೇಜುಗಳ ಭಾಷಣವನ್ನೆಲ್ಲಾ ಅವಲೋಕಿಸಿದರೂ ಇದರಲ್ಲಿ ಒಂದು ಪೇಜಿನ ಕೆಲಸ ಕೂಡ ಆಗಿಲ್ಲ. ಈ ಎರಡು ತಿಂಗಳಲ್ಲಿ ಅಷ್ಟೊಂದು ಕೆಲಸ ಆಗಿರಲಾರದು, ರಾಜ್ಯದ ಜನರು ಏನು ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ ಆ ಒಂದು ಮಟ್ಟದಲ್ಲಿ ಸರ್ಕಾರ ಕೆಲಸ ಮಾಡಲು ಸಾಧ್ಯವಾಗುತ್ತದೆಯೋ ಎಂಬ ಶಂಕೆ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ವಿಶೇಷವಾಗಿ ನಮ್ಮ ಕರ್ನಾಟಕದ ಜನತೆಗೆ ಹೊಸ ಹೊಸ ಭರವಸೆಗಳನ್ನು ಕೊಡುತ್ತಾ ಹೋಗಿದ್ದಾರೆ. ಅವುಗಳಲ್ಲಿ ಕೆಲವು ಎಂದರೆ 'ನಾವು ಸುಭದ್ರವಾದ ಸರ್ಕಾರವನ್ನು ರಚಿಸುತ್ತೇವೆ, ಜನತೆಗೆ ಸ್ವಚ್ಛ ಆಡಳಿತವನ್ನು ಕೊಡುತ್ತೇವೆ, ಎಲ್ಲ ಜನರಿಗೂ ರಕ್ಷಣೆಯನ್ನು ಕೊಡುತ್ತೇವೆ, ಕರ್ನಾಟಕದ ಜನತೆಗೆ ಕುಡಿಯುವ ನೀರನ್ನು ಒದಗಿಸಿಕೊಡುತ್ತೇವೆ, ಎರಡು ಹೊತ್ತು ಉಪವಾಸ ಇರುವವರಿಗೆ ಅನ್ನದ ದಾರಿಯನ್ನು ತೋರಿಸಿಕೊಡುತ್ತೇವೆ' ಇತ್ಯಾದಿ ಹೇಳಿದ್ದಾರೆ. ನಾನಾದರೂ ಕೇಳುತ್ತೇನೆ, ಜನತೆಗೆ ಸುಭದ್ರವಾದ ಸರ್ಕಾರದ ಮೂಲಕ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಹೇಳುತ್ತಿರುವ ನೀವು ಮೊದಲು ಈ ಸರ್ಕಾರ ಸುಭದ್ರವಾಗಿದೆಯೋ ಎಂಬುದನ್ನು ನೋಡಿಕೊಳ್ಳುವುದು ಮುಖ್ಯ. ಯಾವುದೇ ವಿಷಯವನ್ನು ತೆಗೆದುಕೊಂಡು ನೋಡಿದರೂ ಈ ಸರ್ಕಾರ ಇನ್ನು ಎಷ್ಟು ದಿವಸದ ವರೆಗೆ ಇರುತ್ತದೆ ಎನ್ನುವ ಶಂಕೆಯನ್ನು ನಾನು ಹೇಳುವುದಕ್ಕೆ ಬದಲಾಗಿ ಶ್ರೀಸಾಮಾನ್ಯರೇ ಹೇಳಿ ಕೊಳ್ಳುತ್ತಿದ್ದಾರೆ. ಈಗಾಗಲೇ ಇಂಥ ಭಾವನೆ ಅವರ ಮನಸ್ಸಿನಲ್ಲಿ ಬಂದಿದೆ, ಜನರ ಮನಸ್ಸಿನಲ್ಲೇ ಈ ಭಾವನೆ ಮೂಡಿರಬೇಕಾದರೆ ಇನ್ನು ಅಧಿಕಾರಿಗಳ ಮನಸ್ಸಿನಲ್ಲಿ ಕೂಡ ಇದೇ ಭಾವನೆ ಮೂಡುತ್ತದೆ. ಈ ಸರ್ಕಾರ ಇನ್ನು ಎಷ್ಟು ದಿವಸದವರೆಗೆ ಇರುತ್ತದೋ ನೋಡೋಣವೆಂಬ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಇಂಥ ಭಾವನೆ ಅಧಿಕಾರಿಗಳ ಮನಸ್ಸಿನಲ್ಲಿ ಬಂದಮೇಲೆ ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾರೆಯೋ ಎಂದು ನನಗನ್ನಿಸುತ್ತದೆ, ಸ್ವಚ್ಛವಾದ ಆಡಳಿತವನ್ನು ಕೊಡುತ್ತೇವೆಂದು ಹೇಳುವವರು ಮೊದಲು ತಮ್ಮ ಸರ್ಕಾರವನ್ನು ಭದ್ರವಾಗಿ ಇಟ್ಟುಕೊಳ್ಳಬೇಕು ಇಲ್ಲದಿದ್ದರೆ ಅವರು ತಮ್ಮ ಮಾತಿನಂತೆ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಬಹಳ ಜನ ಹಿರಿಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಕಳೆದ ೩೦ ವರ್ಷಗಳಲ್ಲಿ ಏನೇನೂ ಕೆಲಸವೇ ಆಗಿಲ್ಲ ಎಂದು ಹೇಳಿದರು. ಆದರೆ ನಾನಾದರೂ ಹೇಳುತ್ತೇನೆ. ಜನರು ಏನು ನಿರೀಕ್ಷೆ ಮಾಡಿದ್ದರೋ ಆ ಮಟ್ಟದಲ್ಲಿ ಕೆಲಸವಾಗಿಲ್ಲದೇ ಇರಬಹುದು. ಆದರೆ ಏನೇನೂ ಕೆಲಸವೇ ಆಗಿಲ್ಲವೆಂದು ಹೇಳುವುದು ಸರಿಯಲ್ಲ. ಕಳೆದ ೩೦ ವರ್ಷಗಳಲ್ಲಿ ನಾವು ಸಾಕಷ್ಟು ಕೆಲಸವನ್ನು ಮಾಡಿದ್ದೇವೆ......

ಶ್ರೀ ಎ. ಲಕ್ಷ್ಮೀಸಾಗರ್.—ಏನೇನೂ ಕೆಲಸವನ್ನೇ ಮಾಡಿಲ್ಲವೆಂದು ಯಾರೂ ಹೇಳಲಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಿಮ್ಮ ಸದಸ್ಯರಾದ ಮಾನ್ಯ ಯಡಿಯೂರಪ್ಪನವರೇ ಮಾತನಾಡುತ್ತಾ ೩೦ ವರ್ಷಗಳಲ್ಲಿ ಏನೇನೂ ಕೆಲಸವೇ ಆಗಿಲ್ಲವೆಂದು ಹೇಳಿದರು. ತಮಗೆ ನಾನು ಹೇಳುತ್ತೇನೆ, ಕುಡಿಯುವ ನೀರನ್ನೊದಗಿಸುವ ವಿಚಾರದಲ್ಲಿ, ಸೈಟುಗಳನ್ನು ಹಂಚುವ ವಿಚಾರದಲ್ಲಿ, ಅದೇ ರೀತಿ ಇನ್ನೂ ಅನೇಕ ವಿಚಾರಗಳಲ್ಲಿ ನಾವು ಸಾಕಷ್ಟು ಕೆಲಸ ಮಾಡಿದ್ದೇವೆ. ಆದರೆ ಜನರು ನಿರೀಕ್ಷಿಸಿದ ಮಟ್ಟಕ್ಕೆ ಕೆಲಸವಾಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ತಾವು ಅನೇಕ ವಿಚಾರಗಳಲ್ಲಿ ಏನು ಭರವಸೆಗಳನ್ನು ಜನರಿಗೆ ನೀಡಿದ್ದೀರಿ ಅದನ್ನು ಎಷ್ಟರ ಮಟ್ಟಿಗೆ ಈಡೇರಿಸುತ್ತೀರೆಂಬುದನ್ನು ನಾವು ಕಾದು ನೋಡುತ್ತೇವೆ.

ಮೊದಲನೆಯದಾಗಿ ಸರ್ಕಾರದವರು ಏನು ಹೇಳಿದ್ದಾರೆಂದರೆ ಬರಗಾಲ ಪ್ರದೇಶಕ್ಕೆ ಅಲ್ಲಿರತಕ್ಕ ಪರಿಸ್ಥಿತಿಗನುಗುಣವಾಗಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ, ಕುಡಿಯುವ ನೀರನ್ನೊದಗಿಸುತ್ತೇವೆ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡುತ್ತೇವೆ ಎಂದು. ಆದರೆ ಇವತ್ತಿನವರೆಗೂ ಅಂದರೆ ಕಳೆದ ೨ ತಿಂಗಳಲ್ಲಿ ನಮ್ಮ ಬಿಜಾಪುರಕ್ಕೆ ಒಂದೇ ಒಂದು ಪೈಸೆಯನ್ನೂ ಕೂಡ ಬಿಡುಗಡೆ ಮಾಡಿಲ್ಲ. ನಮ್ಮ ಬಿಜಾಪುರ ಜಿಲ್ಲೆ ಪ್ರತಿವರ್ಷವೂ ಬರಗಾಲಕ್ಕೆ ತುತ್ತಾಗುತ್ತಿದೆ. ಅಲ್ಲಿಗೆ ಎಷ್ಟು ಹಣವನ್ನು ನೀವು ಅಧಿಕಾರಕ್ಕೆ ಬಂದ ಮೇಲೆ ಕೊಟ್ಟಿದ್ದೀರಿ ಎಂಬುದನ್ನು ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸಲು ಏನು ಪ್ರಯತ್ನ ಮಾಡಿದ್ದೀರಿ ? ಕೃಷಿಕರಿಗೇ ಆಗಲಿ, ಬೇರೆಯವರಿಗೇ ಆಗಲಿ ನಾವು ಉದ್ಯೋಗವನ್ನು ಕೊಡುತ್ತೇವೆಂದು ಹೇಳುವ ಮುಖ್ಯ ಮಂತ್ರಿಗಳು ಬರಗಾಲ ಪ್ರದೇಶದಲ್ಲಿರತಕ್ಕ ಜನರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ? ತಮಗೆ ಒಂದು ಮಾತು ಹೇಳುವುದಾದರೆ, ಇತ್ತೀಚೆಗೆ ಚಲನಚಿತ್ರ ನಿರ್ಮಾಪಕರ ಸಂಸ್ಥೆಯವರು ಏರ್ಪಡಿಸಿದ್ದ ಸಮಾರಂಭಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ೪೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಅದೇ ಸಂಕಷ್ಟದಲ್ಲಿರತಕ್ಕ ಜನರು ಮನವಿಗಳನ್ನು ಕೊಟ್ಟರೂ ಅವರ ಬಗ್ಗೆ......

ಶ್ರೀ ಎ. ಲಕ್ಷ್ಮೀಸಾಗರ್.—ಬಿಜಾಪುರಕ್ಕೆ ಒಂದು ಪೈಸೆಯನ್ನೂ ನಾವು ಕೊಟ್ಟಿಲ್ಲವೆಂದು ಯಾವ ಆಧಾರದಮೇಲೆ ತಾವು ಹೇಳುತ್ತೀರಿ ? ತಾವು ಮಂತ್ರಿಗಳಾಗಿದ್ದವರು, ಏನಾದರೂ ಮಾತನಾಡಬೇಕಾದರೆ ವಿಚಾರವನ್ನು ಸರಿಯಾಗಿ ಪರಿಶೀಲಿಸಿ ಮಾತನಾಡಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗ್ಗೆ ೪-೫ ದಿವಸಗಳ ಹಿಂದೆ ಏನಾದರೂ ಕೊಟ್ಟಿದ್ದೀರೊ ಏನೋ ಗೊತ್ತಿಲ್ಲ. ಮೊನ್ನೆ ೭ನೇ ತಾರೀಖು ನಮ್ಮ ಜಿಲ್ಲಾಧಿಕಾರಿಯವರ ಸಭೆಗೆ ನಾನು ಹೋಗಿದ್ದಾಗ ನಮಗೆ ಸರ್ಕಾರದಿಂದ ಒಂದು ಪೈಸೆ ಕೂಡ ಬಂದಿಲ್ಲವೆಂದು ಹೇಳಿದರು. ಆರ್.ಡಿ.ಸಿ. ಸಚಿವರೂ ಕೂಡ ಅಲ್ಲೇ ಇದ್ದರು. ಅವರನ್ನು ಬೇಕಾದರೂ ಕೇಳಿ. ನಿನ್ನೆ ಮೊನ್ನೆ ಕೊಟ್ಟಿದ್ದರೆ ಅದು ನನಗೆ ಗೊತ್ತಿಲ್ಲ. ನಾನು ಮಂತ್ರಿಯಾಗಿದ್ದಾಗ ಪ್ರತಿ ತಿಂಗಳೂ ನಮ್ಮ ಬಿಜಾಪುರ ಜಿಲ್ಲೆಗೆ ಒಂದೊಂದು ಕೋಟಿ ರೂ. ನಂತೆ ಕೊಡುತ್ತಿದ್ದೆವು. ಇವತ್ತು ನಮ್ಮ ಬಿಜಾಪುರ ಜಿಲ್ಲೆಯ ಜನರು ಅಭಾವ ಪರಿಸ್ಥಿತಿಯಿಂದಾಗಿ ಬೇರೆ ಕಡೆಗೆ ವಲಸೆ ಹೋಗದಂತೆ ಮಾಡಲು ಹೊಸ ಹೊಸ ಯೋಜನೆಗಳನ್ನು ತಾವು ಹಾಕಿಕೊಳ್ಳಬೇಕು, ಮತ್ತು ಅದಕ್ಕೆ ಬೇಕಾದ ಹಣವನ್ನು 'ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾರ್ಮಿಕರ ವಿವಾದಗಳನ್ನೂ ಕೂಡ ನೀವು ಬಗೆಹರಿಸಿಲ್ಲ, ಉದಾಹರಣೆಗೆ ಹೇಳುವುದಾದರೆ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ಕಾರ್ಮಿಕರ ಸಂಪನ್ನು ತಪ್ಪಿಸಲು ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಆದರೆ ಸರ್ಕಾರದವರು ಇದರ ಬಗ್ಗೆ ಒಂದು ಸೌಜನ್ಯತೆಯನ್ನೂ ತೋರಿಸಿಲ್ಲ. ಕಳೆದ ೩ ದಿವಸದಿಂದ ಅಲ್ಲಿ ಹರತಾಳ ಪ್ರಾರಂಭವಾಗಿದೆ. ಕಾರ್ಮಿಕರು ಅಲ್ಲಿ ಕೆಲಸಕ್ಕೇ ಹೋಗಿಲ್ಲ. ಅವರಿಗೆ, ಅವರ ಕುಟುಂಬದವರಿಗೆ ಊಟ ತಿಂಡಿ ಇಲ್ಲ. ಅಂಥವರ ಬಗ್ಗೆ ನಿಮಗೆ ಏನೇನೂ ಅನುಕಂಪ ಇಲ್ಲ ನಿಮ್ಮ ನಡತೆಯನ್ನು ನೋಡಿದರೆ ಅದು ಮೊಸಳೆಯ ಕಣ್ಣೀರಿನಂತಿದೆ, ತಾವು ಬಾಯಲ್ಲಿ ಪನು ಹೇಳುತ್ತೀರಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕು. ಈ ಕಾರ್ಮಿಕರ ವಿವಾದವನ್ನು ನೀವು ಬಗೆಹರಿಸಿದ್ದರೆ ನಿಜವಾಗಿಯೂ ನಿಮ್ಮನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ಆ ಕೆಲಸವನ್ನು ನೀವು ಮಾಡಿಲ್ಲ. ನಿಮಗೆ ಈ ಕಾರ್ಮಿಕರ ವಿವಾದವನ್ನು ಬಗೆಪರಿಸಬೇಕೆಂಬ ಮನಸ್ಸಿದ್ದಿದ್ದರೆ ಕೇವಲ ಒಂದು ನಿಮಿಷದಲ್ಲಿ ಅದನ್ನು ಬಗೆಹರಿಸಬಹುದಿತ್ತು. ಆದರೆ ಆ ಒಂದು ಮನಸ್ಸು ನಿಮಗೆ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ.

೧–೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಈವತ್ತು ಬಹಳ ಮುಖ್ಯವಾಗಿ ನೀರಾವರಿಯ ಪ್ರದೇಶಗಳಿಗೆ ಹೆಚ್ಚಿನ ಸಹಾಯವನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿರುತ್ತಾರೆ. ಅದೇ ರೀತಿ ನೀರಾವರಿ ಪ್ರದೇಶಗಳನ್ನು ಹೆಚ್ಚು ಮಾಡಲು ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸಬೇಕು. ಬಹುಶಃ ಇದಕ್ಕೆ ಎಷ್ಟು ಹಣವನ್ನು ಕೊಡುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಕೊನೆಯಪಕ್ಷ ನಾಳೆಯ ದಿವಸ ಬಡ್ಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿಯಾದರೂ ಇದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ತಿಳಿದಮಟ್ಟಿಗೆ ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ಮೇನ್‌ಟನೆನ್ಸ್‌ಗೆ ಕೊಡತಕ್ಕಂಥದ್ದು ಸುಮಾರು ೧೫೦ ಕೋಟಿ ರೂಪಾಯಿಗಳು ಇರುತ್ತದೆ. ಬಹುಶಃ ಈ ನೂರಐವತ್ತು ಕೋಟಿ ರೂಪಾಯಿಗಳನ್ನು ಕೊಡತಕ್ಕಂಥದ್ದು ಬಹಳ ಕಡಿಮೆ. ಕೊನೆಪಕ್ಷ ಮೂರು ನೂರು ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಸಾಕಾಗಬಹುದು. ಇದರಿಂದ ಪ್ರತಿಯೊಂದು ಜಿಲ್ಲೆಯಲ್ಲಿ ಕೈಗೊಂಡಿರುವ ಕಾಲುವೆಗಳ ಕೆಲಸವಾದರೂ ಮುಗಿಯಲು ಸಾಧ್ಯವಾಗುತ್ತದೆ. ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದಾದರೂ ಇಷ್ಟೆ, ಹೆಚ್ಚು ನೀರಾವರಿ ಪ್ರದೇಶವಾಗಬೇಕಾದರೆ ಹೆಚ್ಚಿಗೆ ಹಣವನ್ನು ಕೊಡಬೇಕಾಗುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, ತಾವು ಹೇಳತಕ್ಕಂಥದ್ದಕ್ಕೂ ಮತ್ತು ತಾವು ಕಾರ್ಯರೂಪಕ್ಕೆ ತರತಕ್ಕಂಥದ್ದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ನೀರಾವರಿಗೆ ಆದ್ಯತೆಯನ್ನು ಕೊಡತಕ್ಕಂಥವರು ಈಗ ಮಲಪ್ರಭಾ ಮತ್ತು ಘಟಪ್ರಭಾ ನೀರಾವರಿ ಯೋಜನೆಗಳಿಗೆ ಸುಮಾರು ಮೂರು ತಿಂಗಳಿಂದ ಒಂದು ಚೀಲ ಸಿಮೆಂಟನ್ನೂ ಕೂಡ ಬಿಡುಗಡೆ ಮಾಡಿಲ್ಲ. ಇದನ್ನು ವಿಚಾರಣೆ ಮಾಡಬೇಕು. ಹಣವನ್ನು ಕೊಡುವುದರಲ್ಲಿ ಏನಾದರೂ ಅಡಚಣೆಯಾದರೆ ನೀರಾವರಿ ಯೋಜನೆಗಳನ್ನು ಹೇಗೆತಾನೆ ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯನ್ನು ಇಟ್ಟುಕೊಂಡು ಸಿಮೆಂಟ್ ಅಲಾಟ್ ಮಾಡಿದ್ದೀರಾ ? ಅಲಾಟ್‌ಮೆಂಟ್ ಮಾಡಿದ್ದರೆ ಎಷ್ಟರಮಟ್ಟಿಗೆ ಮಾಡಿದ್ದೀರಿ, ಇದನ್ನು ತಾವು ನಾಳೆಯ ದಿವಸ ಹೇಳಬೇಕು. ಒಂದು ಲಕ್ಷ ಹೆಕ್ಟೇರ್‌ಗಳಿಗೆ ನೀರನ್ನು ಕೊಡಬೇಕು ಎನ್ನುವುದು ನಿಗದಿ ಮಾಡಿದ್ದರೆ ಅದಕ್ಕೆ ತಕ್ಕಂಥ ಪೊಟೆನ್‌ಶಿಯಾಲಿಟಿ ಕ್ರಿಯೇಟ್ ಮಾಡುವುದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಲ್ಲೇಶ್.—ಮಾನ್ಯ ಅಧ್ಯಕ್ಷರೇ, ಈ ಸದನದ ಉಪಹಾರ ಗೃಹ ೧೦೭ನೇ ನಂಬರ್ ಕೊಠಡಿಯಲ್ಲಿ ಇರುತ್ತದೆ. ಅಲ್ಲಿ ತಯಾರು ಮಾಡತಕ್ಕಂಥ ಆಹಾರದ ಬಗ್ಗೆ ಹೇಳುತ್ತೇನೆ. ಆರೋಗ್ಯದ ಹಿತದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ದಯವಿಟ್ಟು ಕೇಳಬೇಕೆಂದು ಹೇಳುತ್ತೇನೆ.

ಉಪಸಭಾಪತಿಯವರು.—ಅಂಥ ವಿಷಯಗಳನ್ನು ಪ್ರಸ್ತಾಪ ಮಾಡಲು ಬೇರೆ ಅವಕಾಶವಿರುತ್ತದೆ. ನನ್ನ ಚೇಂಬರ್‌ನಲ್ಲಿ ಪ್ರಸ್ತಾಪಮಾಡಿ. ಇಲ್ಲಿ ಅದನ್ನು ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಸರ್ಕಾರದವರು ಈಗಾಗಲೇ ತಮಿಳುನಾಡಿಗೆ ಕಾವೇರಿ ನೀರನ್ನು ಸುಮಾರು ಮೂರು ಟಿ.ಎಂ.ಸಿ.ಎಫ್.ಟಿ ಯಷ್ಟು ಬಿಡುವುದಾಗಿ ಹೇಳಿದ್ದಾರೆ. ಅದರ ಬಗ್ಗೆಯೂ ಕೂಡ ಈ ಸಭೆಯಲ್ಲಿ ಪ್ರಸ್ತಾಪ ಮಾಡಿಲ್ಲ. ಬಹುಶಃ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಕಾವೇರಿ ನೀರನ್ನು ತಮಿಳುನಾಡಿಗೆ ಕೊಡಬಾರದು. ನಮಗಿರತಕ್ಕಂಥ ಅಚ್ಚುಕಟ್ಟೆಗಳಿಗೆ ನೀರು ಸಾಕಾಗದೆ ಬೆಳೆಗಳು ಒಣಗುತ್ತಿರುವಾಗ ಬೇರೆ ರಾಜ್ಯಗಳಿಗೆ ನೀರನ್ನು ಕೊಡುವುದು ಬಹಳ ಅನ್ಯಾಯ. ಸರ್ಕಾರ ಈ ನೀತಿಯನ್ನು ಅನುಸರಿಸಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತಾ ಮುಖ್ಯವಾಗಿ ನಮ್ಮಲ್ಲಿರತಕ್ಕಂಥ ಎಲ್ಲ ಯೋಜನೆಗಳಿಗೂ ಹೆಚ್ಚಿನ ಹಣವನ್ನು ಕೊಟ್ಟು ಆದಷ್ಟು ಜಾಗ್ರತೆಯಾಗಿ ಮುಗಿಸಬೇಕೆಂದು ಕೇಳಿಕೊಂಡು ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಸಹಾಯ ಸಹಕಾರಗಳನ್ನು ಕೊಟ್ಟು ಅವರಿಗೆ ಒಳ್ಳೆಯದನ್ನು ಮಾಡಲಿ ಎಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ್).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಾಂತರ ಬೆಂಬಲವನ್ನು ಸೂಚಿಸುತ್ತಾ ಕೆಲವು ವಿಚಾರಗಳನ್ನು ನಿಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಕ್ಕೆ ನಾನು ಬಯಸುತ್ತೇನೆ. ಮೊದಲನೆಯದಾಗಿ ಈ ಸರ್ಕಾರ ಮಾರ್ಚ್ ತಿಂಗಳಲ್ಲಿ ಅಧಿಕಾರಕ್ಕೆ ಬರಬೇಕಾಗಿತ್ತು. ಆದರೆ ಜನವರಿ ತಿಂಗಳಲ್ಲಿಯೇ ಬಂದುದರಿಂದ ಏನಾಗಿದೆ ಎಂದರೆ ಹಿಂದಿನ ಸರ್ಕಾರ ಹಲವಾರು ಬಾಬುಗಳಲ್ಲಿ ತೊಡಗಿಸಿದ್ದ ಹಣ ಬೇರೆ ರೀತಿಯಲ್ಲಿ ಖರ್ಚಾಗಿ ಡಿಪಾರ್ಟ್‌ಮೆಂಟ್‌ಗಳಲ್ಲಿ ಹಣವಿಲ್ಲದೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದನ್ನು ಈವತ್ತು ನಾವು ನೋಡುತ್ತಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳುಗಳಾಗಿರುವುದರಿಂದ ಕಟುವಾಗಿ ತೀವ್ರವಾಗಿ ವಿಮರ್ಶೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಆದರೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಜನತಾ ಸರ್ಕಾರದ ಆಲೋಚನೆ ಮುಂದೆ ಸರ್ಕಾರ ಹೇಗೆ ಮುಂದಕ್ಕೆ ಹೋಗುತ್ತದೆ ಎಂಬುದರ ಬಗ್ಗೆ ಕೆಲವು ಸೂತ್ರಗಳ ಕೆಲವು ನಿರೂಪಣೆಗಳು ಮತ್ತು ಕೆಲವು ಅಂದಾಜುಗಳು ಇದರಲ್ಲಿವೆ. ಇದರಲ್ಲಿ ಕೆಲವು ಸ್ಪಷ್ಟವಾಗಿರುವುದಿಲ್ಲ. ಇನ್ನೂ ಕೂಡ ಇವರು ನಿರೂಪಣೆಗಳನ್ನೂ ಮತ್ತು ಸೂತ್ರಗಳನ್ನು ಆಲೋಚನೆ ಮಾಡುತ್ತಲೇ ಇದ್ದಾರೆಂದು ಕಾಣುತ್ತದೆ. ಇದರಲ್ಲಿ ಹಲವಾರು ಸೂತ್ರಗಳು ವಿಶ್ವಾಸಾರ್ಹವಾಗಿದೆ. ಕೆಲವು ಸೂತ್ರಗಳ ಬಗ್ಗೆ ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನೂ ಕೂಡ ಕೊಡಬೇಕಾಗಿದೆ. ಈ ಒಂದು ಭಾಷಣವನ್ನು ಕೇಳಿದಾಗ, ಹಲವಾರು ಬಾರಿ ಇದನ್ನು ಓದಿದಾಗ ನನಗೆ ಏನು ಕಾಣುತ್ತದೆ ಎಂದರೆ ಈ ಸರ್ಕಾರ ರಾಜ್ಯದ ಸೂತ್ರಗಳ ಒಂದು ಗಂಭೀರತೆಯನ್ನು ಸಾಕಷ್ಟು ಅಂದಾಜು ಮಾಡಿಲ್ಲವೆಂದು ಕಾಣುತ್ತದೆ. ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬೇಕಾಗುತ್ತದೆ. ರಾಜ್ಯ ವಿಧಾನ ಸಭೆಗೆ ನಿಷ್ಪಕ್ಷಪಾತವಾಗಿ ರಾಜ್ಯದಲ್ಲಿ ಚುನಾವಣೆಗಳು ನಡೆದಿದೆ ಎಂದು ಹೇಳಿರುತ್ತಾರೆ. ಆದರೆ ಎಷ್ಟೋ ಕಡೆಗಳಲ್ಲಿ ಚುನಾವಣೆಯ ಸಂದರ್ಭಗಳಲ್ಲಿ ರೇಪಿಂಗ್ ನಡಿದಿದೆ. ಪ್ರಜಾಪ್ರಭುತ್ವ ಇನ್ನೂ ಕೂಡ ಗ್ರಾಮಾಂತರ ಪ್ರದೇಶಗಳಿಗೆ ಬರುವ ಹಾಗೆ ಇಲ್ಲ. ಇದನ್ನು ಸರ್ಕಾರ ಹೀಗೆ ಪ್ರತ್ಯೇಕವಾಗಿ ಹೇಳಬಾರದಿತ್ತು. ಹದಿನಾರು ಜಿಲ್ಲೆಗಳಲ್ಲಿ ಕ್ಷಾಮಪರಿಸ್ಥಿತಿ ಇರುತ್ತದೆ. ಅನೇಕ ಜಿಲ್ಲೆಗಳು ಪ್ರವಾಹ ಪರಿಸ್ಥಿತಿಗೆ ಒಳಗಾಗಿ ಪತ್ತೋಟ ಇಲ್ಲದಂತಾಗಿದೆ. ಇಲ್ಲಿ ನಾಳೆಯ ದಿವಸ ಮಳೆ ಬಂದಾಗ ಎಷ್ಟು ಮನೆಗಳು ಹೋಗುತ್ತದೆ, ಭೂಮಿ ಹೋಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಗಂಭೀರವಾದ ಪರಿಸ್ಥಿತಿ ಇರುವಾಗ ಇದನ್ನು ಈ ರೀತಿ ವ್ಯಾಖ್ಯಾನ ಮಾಡುವ ಅಂದಾಜು ಹೇಗೆ ಕಾಣುತ್ತದೆ. ನಮ್ಮ ಪಕ್ಷ ಬೆಂಬಲ ಕೊಡತಕ್ಕಂಥ ಪರಿಸ್ಥಿತಿಯನ್ನು ತಾವು ಅಂದಾಜು ಮಾಡಬೇಕು. ಕಳೆದ ಹಲವಾರು ವರ್ಷಗಳಿಂದ ರಿಲೇಷನ್ ಇರಲಿಲ್ಲ. ಏತಕ್ಕೆ ಇಲ್ಲವೆಂದರೆ ಚುನಾವಣೆಗಳು ನಮ್ಮ ದೇಶದಲ್ಲಿ ಆಡಳಿತ ದೃಷ್ಟಿಯಲ್ಲಿ ಹಾಗೂ ಓಟ್ ಪಡೆಯುವ ದೃಷ್ಟಿಯಲ್ಲಿ ಇದೆ ಜನತೆ ತಮಗೆ ಓಟು ಕೊಟ್ಟು ಅಧಿಕಾರ ಕೊಟ್ಟ ಮೇಲೆ, ಆ ಅಧಿಕಾರವನ್ನು ಸರಿಯಾಗಿ ನಡೆಸಿಕೊಂಡು ಹೋಗಲಿಕ್ಕೆ ಸೂಕ್ತ ಏರ್ಪಾಡು ಮಾಡಬೇಕು. ಆಡಳಿತದ ಬಗ್ಗೆ ನಾನು ಆರಂಭದಲ್ಲೇ ಹೇಳಿರುತ್ತೇನೆ ಎಲ್ಲ ಪಕ್ಷದ ನಾಯಕರು ಅಧಿಕಾರಕ್ಕೆ ಬಂದಕೂಡಲೇ ಎಲ್ಲವನ್ನು ಮರೆತುಬಿಡುತ್ತಾರೆ. ಕಾಂಗ್ರೆಸ್ 'ಐ' ಪಕ್ಷದವರು ೩೦–೩೫ ವರ್ಷಗಳಿಂದ ಅಸೆಂಬ್ಲಿಯಲ್ಲಿ ಆಡಳಿತ ಪಕ್ಷದಲ್ಲಿದ್ದು ವಿರೋಧಪಕ್ಷದವರು ಅಧಿಕಾರಕ್ಕೆ ಬಂದಕೂಡಲೇ ಅರಾಜಕತೆ ಅರಾಜಕತೆ ಎಂದು ಹೇಳತಕ್ಕಂಥದ್ದು ಏನು ದೊಡ್ಡ ವಾದವಲ್ಲ. ಜನತಾ ಪಕ್ಷ ಎರಡು ವರ್ಷ ಏಕೆ ನಾಲ್ಕು ವರ್ಷಗಳು ಅಧಿಕಾರದಲ್ಲಿ ಇರುತ್ತದೆ. ಜನತಾ ಪಕ್ಷ ಸರಿಯಾಗಿ ಆಡಳಿತ ನಡೆಸಿದರೆ ಕೆಲವು ಮುಖ್ಯ ವಿಷಯಗಳ ಬಗ್ಗೆ ಗಮನವನ್ನು ಕೊಡುವುದಾದರೆ ಇದು ಖಂಡಿತವಾಗಿಯೂ ೫ ವರ್ಷಗಳ ಕಾಲ ಆಡಳಿತವನ್ನು ನಡೆಸಲಿಕ್ಕೆ ಸಾಧ್ಯವಿದೆ ಎಂದು ವಿಶ್ವಾಸದಿಂದ ಹೇಳಬಯಸುತ್ತೇನೆ. ದಕ್ಷ, ಸ್ವಚ್ಛ ಹಾಗೂ ಪರಿಣಾಮಕಾರಿಯಾದಂಥ ಆಡಳಿತವನ್ನು ಜನತೆಗೆ ಒದಗಿಸುವುದು ನಮ್ಮ ಸರ್ಕಾರದ ಕರ್ತವ್ಯವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಈ ಬಗ್ಗೆ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈಗ ನಮ್ಮಲ್ಲಿ ಬಹಳ ಜನ ಅಧಿಕಾರಿಗಳು ಇದ್ದಾರೆ. ಇವರುಗಳು ಬೇರೆಬೇರೆ ರಾಜ್ಯಗಳಿಂದ ಸೇವೆ ಸಲ್ಲಿಸಲು ಇಲ್ಲಿಗೆ ಬಂದಿದ್ದಾರೆ. ಇವರುಗಳಲ್ಲಿ ಒಂದು ರೀತಿಯ ಗುಂಪುಗಾರಿಕೆ ಇದೆ. ನಾನು ಈ ಸದನದ ಮೂಲಕ ಅವರಿಗೆ ಹೇಳುವುದೇನೆಂದರೆ, ಅವರಲ್ಲಿ ಯಾವ ರೀತಿಯಿಂದಲೂ ಗುಂಪುಗಾರಿಕೆ ಬೆಳೆಯಬಾರದು, ಎಂದು, ಅವರುಗಳ ಕೈಯಲ್ಲಿ ಈ ಕರ್ನಾಟಕ ರಾಜ್ಯದ ಆಡಳಿತವನ್ನು ಕೊಟ್ಟ ಮೇಲೆ ಅವರುಗಳು ಗುಂಪುಗಾರಿಕೆ ಮಾಡುವುದು ಸರಿಯಲ್ಲ ಇದರ ಬಗ್ಗೆ ಕೂಡ ಸರ್ಕಾರ ಸ್ವಲ್ಪ ನಿಗಾ ವಹಿಸಬೇಕು. ಸಾಮಾನ್ಯ ಆಡಳಿತವೆಂದರೆ ಗ್ರಾಮಾಂತರ ಪ್ರದೇಶ

ಗಳಲ್ಲಿ ಜನರಿಗೆ ಕಾಣಿಸುವುದು ಪೋಲೀಸರು ಮತ್ತು ಗ್ರಾಮ ಲೆಕ್ಕಿಗರು. ೨೪ ಗಂಟೆಗಳೂ ಕೆಲಸ ಮಾಡುವಂತಹ ಪೋಲೀಸರಿಗೆ ಬೇರೆ ಎಸ್.ಪಿ.ಒ.ಗಳಿಗೆ ಕೊಡುವಂತಹ ಸವಲತ್ತುಗಳನ್ನೇ ಕೊಡದೆ ಇನ್ನೂ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು. ಇವರಿಗೆ ಸರಿಯಾದಂಥ ತರಬೇತಿ ಕೊಡಬೇಕು. ಇವರ ನಡವಳಿಕೆ ಚೆನ್ನಾಗಿರಬೇಕು. ೧೯೮೨ನೇ ಸಾಲಿನ ಕರ್ನಾಟಕ ವಿಧಾನಸಭೆಯ ನಡವಳಿಕೆಗಳನ್ನು ನಾನು ಓದಿದ್ದೇನೆ. ಕೆಲವು ಮಾನ್ಯ ಸದಸ್ಯರು ಅಧಿಕಾರಿಗಳ ನಡವಳಿಕೆ ಯಾವ ರೀತಿ ಇರಬೇಕೆಂಬ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಶ್ರೀ ಎಸ್ ಎಂ. ಶೀರ್‌ನಾಳಿಚಂದ್ರಶೇಖರ್ ಅವರು ಈ ಬಗ್ಗೆ ಇದೇ ಸದನದಲ್ಲಿ ಅವರು ಸದಸ್ಯರಾಗಿದ್ದಾಗ ಏನು ಹೇಳಿದ್ದಾರೆಂದರೆ, ಆಡಳಿತ ಯಂತ್ರವನ್ನು ನಡೆಸುವಂತಹ ಅಧಿಕಾರಿಗಳಲ್ಲಿ ಜನತೆಯ ಬಗ್ಗೆ ಮಮತೆ ಇರಬೇಕಾಗುತ್ತದೆ ಮತ್ತು ಸರ್ಕಾರದವರು ಹಾಕಿಕೊಳ್ಳುವಂತಹ ಕಾರ್ಯಕ್ರಮಗಳ ಬಗ್ಗೆ ವ್ಯಾಕ್ಯುಲತೆ ಮತ್ತು ಅಭಿಮಾನ ಬೇಕಾಗುತ್ತದೆ, ಇದು ಇಲ್ಲದೇ ಹೋದರೆ ನಾವು ಎಷ್ಟೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಪ್ರಯೋಜನವಾಗುವುದಿಲ್ಲ ಎಂದು. ಆದ್ದರಿಂದ ಅಧಿಕಾರಿಗಳಲ್ಲಿ ಮಮತೆ ಎಂಬುದು ಮೊದಲು ಇರಬೇಕು. ಆದರೆ ಇದು ಕೆಳಹಂತದ ಅಧಿಕಾರಿಗಳಲ್ಲಿ ಇಲ್ಲ. ಈಗ ಗ್ರಾಮ ಲೆಕ್ಕಿಗರು ಏನಿದ್ದಾರೆ, ಅವರು ಒಂದು ಸರ್ವೆ ನಂಬರ್ ಕೊಡಬೇಕಾದರೆ, ಅವರಿಗೆ ಹಣ ಕೊಡಬೇಕಾಗುತ್ತದೆ. ಈ ಹಿಂದೆ ಪಟೇಲರು ಮತ್ತು ಶಾನುಭೋಗರು ಹಣ ಮಾಡಿಕೊಳ್ಳುತ್ತಾರೆ ಎಂದು ಹೇಳಲಾಗುತ್ತಿತ್ತು. ಆದರೆ ಅವರುಗಳನ್ನು ಮೀರಿಸುವಂತಹ ರೀತಿಯಲ್ಲಿ ಇವರು ಹಣ ಮಾಡಿಕೊಳ್ಳುತ್ತಿದ್ದಾರೆ. ಅದು ಎಷ್ಟು ಎಂದು ಅಂದಾಜು ಮಾಡುವುದಕ್ಕೇ ಸಾಧ್ಯವಿಲ್ಲ. ಈಗ ಸರ್ಕಾರದವರು 'ಆಲೋಚನಾ ಬ್ಯಾಂಕ್' ಎಂದು ಮಾಡಿದ್ದಾರೆ. ಇದರ ಒಂದು ಉದ್ದೇಶ ಮತ್ತು ತತ್ವ ಚೆನ್ನಾಗಿದೆ. ಇದರಲ್ಲಿ academicians ಮತ್ತು economists ಏನಿದ್ದಾರೆ ಇವರುಗಳಿಗೆ practical experience ಇರುವುದಿಲ್ಲ. ಇವರುಗಳು ಏನಿದ್ದರೂ ಹೊಸ ಹೊಸ ಸೂತ್ರಗಳನ್ನು ಸರ್ಕಾರಕ್ಕೆ ಸಲಹೆ ಮಾಡಬಹುದು. ಆದರೆ ಅದು ಅಷ್ಟೇ ಸಾಲುವುದಿಲ್ಲ. ಹಲವಾರು ವರ್ಷಗಳ ಕಾಲದಿಂದ ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿದು ಅದರಿಂದ ಪಡೆದಂಥ ಒಂದು ಅನುಭವವನ್ನು ಸಹ ಅವರುಗಳು ಕೊಟ್ಟಂತಹ ಸೂತ್ರಗಳಲ್ಲಿ ಕೂಡಿಸಬೇಕು. ಆಗ ಮಾತ್ರ ಇದರ ಉದ್ದೇಶ ಸಾರ್ಥಕವಾಗುತ್ತದೆಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ವಿದ್ಯಾಭ್ಯಾಸದ ಬಗ್ಗೆ ಒಂದಾದರೂ ಉಲ್ಲೇಖ ಇರುವುದು ಕಾಣಲಿಲ್ಲ. ವಿದ್ಯಾಭ್ಯಾಸದ ಬಗ್ಗೆ ನಾವು ಬಹಳ ಕಾಳಜಿ ವಹಿಸಬೇಕಾಗುತ್ತದೆ. ಈ ಬಗ್ಗೆ ನಾನು ಒಂದು ಕೊಟೇಷನ್ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ.—

> "Recognising the need for literacy to spread up, the dissemination of the technical knowledge is the first."

ಅಂದರೆ ಸಾರ್ವತ್ರಿಕವಾದಂಥ ಒಂದು ವಿದ್ಯಾಭ್ಯಾಸದ ವಾತಾವರಣ ಮತ್ತು ಅಕ್ಷರತೆಯ ಒಂದು ವಾತಾವರಣ ಇಲ್ಲದಿದ್ದರೆ ತಾಂತ್ರಿಕ ಜ್ಞಾನವನ್ನು ಸಾರ್ವತ್ರಿಕವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದು ಮುಖ್ಯ. ಮತ್ತೊಂದು ಮುಖ್ಯ ಅಂಶವೆಂದರೆ.—

> "With literacy new ideas and techniques in farming and industry spread very rapidly."

ಅಂದರೆ ಫಾರ್ಮಿಂಗ್‌ನಲ್ಲಿ ಮತ್ತು ಇಂಡಸ್ಟ್ರಿಯಲ್ಲಿ ಜನಸಾಮಾನ್ಯರೂ ಸಹ ಭಾಗವಹಿಸಬೇಕೆಂದರೆ ಸಾರ್ವತ್ರಿಕವಾದಂಥ ವಿದ್ಯಾಭ್ಯಾಸದ ವಾತಾವರಣ ಮತ್ತು ತಿಳಿವಳಿಕೆಯ ವಾತಾವರಣ ಇರಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂಬುದಕ್ಕೆ ನನ್ನ ಒಂದು ಸ್ವಂತ ಅನುಭವವನ್ನು ಹೇಳುತ್ತೇನೆ. ಈ ಮೊದಲು ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜಪಾನ್ ದೇಶದ ಮಾದರಿಯಲ್ಲಿ ಭತ್ತವನ್ನು ಕೃಷಿ ಮಾಡಲು ಬಹಳಷ್ಟು ಹಣ ಖರ್ಚು ಮಾಡಿದರು. ಆದರೆ ಅದು ಸಂಪೂರ್ಣವಾಗಿ ವಿಫಲವಾಯಿತು. ಈಗ ಅಲ್ಲಿ ಕೆಲವು ಕಡೆಗಳಲ್ಲಿ ಮಾತ್ರ ಇದನ್ನು ಮಾದರಿ ರೂಪದಲ್ಲಿ ನೋಡಬಹುದೇ ಹೊರತು ಸಾರ್ವತ್ರಿಕವಾಗಿ ನೋಡಲು ಸಾಧ್ಯವಿಲ್ಲ. ಇದಕ್ಕೆ ಕಾರಣವೆಂದರೆ, ಜನರು ಈ ಹೊಸ ವಿಧಾನವನ್ನು ಅನುಸರಿಸಬೇಕಾದರೆ ಅವರಿಗೆ ಸಾಕಷ್ಟು ತಿಳಿವಳಿಕೆ ಬೇಕಾಗುತ್ತದೆ. ಈ ಹೊಸ ವಿಧಾನವನ್ನು ತಿಳಿದುಕೊಳ್ಳುವಂತಹ ಅಕ್ಷರಜ್ಞಾನ ಅನೇಕ ಜನರಲ್ಲಿ ಇಲ್ಲ, ಆದಕಾರಣ ನಾವು ಮೊದಲು ಪ್ರೈಮರಿ ವಿದ್ಯಾಭ್ಯಾಸವನ್ನು ಎಲ್ಲರಿಗೂ ಕಡ್ಡಾಯವಾಗಿ ಕಲಿಸಬೇಕು. ಈ ಹಿಂದಿನ ಸರ್ಕಾರಗಳು ಇದನ್ನು ಕಡೆಗಣಿಸಿದ

ಕಾರಣ ಅವಿದ್ಯಾವಂತರ ಸಂಖ್ಯೆ ಜಾಸ್ತಿಯಾಯಿತು. ಈಗ ಹೈಸ್ಕೂಲು ಮತ್ತು ಕಾಲೇಜು ಮಟ್ಟದ ಸಿಲಬಸ್‌ಗಳನ್ನು ಹೆಚ್ಚು ಮಾಡಲಾಗಿದೆ. ರಷ್ಯಾ, ಜಪಾನ್. ಜರ್ಮನಿ ಮುಂತಾದ ದೇಶಗಳಿಂದ ಈ ಹೊಸ ಹೊಸ ಸಿಲಬಸ್‌ಗಳನ್ನು ತಂದು ಹಾಕಿದ್ದಾರೆ. ಇದನ್ನೆಲ್ಲಾ ಹೇಳಿಕೊಡುವಷ್ಟು ಶಕ್ತಿ ನಮ್ಮ ಉಪಾಧ್ಯಾಯರಿಗೆ ಇಲ್ಲ. ಇಲ್ಲಿ ಆಧುನಿಕ ಗಣಿತ, ಆಧುನಿಕ ವಿಜ್ಞಾನ ಬಹಳ ಮುಖ್ಯವಾದ ಅಂಶಗಳಾದರೆ ಪ್ರೈಮರಿ ವಿದ್ಯಾಭ್ಯಾಸದ ಮಟ್ಟದಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡಲು ಸಾಕಷ್ಟು ಉಪಾಧ್ಯಾಯರುಗಳೇ ಇಲ್ಲ. ಸರಿಯಾದಂಥ ಸಲಕರಣೆಗಳು ಇಲ್ಲ. ಕೆಲವು ಕಡೆ ೫೦೦ ಮಕ್ಕಳಿಗೆ ಇಬ್ಬರು ಉಪಾಧ್ಯಾಯರು ಇರುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ಏಕ-ಉಪಾಧ್ಯಾಯರ ಶಾಲೆಗಳು ಇವೆ, ಈಗ ಪ್ರತಿ ಜಿಲ್ಲೆಯಲ್ಲಿಯೂ ತರಬೇತಿ ಪಡೆದಂಥ ಅಭ್ಯರ್ಥಿಗಳು ಕೆಲಸವಿಲ್ಲದೆ ಇರುವುದರಿಂದ ಸರ್ಕಾರಕ್ಕೆ ಸ್ವಲ್ಪ ಹೆಚ್ಚು ಖರ್ಚು ಬಂದರೂ ಸಹ ಅವರುಗಳ ಸೇವೆಯನ್ನು ಸರ್ಕಾರದವರು ಏತಕ್ಕೆ ಪಡೆದುಕೊಳ್ಳಬಾರದು ? ಈ ಹಂತದಲ್ಲಿ ಮಕ್ಕಳಿಗೆ ಸರಿಯಾದಂಥ ವಿದ್ಯಾಭ್ಯಾಸ ಕೊಟ್ಟರೆ ಮುಂದೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಚೆನ್ನಾಗಿ ಕಲಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರೈಮರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರಲ್ಲಿ ಹಾಗೂ ಅಲ್ಪಸಂಖ್ಯಾತರಲ್ಲಿ ಒಂದು ರೀತಿಯ ಭಯ ಬಂದಿದೆ ಎಂದು ಕೆಲವರು ಹೇಳುತ್ತಾರೆ. ಒಂದು ರೀತಿಯಲ್ಲಿ ಈ ಜನರಲ್ಲಿ ಭಯವಿದೆ. ಇದಕ್ಕೆ ಕಾರಣಕರ್ತರು ಯಾರು ಎಂಬುದನ್ನು ಸರ್ಕಾರ ಹುಡುಕಬೇಕು. ಏಕೆಂದರೆ, ಈ ಜನರಲ್ಲಿರುವಂತಹ ಭಯಭೀತಿಯನ್ನು ಸರ್ಕಾರ ಹೋಗಲಾಡಿಸದಿದ್ದರೆ ಈ ಸರ್ಕಾರ ಬಹಳ ಕಾಲ ಇರುವುದಿಲ್ಲವೆಂದು ಕೆಲವರು ಹೇಳುತ್ತಿರುವುದರಿಂದ ಪಕ್ಷ ಪಂಗಡ ಎಂಬತಕ್ಕಂಥ ಬೇಧಭಾವವಿಲ್ಲದೆ ಎಲ್ಲರೂ ಸೇರಿಕೊಂಡು ಅವರಲ್ಲಿರುವಂತಹ ಭಯಭೀತಿಯನ್ನು ಹೋಗಲಾಡಿಸಲು ಸರಿಯಾಗಿ ಕೆಲಸ ಮಾಡಬೇಕೆಂದು ನನ್ನ ಒಂದು ಸೂಚನೆ ಇದೆ. ಈ ಹಿಂದಿನ ರೆಕಾರ್ಡ್ಸ್ ತೆಗೆದು ನೋಡಿದರೆ ಮೈಸೂರು ರಾಜ್ಯದಲ್ಲಿ ಈ ಜನರಿಗೆ ೧೨ ಪರ್ಸೆಂಟ್ ಪ್ರಾತಿನಿಧ್ಯವಿತ್ತು. ಆದರೆ ಈಗ ೨ ಪರ್ಸೆಂಟ್ ಕೂಡ ಪ್ರಾತಿನಿಧ್ಯ ಇಲ್ಲ. ಎಲ್ಲ ಮುಖ್ಯ ಕ್ಷೇತ್ರಗಳಲ್ಲಿಯೂ ಇವರಿಗೆ ಸರಿಯಾದಂಥ ಪ್ರಾತಿನಿಧ್ಯ ಕೊಟ್ಟಿದ್ದೇ ಆದರೆ ಖಂಡಿತವಾಗಿಯೂ ಇವರಲ್ಲಿರುವಂತಹ ಭಯವನ್ನು ಹೋಗಲಾಡಿಸಬಹುದೆಂದು ಹೇಳುತ್ತೇನೆ. ಆದ್ದರಿಂದ ಈ ಬಗ್ಗೆ ಸರ್ಕಾರ ಒಂದು ನಿಶ್ಚಿತವಾದಂಥ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಮತ್ತು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಸರ್ಕಾರದವರು ಹೆಚ್ಚು ಹೆಚ್ಚು ಸವಲತ್ತುಗಳನ್ನು ಕೊಡಬೇಕು. ಇಲ್ಲದಿದ್ದರೆ ಇನ್ನು ಹತ್ತು ವರ್ಷಗಳಲ್ಲಿ ಈಗ ಒಂದು ಎಕರೆಯಿಂದ ೫ ಎಕರೆವರೆಗೆ ಜಮೀನನ್ನು ಏನು ಇಟ್ಟುಕೊಂಡಿದ್ದಾರೆ ಅವರೆಲ್ಲರೂ ತಮ್ಮ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇವರುಗಳಿಗೆ ಸರ್ಕಾರದವರು ವಿಶೇಷವಾದಂಥ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಗ್ರಾಮೀಣ ಬ್ಯಾಂಕ್‌ಗಳು ಸಹ ಸಣ್ಣ ಕೈಗಾರಿಕೆಗಳನ್ನು ನಡೆಸುವವರಿಗೆ ಮತ್ತು ರೈತರಿಗೆ ಸಾಕಷ್ಟು ಸಹಾಯ ಮಾಡುತ್ತಿಲ್ಲ, ಇನ್ನು ಮುಂದಾದರೂ ಹೆಚ್ಚು ಹೆಚ್ಚು ಸವಲತ್ತುಗಳನ್ನು ಒದಗಿಸಬೇಕೆಂದು ಹೇಳಿ ರಾಜ್ಯಪಾಲರ ಭಾಷಣಕ್ಕೆ ನಮ್ಮ ಪಕ್ಷದ ಹಾಗೂ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಮಂಡ್ಯ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣವನ್ನು ಅಭಿನಂದಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಕಳೆದ ನಾಲ್ಕೈದು ದಿವಸಗಳಿಂದ ಜನತಾ ಪಕ್ಷದ ವತಿಯಿಂದ ಹಾಗೂ ಕಾಂಗ್ರೆಸ್ ಪಕ್ಷದ ವತಿಯಿಂದ ಮತ್ತು ವಿವಿಧ ರಾಜಕೀಯ ಪಕ್ಷಗಳ ವತಿಯಿಂದ ಇದರ ಮೇಲೆ ಚರ್ಚೆ ಮುಂದುವರಿದಿದೆ. ಈ ಚರ್ಚೆಯನ್ನು ಬಹಳ ಸ್ಥೂಲವಾಗಿ ಪರಿಶೀಲನೆ ಮಾಡಿದಾಗ ಎಲ್ಲರ ಅನುಕಂಪ ರಾಜ್ಯದ ಪುರೋಭಿವೃದ್ಧಿಯಾಗಬೇಕು, ರಾಜ್ಯದ ಅಭಿವೃದ್ಧಿಯಾಗಬೇಕು, ರಾಜ್ಯದ ಶ್ರೇಯಸ್ಸು ಆಗಬೇಕು ಎನ್ನತಕ್ಕದ್ದೇ ಆಗಿದೆ. ಅಂದರೆ ಇಲ್ಲಿಯವರೆಗೆ ಇದು ಆಗದಿರಲು ಕಾರಣರು ಯಾರು ? ಇದಕ್ಕೆ ಹೊಣೆಗಾರರು ಯಾರು ? ಜನಸಾಮಾನ್ಯರೇ ಅಥವಾ ಇದುವರೆಗೂ ರಾಜ್ಯದ ಆಡಳಿತವನ್ನು ನಡೆಸಿಕೊಂಡು ಬಂದಂತ ವ್ಯಕ್ತಿಗಳೇ ?

ಈ ಒಂದು ದೋಷಪೂರ್ಣ ವಿಚಾರವನ್ನು ಈ ಸಭೆ ಸ್ಥೂಲವಾಗಿ ಗಂಭೀರವಾಗಿ ವಿಮರ್ಶೆ ಮಾಡಬೇಕು. ಈ ಬಗ್ಗೆ ಎಲ್ಲಾ ಪಕ್ಷದ ಸದಸ್ಯರಲ್ಲೂ ಮನವಿ ಮಾಡುತ್ತೇನೆ. ವಿರೋಧಪಕ್ಷದ ನಾಯಕರಾದ ಮೊಯಿಲಿಯವರೂ ಕೂಡ ಈ ಬಗ್ಗೆ ಬಹಳ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅನೇಕ ವರ್ಷಗಳ ಕಾಲ ಅವರು ಮಂತ್ರಿಗಳಾಗಿದ್ದವರೇ ನೀರಾವರಿ ಸೌಲಭ್ಯಗಳು ಸಾಕಷ್ಟು ಆಗಿಲ್ಲವೆಂದು ಹೇಳಿದ್ದಾರೆ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಗನಕ್ಕೆ ಮುಟ್ಟಿದೆ ಎಂದು ಹೇಳಿದ್ದಾರೆ. ಇದಕ್ಕೆ ಯಾರು ಹೊಣೆಗಾರರು ? ಗ್ರಾಮದ ಜನತೆಯೋ ಅಥವಾ ಮಂತ್ರಿಗಳೋ ಅಥವಾ ನಿಮ್ಮ ಅಧಿಕಾರಿಗಳೇ ಎಂಬುದನ್ನು ಸ್ಥೂಲವಾಗಿ ವಿಮರ್ಶೆಮಾಡಿ ನೋಡಬೇಕಾಗಿದೆ. ಹಿಂದೆ ಈಗಿನ ಆಳುವ ಪಕ್ಷದ ವತಿಯಿಂದ ಎತ್ತಿದಂತಹ ಆರೋಪಗಳಿಗೆ ತಾವು ತಾಳಿದಂತಹ ಹಠಮಾರಿತನ ಎಷ್ಟರಮಟ್ಟಿಗೆ ಇತ್ತು ? ಕೋಟ್ಯಾಂತರ ರೂಪಾಯಿಗಳನ್ನು ತಾವು ವೆಚ್ಚ ಮಾಡಲಿಲ್ಲವೆ ? ಜನಗಳು ತೆರಿಗೆ ರೂಪದಲ್ಲಿ ಕೊಟ್ಟ ಹಣವನ್ನು ಯಾವರೀತಿ ದುರುಪಯೋಗ ಮಾಡಿಕೊಂಡಿರಿ ಎಂಬ ಬಗ್ಗೆ ಸ್ಥೂಲವಾಗಿ ವ್ಯವಸ್ಥಿತವಾದ ವಿಚಾರಣೆಯಾಗಬೇಕು. ಬಹುತೇಕ ಕೈಗಾರಿಕೆಗಳಾಗಲೀ ಸಹಕಾರ ಸಂಘಗಳಗಲೀ ಎಲ್ಲಾ ಕಡೆ ವಿವಿಧ ರೀತಿಯಲ್ಲಿ ಭ್ರಷ್ಟಾಚಾರ ಎಂಬುದು ಪರಮಾವಧಿಯನ್ನು ತಲುಪಿದೆ ಭ್ರಷ್ಟಾಚಾರದಿಂದ ಸರ್ಕಾರದ ಕಾರ್ಖಾನೆಗಳಲ್ಲಿ ೩೧೩.೭೦ ನಷ್ಟ ಆಗಿಲ್ಲವೆ ? ಬಹುತೇಕ ಈಗ ಮಾತನಾಡಿದಂತಹ ನನ್ನ ಸ್ನೇಹಿತರೆಲ್ಲಾ ಲೋಕಪಾಲ ಮತ್ತು ಲೋಕಾಯುಕ್ತ ಮಸೂದೆಗಳನ್ನು ತರಬೇಕೆಂದು ಹೇಳುತ್ತಿದ್ದಾರೆ. ಇದುವರೆಗೆ ನೇಮಿಸಿದಂತಹ ಆಯೋಗಗಳ ಶಿಫಾರಸ್ಸಿನ ಮೇರೆಗೆ ಯಾರಿಗಾದರೂ ಶಿಕ್ಷೆ ವಿಧಿಸಿದ್ದಾರೆಯೆ ? ಅಥವಾ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆಯೆ ? ಅಥವಾ ಯಾರನ್ನಾದರೂ ಕಾರಾಗೃಹಕ್ಕೆ ಕಳುಹಿಸಿದ್ದಾರೆಯೇ ಎಂಬುದನ್ನು ತಾವೆಲ್ಲರೂ ಯೋಚನೆ ಮಾಡಬೇಕು. ದೇಶದಲ್ಲಿ ತೆರಿಗೆಗಳನ್ನು ವಿಧಿಸಿ ಜನರ ಹಣದಿಂದ ಆಯೋಗಗಳನ್ನು ನೇಮಕ ಮಾಡಿದರೆ ಸಾಮಾನ್ಯ ಜನರ ಹಿತ ರಕ್ಷಣೆ ಆಯಿತೆ ? ಇದಕ್ಕೆ ಕಾರಣಕರ್ತರು ಯಾರು ? ಆಡಳಿತ ಸೂತ್ರವನ್ನು ಯಾರು ನಡೆಸಿಕೊಂಡು ಹೋಗುತ್ತಾರೆ ಅವರೇ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಕೊಡುತ್ತಾರೆ. ಬೆಂಬಲ ಕೊಡುತ್ತಾರೆ, ಇದು ರಾಜ್ಯದಲ್ಲಿ ಅನುಚಾನವಾಗಿ ಬೆಳೆದುಕೊಂಡು ಬಂದಿರುವ ಶಂಕೆ, ಇದು ನಿವಾರಣೆಯಾಗಬೇಕಾದರೆ ಆಡಳಿತ ನಡೆಸತಕ್ಕವರು ಶೀಲವಂತರಾಗಬೇಕು ಶುದ್ಧಹಸ್ತರಾಗಬೇಕು, ನಿಮ್ಮ ಅವಧಿಯಲ್ಲಿ ನೀವು ಏನು ಮಾಡಿದ್ದೀರಿ ಎಂಬುದರ ಬಗ್ಗೆ ನಿಮ್ಮ ಹೃದಯವನ್ನು ಮುಟ್ಟಿ ನೋಡಿಕೊಳ್ಳಿ, ನೀವು ಸರಿಯಾಗಿ ನಡೆದುಕೊಂಡಿದ್ದರೆ ಜನರು ನೆಮ್ಮದಿಯಾದ ಜೀವನವನ್ನು ನಡೆಸುವುದಕ್ಕೆ ಕಷ್ಟವಾಗುತ್ತಿರಲಿಲ್ಲ. ಪಕ್ಷಾಂತರ ಪಿಡುಗಿನ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಈ ಮನೆಯ, ೨೨೪ ಜನ ಸದಸ್ಯರುಗಳು ದೇಶದ ಆಗುಹೋಗುಗಳ ಬಗ್ಗೆ ಕಾಯಿದೆ ಕಟ್ಟಳೆಗಳನ್ನು ನಿರೂಪಣೆ ಮಾಡುವಂತಹ ವ್ಯಕ್ತಿಗಳಿಗೆ ಪಕ್ಷಾಂತರ ಮಾಡುವುದಿಲ್ಲವೆನ್ನುವ ಬಗ್ಗೆಯೇ ಒಂದು ಕಾಯಿದೆಯನ್ನು ಮಾಡಿಕೊಳ್ಳುವುದು ಸಾಧುವಾದುದಲ್ಲ. ಶಾಸಕರಾಗಿ ಪಕ್ಷಾಂತರ ಮಾಡುತ್ತೇವೆ ಎನ್ನುವ ಭಾವನೆ ನಿಮ್ಮಲ್ಲಿರುವುದಾದರೆ ನೀವು ಏತಕ್ಕಾಗಿ ಕಾಯಿದೆ ಕಾನೂನುಗಳನ್ನು ಮಾಡುತ್ತೀರಿ ? ಯಾರ ಹಿತಕ್ಕಾಗಿ ಕಾಯಿದೆಗಳನ್ನು ತರುತ್ತೀರಿ ? ನೀವು ಜನರ ಪ್ರತಿನಿಧಿಗಳಲ್ಲವೇ ? ಯಾವುದೋ ಒಂದು ಪಕ್ಷದಿಂದ ಆರಿಸಿ ಬಂದಮೇಲೆ ಆದೇ ಪಕ್ಷದಲ್ಲಿ ಮುಂದುವರಿಯಬೇಕು. ನಿಮ್ಮಲ್ಲಿ ನಂಬಿಕೆಯಿಟ್ಟು ಜನಗಳು ಆಯ್ಕೆಮಾಡಿದ್ದಾರೆ. ನಿಮ್ಮ ಸ್ವಾರ್ಥದೃಷ್ಟಿಯಿಂದ ನಿಮ್ಮ ಅಧಿಕಾರ ಲಾಲಸೆಯಿಂದ ಪಕ್ಷಾಂತರ ಮಾಡತಕ್ಕದ್ದು ಸಾಧುವಾದುದಲ್ಲ, ಈ ಬಿಲ್ ಶಾಸಕರನ್ನು ಕೆಳಮಟ್ಟಕ್ಕೆ ತಳ್ಳುವಂತಹ ಬಿಲ್. ನೀವು ಯಾವ್ಯಾವ ಪಕ್ಷದಿಂದ ಆರಿಸಿ ಬಂದಿದ್ದೀರಿ, ನಿಮ್ಮ ಅವಧಿ ಇರುವ ತನಕ ಆ ಪಕ್ಷಗಳಲ್ಲೇ ಇರಿ. ಜನಗಳು ನಿಮ್ಮನ್ನು ಪ್ರೀತಿಯಿಂದ ಆರಿಸಿ ಕಳುಹಿಸಿದ್ದಾರೆ. ಈ ಬಿಲ್‌ನ್ನು ತಂದು ಕಾಯಿದೆಯೊಳಗೆ ಸೇರಿಸತಕ್ಕದ್ದು ಬೇಡ. ಇದನ್ನು ನೋಡಿ ಜನಸಾಮಾನ್ಯರು ನಗುತ್ತಾರೆ. ನಮ್ಮ ಶಾಸಕರು ಪಕ್ಷಾಂತರ ಮಾಡುತ್ತಾರೆಂದು ಹೆದರಿಕೊಂಡು ತರತಕ್ಕ ಈ ಬಿಲ್‌ನ್ನು ನಾನು ಪ್ರಬಲವಾಗಿ ವಿರೋಧಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಹಾಗೆಯೇ ಲೋಕಾಯುಕ್ತ ಬಿಲ್‌ನ್ನು ವಿರೋಧಿಸುತ್ತೀರಾ ?

ಶ್ರೀ ಬಿ. ದೊಡ್ಡಬೋರೇಗೌಡ.—ಯಾವ ಬಿಲ್ ತಂದರೆ ಏನು ಪ್ರಯೋಜನ ಚೌಡಯ್ಯನವರೇ ? ಈ ಬಿಲ್‌ಗಳು ನಮಗೆ ಏತಕ್ಕೆ ಬೇಕು ? ಜನ ನಮಗೆ ಮತ ಕೊಟ್ಟಿದ್ದಾರೆ. ಇಲ್ಲಿರತಕ್ಕ ಅನೇಕ ಜನ ಸಾರ್ವಜನಿಕ ಮುಖಂಡರು ಈ ಬಿಲ್ ಅವಶ್ಯಕವೆಂದು ಹೇಳಿದ್ದಾರೆ, ನಿಮ್ಮ ಸ್ವಾರ್ಥತೆಯನ್ನು ಎತ್ತಿಹಿಡಿಯತಕ್ಕ ಬಿಲ್ ಇವು. ಕಳೆದ ೩೫ ವರ್ಷಗಳಿಂದ ದೇಶದಲ್ಲಿ ಅನ್ಯಾಯ

ವಾಗಿದೆ, ವಿವಿಧ ಇಲಾಖೆಗಳಲ್ಲಿ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗಿದೆ. ಸಹಸ್ರಾರು ಆಯೋಗಗಳನ್ನು ನೇಮಕ ಮಾಡಿದ್ದಾರೆ. ಯಾರನ್ನಾದರೂ ಇದುವರೆಗೆ ಕಾರಾಗೃಹಕ್ಕೆ ಕಳುಹಿಸಿದ್ದೀರಾ ? ಯಾರದಾದರೂ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೀರಾ ? ಕುಂಬಳಕಾಯಿ ಕಳ್ಳ ಅಂದರೆ ಹೆಗಲ ಮುಟ್ಟಿನೋಡಿಕೊಂಡ ಹಾಗೆ, ಇಂತಹ ಬಿಲ್‌ಗಳನ್ನು ತಂದು ಆಯೋಗಗಳನ್ನು ನೇಮಿಸಿ ಬಡವರ ದುಡ್ಡನ್ನು ವಿತಕ್ಕೆ ಹಾಳು ಮಾಡುತ್ತೀರಿ ? ೩೫ ವರ್ಷಗಳ ಹಿಂದೆ ಮಹಾತ್ಮಗಾಂಧಿಯವರು ನಮಗೆ ಸ್ವಾತಂತ್ರ್ಯ ಬೇಕೆಂದು ಹೋರಾಡಿದ್ದು ಇದಕ್ಕೇನು ? ಬಡತನ ರೇಖೆಯ ಕೆಳಗೆ ಇರತಕ್ಕವರು ಶೇಕಡ ೫೩ ಎಂದು ಲೋಕಸಭೆಯಲ್ಲಿ ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ, ಆದರೂ ಪ್ರತಿವರ್ಷ ಜನಗಳ ಮೇಲೆ ತೆರಿಗೆಯನ್ನು ಏರಿ ದುರ್ಬಲವರ್ಗದವರ ಹೆಚ್ಚು ಮಾಡುತ್ತಿದ್ದೀರಿ, ತೆರಿಗೆ ಹಾಕುವುದರಿಂದ ಜನಸಾಮಾನ್ಯರ ಏಳಿಗೆ ಮತ್ತು ಅಭಿವೃದ್ಧಿಯಾಗುವುದಿಲ್ಲ. ಜನತೆಯ ಕಷ್ಟಕಾರ್ಪಣ್ಯಗಳು ನಿವಾರಣೆಯಾಗುವುದಿಲ್ಲ. ತೆರಿಗೆ ಹೊರೆ ಕಡಿಮೆ ಮಾಡಿದರೆ ದೇಶದ ಶ್ರೇಯೋಭಿವೃದ್ಧಿ ಕುಂಠಿತವಾಗುತ್ತದೆಂದು ಹೇಳಬಹುದು. ಆದರೆ ಹಿಂದೆ ಸಹಸ್ರಾರು ರೂಪಾಯಿಗಳ ಹೆಚ್ಚುವರಿ ತೆರಿಗೆಯನ್ನು ಹಾಕಿದರೂ ಬಡತನ ನಿವಾರಣೆ ಆಗಲಿಲ್ಲ. ಕಾಂಗ್ರೆಸ್‌ನ ಸ್ನೇಹಿತರು ಹಾಗೂ ನನ್ನ ಸಹೋದ್ಯೋಗಿಗಳು ದುಃಖ ದುಮ್ಮಾನಗಳನ್ನು ವ್ಯಕ್ತಪಡಿಸುತ್ತಿದ್ದೀರಿ. ನಾವೆಲ್ಲರೂ ಈ ರಾಜ್ಯದ ಸಾರ್ವಜನಿಕ ಅಭಿವೃದ್ಧಿ ಸಲುವಾಗಿ ಟೀಕೆ ಟಿಪ್ಪಣಿ ಮಾಡುವ ಸಂದರ್ಭದಲ್ಲಿ ಹಣ ದುರುಪಯೋಗವಾದ ಸಂದರ್ಭದಲ್ಲಿ ಈ ರಾಜ್ಯದ ಆಡಳಿತ ನಡೆಸತಕ್ಕವರನ್ನು ಟೀಕೆ ಟಿಪ್ಪಣಿ ಮಾಡಿ. ಆದರೆ ಇಲ್ಲಿಯವರೆಗೂ ಆಡಳಿತ ನಡೆಸಿದವರೂ ನಾವಲ್ಲ. ಈಗ ೩೫ ವರ್ಷಗಳು ಕಳೆದು ಹೋಗಿವೆ. ಮೊದಲಿನಿಂದಲೂ ಹಣ ದುರುಪಯೋಗವಾಗಿದೆ ಹಣ ದುರುಪಯೋಗವಾದರೆ ಜನತೆ ದುರ್ಬಲರಾಗುತ್ತಾರೆ. ಇದರಿಂದ ಜನತೆಯ ಕಲ್ಯಾಣವಾಗುವುದಿಲ್ಲ. ಅನೇಕ ಜನ ಕಷ್ಟಕಾರ್ಪಣ್ಯದಲ್ಲಿದ್ದಾರೆ. ನಗರ ಪ್ರದೇಶಗಳಲ್ಲಿರತಕ್ಕ ಕೆಲವು ಜನ ಸುಖಜೀವನ ನಡೆಸಬಹುದು. ಈ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ ೮೦ ಭಾಗದಷ್ಟು ಬಡವರು ನೆಲೆಸಿದ್ದಾರೆ.

೨-೦೦ ಪಿ. ಎಂ.

ಅವರಿಗೆ ಬೇಕಾದಂಥ ನೀರಿನ ಸೌಲಭ್ಯವಿಲ್ಲ. ವಸತಿ ಸೌಕರ್ಯವಿಲ್ಲ. ಅತ್ಯಾವಶ್ಯಕವಾಗಿ ಬೇಕಾಗುವಂತಹ ಔಷಧಿ ಸೌಕರ್ಯವನ್ನು ಒದಗಿಸಿಕೊಡುತ್ತಿಲ್ಲ. ವ್ಯವಸ್ಥಿತವಾದ ಶಿಕ್ಷಣ ಸೌಕರ್ಯವಿಲ್ಲ. ಸರಿಯಾದಂಥ ರಸ್ತೆ ಸೌಕರ್ಯವಿಲ್ಲ. ಅದರಲ್ಲಿಯೂ ಕೂಡ ನಾವು ಸವಿಸ್ತಾರವಾಗಿ ಹೇಳುವುದಾದರೆ, ಇವತ್ತಿನ ದಿವಸ ನಮ್ಮ ಶಿಕ್ಷಣ ಕ್ಷೇತ್ರ ಬಹಳ ಅಧೋಗತಿಗೆ ಇಳಿದಿದೆ. ಶಿಕ್ಷಣ ಇಲಾಖೆ ಇವತ್ತು ವ್ಯಾಪಾರದ ಕೇಂದ್ರವಾಗಿದೆ. ಅನೇಕ ಮೆಡಿಕಲ್ ಕಾಲೇಜ್‌ಗಳಲ್ಲಿ ಮತ್ತು ಇಂಜನೀಯರಿಂಗ್ ಕಾಲೇಜ್‌ಗಳಲ್ಲಿ ರೈತನ ಮಗನಿಗೆ ಸೀಟು ದೊರಕಿಸಿಕೊಳ್ಳಬೇಕಾದರೆ ರೈತನು ಲಕ್ಷಾಂತರ ರೂಪಾಯಿಗಳ ಡೊನೇಷನ್ ಕೊಡಬೇಕಾಗಿದೆ. ಇಷ್ಟೊಂದು ಭಾರೀ ಹಣವನ್ನು ಕೊಟ್ಟು ರೈತ ತನ್ನ ಮಗನಿಗೆ ಸೀಟು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನಮ್ಮ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೬,೬೮೨ ಹಳ್ಳಿಗಳು ಇವೆ. ಅದರಲ್ಲಿಯೂ ಇದುವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರೆಲ್ಲರೂ ಹಳ್ಳಿಯ ಅಭಿವೃದ್ಧಿ ಬಗ್ಗೆ ಮಾತನಾಡಿದರು. ಹಳ್ಳಿಯ ಒಬ್ಬ ರೈತನ ಮಗನಿಗೆ ಈ ಇಂಜನೀಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ಗಳಲ್ಲಿ ಸೀಟು ಸಿಗದೆ ಆತ ತೊಂದರೆ ಪಡುತ್ತಿರುವ ವಿಷಯವನ್ನು ಯಾರೂ ಕೂಡ ಪ್ರಸ್ತಾಪ ಮಾಡಲಿಲ್ಲ. ಎಲ್ಲಾ ಮೆಡಿಕಲ್ ಕಾಲೇಜ್‌ಗಳಲ್ಲಿ ಇವೊತ್ತು ಸೀಟಿನ ದರ ಏರಿಸಿದ್ದಾರೆ. ಮೆಡಿಕಲ್ ಕಾಲೇಜ್‌ಗಳಲ್ಲಿರುವಂತಹ ಎಲ್ಲಾ ಸೀಟುಗಳನ್ನು ಕೂಡ ಶ್ರೀಮಂತ ವರ್ಗದವರು ಖರೀದಿ ಮಾಡಿಕೊಳ್ಳುತ್ತಾರೆ. ಹಳ್ಳಿಯಲ್ಲಿ ವಾಸ ಮಾಡುವಂತಹ ರೈತನು ಖರೀದಿ ಮಾಡುವುದಕ್ಕೆ ಸಾಧ್ಯವೇ ? ಆದ್ದರಿಂದ ನಾನು ಹೇಳುವುದೇನೆಂದರೆ, ಈಗ ಇರುವಂತಹ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. ಮತ್ತು ಶಿಕ್ಷಣ ವ್ಯವಸ್ಥೆಯನ್ನು ಮಾರ್ಪಾಡು ಮಾಡಬೇಕೆಂದು ನಾನು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಸದಸ್ಯರು ಕಟ್ಟಾ ರೈತರು. ಆದ್ದರಿಂದ ರೈತರ ಬಗ್ಗೆ ಸ್ವಲ್ಪ ಹೇಳಿದರೆ ಒಳ್ಳೆಯದು. ಏಕೆಂದರೆ ತಮಗೆ ರೈತರ ಸಮಸ್ಯೆ ಚೆನ್ನಾಗಿ ಅರ್ಥವಾಗಿದೆ.

ಶ್ರೀ ದೊಡ್ಡಬೋರೆಗೌಡ.—ನಮ್ಮ ಮಾನ್ಯ ಚೌಡಯ್ಯನವರಷ್ಟು ಕೃಷಿ ತಜ್ಞರು ; ಅವರು ನಿಂತು ಸ್ವಂತ ಕೃಷಿಯನ್ನು ಮಾಡಿಸುತ್ತಾರೆ. ಆದರೆ ನಾನು ಸ್ವತಃ ಕೃಷಿ ಮಾಡುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ನನ್ನಷ್ಟು ತಾವು ಸ್ವತಃ ಮಾಡುವುದಿಲ್ಲ.

ಶ್ರೀ ದೊಡ್ಡ ಬೋರೇಗೌಡ.—ಸ್ವಾಮಿ, ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಕಾಂಗ್ರೆಸ್ ಸರ್ಕಾರ ಮಾಡಿದಷ್ಟು ಹೊಣಗೇಡಿತನವನ್ನು ನಮ್ಮ ಸರ್ಕಾರ ಮಾಡುವುದಿಲ್ಲವೆನ್ನುವ ಭರವಸೆ ನನಗೆ ಇದೆ ಈ ಸಾರಿಯ ಆಯವ್ಯಯಪಟ್ಟಿಯಲ್ಲಿ ರೈತರ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರವನ್ನು ಒದಗಿಸಿಕೊಡುತ್ತಾರೆಂದು ನಾನು ನಂಬಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೩ ಕೋಟಿ ೨೦ ಲಕ್ಷ ಜನ ರೈತರಿದ್ದಾರೆ. ಆ ರೈತರ ಬಗ್ಗೆ ನಮ್ಮ ಸರ್ಕಾರಕ್ಕೆ ಸ್ವಲ್ಪ ಕಳಕಳಿ ಇರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಶಿವರಾವ್ (ಬಂಟ್ವಾಳ್).—ಸನ್ಮಾನ್ಯ ಅಧ್ಯಕ್ಷರೇ, ನಾನು ವಿಧಾನಸಭೆಗೆ ಮೊಟ್ಟ ಮೊದಲನೆಯ ಬಾರಿಗೆ ಪ್ರವೇಶ ಮಾಡುತ್ತಿದ್ದೇನೆ. ನಾನು ರಾಜ್ಯಪಾಲರ ಭಾಷಣಕ್ಕೆ ನನ್ನ ಸಂಪೂರ್ಣ ಅನುಮೋದನೆಯನ್ನು ವ್ಯಕ್ತಪಡಿಸುತ್ತಾ ಮಾತನಾಡುತ್ತಿಲ್ಲ. ಕಾರಣವೇನೆಂದರೆ ರಾಜ್ಯಪಾಲರ ಭಾಷಣದಲ್ಲಿ ಮಿಶ್ರಪ್ರತಿಕ್ರಿಯೆ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಇವತ್ತು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ಕೂಡ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಕಳೆದ ಸುಮಾರು ಐದೂವರೆ ವರ್ಷಗಳಿಂದ ನಾನು ಕರ್ನಾಟಕದಲ್ಲಿ ಇದ್ದೇನೆ ಎಂದು. ಆದರೆ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಬದಲಾವಣೆಯ ಸರ್ಕಾರ ಬರುವುದಕ್ಕೆ ಕಾರಣ ಕೆಲವು ಪಕ್ಷಗಳ ಬೆಂಬಲವೇ ಕಾರಣವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಆಡಳಿತವನ್ನು ಕಳೆದುಕೊಂಡಿರತಕ್ಕಂಥ ಕಾಂಗ್ರೆಸ್ ಪಕ್ಷ ಇವತ್ತು ಜವಾಬ್ದಾರಿಯುತ ವಿರೋಧಪಕ್ಷವಾಗಿದೆ. ಆದರೆ ಅವರು ಇತರೇ ಪಕ್ಷವನ್ನು ತೆಗಳುವುದಾಗಲಿ ಅಥವಾ ಹೊಗಳುವುದಾಗಲಿ ಸರಿಯಾದುದ್ದಲ್ಲವೆಂದು ನನ್ನ ಅನಿಸಿಕೆ. ನಾನು ಒಂದು ಮಾತನ್ನು ಹೇಳುವುದಾದರೆ, ಹಿಂದಿನ ಕಾಂಗ್ರೆಸ್ ಪಕ್ಷದಿಂದ ಜನತೆ ಬೆಂದು ಕಂಗಾಲಾಗಿ ಹೋಗಿದ್ದಾರೆ. ಈ ಪರಿಸರವನ್ನು ಹೋಗಲಾಡಿಸಲು ನಮ್ಮ ನೂತನ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಅಂತಹ ದಿಕ್ಸೂಚಿ ಏನನ್ನೂ ನಾವು ಕಾಣಲಿಲ್ಲ.

(ಶ್ರೀ ಪಿ. ರಾಂದೇವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಚುನಾವಣೆಯ ಸಂದರ್ಭದಲ್ಲಿ ಜನತಾ ಪಕ್ಷದವರು ಜನರಿಗೆ ಕೆಲವು ಆಶೋತ್ತರಗಳನ್ನು ಕೊಟ್ಟಿದ್ದಾರೆ. ಆ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಸರ್ಕಾರದವರು ಸರ್ವ ಪ್ರಯತ್ನ ಮಾಡಬೇಕು. ತಾವು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮಾರ್ಚಿ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿ ಈಗ ಜೂನ್ ತಿಂಗಳಿಗೆ ಮುಂದೂಡಿದ್ದೀರಿ. ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಬೇಕು. ಇಲ್ಲದಿದ್ದರೆ ಜನತೆ ಪ್ರತಿಭಟನೆ ಮಾಡುತ್ತಾರೆ. ಹಿಂದಿನ ಸರ್ಕಾರವಿದ್ದಾಗ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಲು ಒಂದು ಸುಗ್ರೀವಾಜ್ಞೆಯನ್ನು ತಂದು ಚುನಾವಣೆಯನ್ನು ನಡೆಸಬಹುದಿತ್ತು. ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ, ಪಕ್ಷಾಂತರಿ ನಿಷೇಧ ಮಸೂದೆಯನ್ನು ಜಾರಿಗೆ ತರುವುದು ಬಹಳ ಸೂಕ್ತ. ಆ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಇನ್ನು ಅಲ್ಪಸಂಖ್ಯಾತರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಅಲ್ಪಸಂಖ್ಯಾತರಾದ ಹರಿಜನ ಮತ್ತು ಗಿರಿಜನರಿಗೆ ಹಿಂದಿನ ಸರ್ಕಾರ ವಿಶೇಷ ಗಮನ ಕೊಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಕಾರಣವೇನೆಂದರೆ ನಮ್ಮ ವಿರೋಧಪಕ್ಷದ ನಾಯಕರು ಕಳೆದ ಒಂದು ತಿಂಗಳ ಹಿಂದೆ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಅದೇನೆಂದರೆ ಅವರ ಸ್ವಂತ ಕ್ಷೇತ್ರವಾದ ಕಾರ್ಕಳದಲ್ಲಿ ಒಬ್ಬ ಹರಿಜನ ವ್ಯಕ್ತಿಗೆ ಹೋಟೆಲ್‌ನಲ್ಲಿ ಕಾಫಿ ಕೊಡಲಿಲ್ಲವೆಂದು ಅವರು ಮಾಡಿದಂಥ ಆಪಾದನೆ. ಆದರೆ ನಾನು ಅವರನ್ನು ಕೇಳಬಯಸುತ್ತೇನೆ, ಏನೆಂದರೆ ಸುಮಾರು ೧೦

ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಈ ಒಂದು ನ್ಯೂನತೆಯನ್ನು ಹೋಗಲಾಡಿಸುವುದಕ್ಕೆ ಏತಕ್ಕೆ ಮನಸ್ಸು ಮಾಡಲಿಲ್ಲ ಎಂದು ;

ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುವುದಾದರೆ, ದುರ್ಬಲವರ್ಗದವರ ವಾರ್ಷಿಕ ಆದಾಯ ೨೪೦೦ ರೂಪಾಯಿಗಳು ಎಂದು ಸರ್ಕಾರದವರು ನಿಗದಿ ಮಾಡಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಬೀಡಿ ಸುತ್ತುವ ಕಾರ್ಮಿಕನ ವಾರ್ಷಿಕ ಆದಾಯ ಸುಮಾರು ೨೪೦೦ ರೂಪಾಯಿಗಳಿಗಿಂತ ಜಾಸ್ತಿ ಇರುತ್ತದೆ. ಮತ್ತು ಈ ಒಂದು ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾದರೂ ಕೂಡ ಆ ಗ್ರಾಮದ ಗ್ರಾಮಲೆಕ್ಕಿಗನಿಗೆ ಲಂಚ ಕೊಡಬೇಕು. ಇಲ್ಲದಿದ್ದರೆ ಆತ ಸರ್ಟಿಫಿಕೇಟ್ ಕೊಡುವು ದಿಲ್ಲ. ಈ ಬಗ್ಗೆ ನಾವು ಹಿಂದಿನ ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಿದ್ದೇವೆ. ಆದರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ನಮ್ಮ ಸರ್ಕಾರವಾದರೂ ಈ ಕಡೆ ತಮ್ಮ ಗಮನವನ್ನು ಹರಿಸಿ ಈ ವಾರ್ಷಿಕ ಆದಾಯ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಆಲೋಚನಾ ಬ್ಯಾಂಕ್‌ಗಳೆಂದು ಮಾಡಿದ್ದಾರೆ. ಆದರೆ ಇದು ನನಗೆ ಅರ್ಥವಾಗಿಯೋ ಅಥವಾ ಅರ್ಥವಾಗದೆಯೋ ಒಟ್ಟಿನಲ್ಲಿ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ರೈತರಿಗೆ ಸರಿಯಾದಂಥ ಸೌಲಭ್ಯಗಳು ಸಿಕ್ಕಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರಿಗೆ ಹೆಚ್ಚುವರಿ ಜಮೀನು ಇದೆಯೋ ಅವರಿಂದ ಬಡವರಿಗೆ ಜಮೀನು ಸಿಕ್ಕಿಲ್ಲ. ಸರಿಯಾದ ರೀತಿಯಲ್ಲಿ ಜಮೀನು ವಿತರಣೆಯಾಗಿಲ್ಲ. ಈ ಜಮೀನುಗಳ ಮೇಲೆ ಉಚ್ಚನ್ಯಾಯಾಲಯದಲ್ಲಿ ಕೇಸ್ ಇದ್ದು ಇದಕ್ಕೆ ಸ್ಟೇ ಆರ್ಡರ್ ಕೂಡ ತಂದಿದ್ದಾರೆ. ಇದರಿಂದ ಏನಾಗಿದೆಯೆಂದರೆ ಯಾರಿಗೆ ಭೂಮಿ ಸಿಗಬೇಕಾಗಿತ್ತೋ ಅಂಥವರಿಗೆ ಭೂಮಿ ಸಿಕ್ಕಿಲ್ಲ.

ಅದಕ್ಕೋಸ್ಕರ ಜಿಲ್ಲಾ ಮಟ್ಟದಲ್ಲಿ Appellate Tribunal ರಚನೆ ಮಾಡಿ ಕೆಲವರು ಹೈಕೋರ್ಟಿಗೆ ಬರುವ ಸಂದರ್ಭಗಳನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡು ತ್ತೇನೆ. ಇವತ್ತು ಹರಿಜನ ಗಿರಿಜನರಿಗೆ ಸರಿಯಾದ ರಕ್ಷಣೆ ಸಿಗುತ್ತಿಲ್ಲ. ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ ಗಿರಿಜನರು ಕಾಡಿನಲ್ಲಿ ಬಿದಿರು ತೆಗೆದುಕೊಂಡು ಬಂದು ಬುಟ್ಟಿಗಳನ್ನು ಹೆಣೆದು ಸಂಜೆ ಹೊತ್ತಿಗೆ ಅವು ಗಳನ್ನು ಮಾರಿ ತಮ್ಮ ಅನ್ನದ ಪಾಡನ್ನು ನೋಡಿಕೊಳ್ಳಲು ಪ್ರಯತ್ನ ಮಾಡಿದ ಸಂದರ್ಭದಲ್ಲಿ ಅರಣ್ಯ ಅಧಿಕಾರಿಗಳು ಅವರು ತಯಾರಿಸಿದ ವಸ್ತುಗಳನ್ನು ವಶಪಡಿಸಿಕೊಂಡು ಅವರನ್ನು ಹಿಂಸೆಗೆ ಒಳಪಡಿ ಸಿದ್ದಾರೆ. ಅಲ್ಲಿ ಗಿರಿಜನರಿಗೆ ರಕ್ಷಣೆ ಇಲ್ಲ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ ಸರ್ಕಾರ ದವರು ಇದನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇವತ್ತು ಅಬ್ಕಾರಿ ಇಲಾಖೆಯಿಂದ ನಾಗರಿಕ ರಕ್ಷಣೆ ಹಕ್ಕುಗಳು ಬಹಳಷ್ಟು ಉಲ್ಲಂಘನೆಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಕೆಡೆಗಳಲ್ಲಿ ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿಯವರು ಹತ್ತಾರು ಜನ ಸಮಾಜಘಾತಕ ವ್ಯಕ್ತಿಗಳೊಡನೆ ಸೇರಿಕೊಂಡು ಯಾರ ಮೇಲೆ ಅಸಮಾಧಾನ ಇದೆಯೋ ಅಂತಹವರ ಮನೆಗೆ ಹೋಗಿ ಹಿಂಸಾಚಾರಗಳನ್ನು ನಡೆಸಿದ್ದಾರೆ. ಕಳ್ಳಬಟ್ಟಿ, ಶರಾಬು ತಯಾರು ಮಾಡ ತಕ್ಕವರನ್ನು ಹಿಡಿಯುವಂಥ ಸಂದರ್ಭಗಳನ್ನು ಉಪಯೋಗಿಸಿಕೊಂಡು ತಮಗಾಗದವರ ಮನೆಗೆ ಹೋಗಿ ಅಲ್ಲಿ ಅವರನ್ನು ಹೊಡೆದು, ಬಡಿದು ಹೆದರಿಸುತ್ತಿದ್ದಾರೆ. ಇದನ್ನು ಮೊದಲು ತಡೆಗಟ್ಟಬೇಕು. ಆದ್ದ ರಿಂದ ಅಬ್ಕಾರಿ ಇಲಾಖೆಯವರಿಗೆ ಸ್ಪಷ್ಟವಾದ ನಿರ್ದೇಶನಗಳನ್ನು ಕೊಟ್ಟು ಪೋಲೀಸರಲ್ಲದೆ ಬೇರೆ ಯಾರೂ ಸಮಾಜಘಾತುಕ ಶಕ್ತಿಗಳ ಗುಂಪಿಗೆ ಸೇರಿದ ಜನರು ಯಾರ ಮನೆಗೂ ನುಗ್ಗಬಾರದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಗಾಂಧೀಜಿ ಸಮಾಜವಾದದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಇವತ್ತು ಗಾಂಧೀಜಿ ಸಮಾಜವಾದದಲ್ಲಿ ಎಲ್ಲಕ್ಕಿಂತಲೂ ಮುಖ್ಯವಾಗಿರುವುದು ಸತ್ಯ ಮತ್ತು ಪ್ರಾಮಾಣಿಕತೆ. ಪ್ರಾಮಾಣಿಕತೆ ಯನ್ನು ಕಾರ್ಯಾಚರಣೆಯಲ್ಲಿ ಅಳವಡಿಸಿಕೊಂಡ ನಂತರ ಬೇಕಾದರೆ ಗಾಂಧೀಜಿಯವರ ಹೆಸರು ಹೇಳಿದರೆ ಒಳ್ಳೆಯದು. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಬಹಳಷ್ಟು ಕಡಿಮೆ ಹಣವನ್ನು ಒದಗಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅತಿಯಾದ ಮಳೆ, ನೆರೆಯ ಹಾನಿಗೀಡಾಗಿ ಬಹಳಷ್ಟು ರಸ್ತೆಗಳು ನಾದುರಸ್ತಿಗೊಳಗಾಗಿವೆ. ಇವತ್ತಿನವರೆಗೂ ಈ ಬಗ್ಗೆ ಇಟ್ಟಿರುವ ಮೊಬಲಗು ಏನೇನೂ ಸಾಕಾಗುವುದಿಲ್ಲ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಆದಷ್ಟು ಹೆಚ್ಚಿನ ಗಮನ

ಕೊಟ್ಟು ಹೆಚ್ಚು ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಬೇಕು, ಗ್ರಾಮಾಂತರ ರಸ್ತೆಗಳನ್ನು ಅಭಿವೃದ್ಧಿ ಮಾಡುವಲ್ಲಿ ಹಿಂದೆ ಬೀಳಬಾರದೆಂದು ಈ ಸಂದರ್ಭದಲ್ಲಿ ನಾನು ಸೂಚಿಸಬಯಸುತ್ತೇನೆ.

ಇನ್ನು ಬೀಡಿ ಕಾರ್ಮಿಕರ ವಿಷಯ ಹೇಳಬೇಕೆಂದರೆ, ನಮ್ಮ ಜಿಲ್ಲೆಯಲ್ಲಿ ಲಕ್ಷಾಂತರ ಮಂದಿ ಬೀಡಿ ಕಾರ್ಮಿಕರು ಇದ್ದಾರೆ. ಕಳೆದ ಸದನದಲ್ಲಿ ಕಾಂಗ್ರೆಸ್(ಐ) ಸರ್ಕಾರದವರು ಸಾವಿರ ಬೀಡಿಗೆ ಎಂಟು ರೂಪಾಯಿ ಹತ್ತು ಪೈಸೆ ಕೊಡಬೇಕೆಂದು ನಿಗದಿ ಮಾಡಿದ್ದರು. ಆದರೆ ಅದು ಈಗ ತಪ್ಪಿಹೋಗಿ ಅವರಿಗೆ ಬರೇ ೭ ರೂಪಾಯಿ ೪೦ ಪೈಸೆ ಸಿಗುತ್ತಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ತಿಂಗಳಾಯಿತು. ಈ ವಿಷಯಕ್ಕೆ ತುರ್ತು ಗಮನಕೊಟ್ಟು ಬೀಡಿ ಕೆಲಸಗಾರರಿಗೆ ೮ ರೂಪಾಯಿ ೧೦ ಪೈಸೆ ಕೊಡಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೭೪ರಲ್ಲಿ ಒಂದು ಮಹಾ ನೆರೆ ಬಂದು ಬಡ ರೈತಾಪಿ ಜನರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ತಲಾ ೨,೪೦೦ ರೂಪಾಯಿ ನೀಡಿದ್ದರು. ಇವತ್ತು ಆ ಹಣ ಮರುಪಾವತಿಯಾಗಿಲ್ಲವೆಂದು ಅವರ ಮನೆಗಳು ಜಪ್ತಿಯಾಗುತ್ತಿವೆ. ಮೊನ್ನೆತಾನೆ ಉಡುಪಿಯಲ್ಲಿ ನೆರೆ ಬಂದಾಗ ಸರ್ಕಾರದವರು ೫ ಸಾವಿರದವರೆಗೆ ಹಣ ನೀಡಿದ್ದಾರೆ. ಅದನ್ನು ಮರುಪಾವತಿಯಿಲ್ಲದೇ ಕೊಟ್ಟಿದ್ದಾರೆ. ಆದರೆ ೧೯೭೪ರಲ್ಲಿ ನೆರೆ ಬಂದ ಸಂದರ್ಭದಲ್ಲಿ ಮನೆಮಾರುಗಳನ್ನು ಕಳೆದುಕೊಂಡ ಜನರು ಸರ್ಕಾರದಿಂದ ಹಣ ತೆಗೆದುಕೊಂಡಿದ್ದಕ್ಕೆ ಅದನ್ನು ಮರುಪಾವತಿ ಮಾಡಿಲ್ಲವೆಂದು ಅವರ ಮನೆಗಳನ್ನು ಜಪ್ತಿಮಾಡುತ್ತಿದ್ದಾರೆ. ಆದ್ದರಿಂದ ೧೯೭೪ರಲ್ಲಿ ಸರ್ಕಾರದವರು ಕೊಟ್ಟಿದ್ದ ಸಾಲವನ್ನು ಮನ್ನಾ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ ಇವತ್ತು ನನಗೆ ಮಾತನಾಡಲು ಅವಕಾಶ ಒದಗಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).— ಮಾನ್ಯ ಅಧ್ಯಕ್ಷರೇ, ಸುಮಾರು ೩೨ ವರ್ಷಗಳಿಂದ ಈ ವಿಧಾನಸಭೆಯಲ್ಲಿ ಎಷ್ಟೋಸಾರಿ ನಮ್ಮ ಸಮಾಜದ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಮತ್ತು ಹಿಂದುಳಿದ ಜನಗಳ ಬಗ್ಗೆ ಭಾಷಣಗಳನ್ನು ಕೇಳುತ್ತಿದ್ದೇವೆ. ಈ ೩೨ ವರ್ಷಗಳಲ್ಲಿ ಎಷ್ಟೋ ಸರ್ಕಾರಗಳು ಬಂದವು, ಎಷ್ಟೋ ಸರ್ಕಾರಗಳು ಹೋದವು. ಸರ್ಕಾರ ಬರುತ್ತದೆ, ಸರ್ಕಾರ ಹೋಗುತ್ತದೆ. ಯಾವುದೇ ಪಕ್ಷವಾಗಲಿ, ಆರು ಸರ್ಕಾರಗಳು ಬಂದು ಹೋಗಿ ಇದೀಗ ಏಳನೇ ಸರ್ಕಾರ ಬಂದಿದೆ. ಒಂದು ಮಾತನ್ನು ಮಾತ್ರ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾವೇನೋ ಭಾಷಣ ಮಾಡುತ್ತೇವೆ. ವಿಧಾನಸಭೆಯಲ್ಲಿ ಮಾಡಿದ ಭಾಷಣಗಳ ಪುಸ್ತಕಗಳನ್ನು ಇಟ್ಟುಕೊಳ್ಳುವುದಕ್ಕೆ ಜಾಗ ಇಲ್ಲ, ಯಾವ ಉದ್ದೇಶದಿಂದ ನಾವು ಈ ಜನಗಳ ಅಭ್ಯುದಯದ ಬಗ್ಗೆ ಮಾತನಾಡಿದ್ದೇವೆ, ವಿಚಾರಗಳನ್ನು ಮಾಡಿದ್ದೇವೆ ಅದರ ಬಗ್ಗೆ ಕೆಲಸ ಮಾತ್ರ ಏನೂ ಆಗಲಿಲ್ಲ ಎನ್ನತಕ್ಕಂತಾದ್ದು ಮಾತ್ರ ಸ್ಪಷ್ಟವಾಗಿದೆ. ನಾವು ಗೀತೆಯನ್ನು ಹೇಳುತ್ತೇವೆ. ಪುರಾಣ ಪುಣ್ಯಕತೆಗಳ ಬಗ್ಗೆ ಹೇಳುತ್ತೇವೆ. ಚರಿತ್ರೆಗಳ ಬಗ್ಗೆ ಹೇಳಿ ಶೀಲ ಮತ್ತು ಶೀಲವಂತರ ಬಗ್ಗೆ ಮಾತನಾಡುತ್ತೇವೆ. ಆದರೆ ಕಾರ್ಯದಲ್ಲಿ ಮಾತ್ರ ಏನೂ ಆಗಿಲ್ಲ. ಮೂವತ್ತೈದು ವರ್ಷಗಳಿಗೆ ಮೊದಲು ಯಾವ ಜೀವನ ಮೌಲ್ಯಗಳು ಇದ್ದವೋ ಅದನ್ನೆಲ್ಲಾ ಇಂದು ನಾವು ಕೆಳಮಟ್ಟಕ್ಕೆ ತಂದು ಕಳೆದುಕೊಂಡುಬಿಟ್ಟಿದ್ದೇವೆ. ಇಂದು ಮೂರು ಅಂಶಗಳು ಮಾತ್ರ ಉಳಿದಿದೆ. ಅಧಿಕಾರ, ಪಕ್ಷ ಮತ್ತು ಜಾತಿ ಇವು ಮೂರು ಮಾತ್ರ ಉಳಿದಿದೆ. ನೀತಿಯನ್ನು ಮರೆತಿದ್ದೇವೆ. ಆತ್ಮಗೌರವವನ್ನು ಮರೆತಿದ್ದೇವೆ. ಒಂದು ಸಾಧಾರಣ ಹಳ್ಳಿಯಲ್ಲಿ ಒಬ್ಬ ಮನುಷ್ಯ ಒಂದು ಮಾತುಕೊಟ್ಟು ಆ ಮಾತು ವಿರುದ್ಧವಾಗಿ ನಡೆದುಕೊಂಡರೆ ಅವನಿಗೆ ಪ್ರಾಣ ಹೋದಂತೆ ಆಗುತ್ತದೆ. ಆದರೆ ಒಂದು ಲಕ್ಷ ಜನರಿಂದ ಆರಿಸಿಬಂದು ಈ ಕಡೆಗೆ ಆ ಕಡೆಗೆ ಅಧಿಕಾರಕ್ಕಾಗಿ ಹೋಗುವ ಜನರಲ್ಲಿ ಈ ದೇಶದಲ್ಲಿ ಯಾವ ನೈತಿಕ ಮೌಲ್ಯಗಳು ಉಳಿದಿವೆ ? ಯಾವ ಸಿದ್ಧಾಂತ ಇಂದು ಜೀವಂತವಾಗಿ ಉಳಿದಿದೆ ? ಕಳೆದುಕೊಳ್ಳುವವರು ಕಳೆದುಕೊಳ್ಳುತ್ತಿದ್ದಾರೆ, ಹೋಗುವವರು ಹೋಗುತ್ತಿದ್ದಾರೆ. ಬರುವವರು ಬರುತ್ತಿದ್ದಾರೆ. ಪ್ರತಿಯೊಬ್ಬರೂ ಹರಿಶ್ಚಂದ್ರನ ಮೊಮ್ಮಕ್ಕಳೇ ಇವತ್ತು, ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಹುದು. ಇವತ್ತು ಅಧಿಕಾರವೇ ದೇವರು ಎಂದು ತೀರ್ಮಾನ ಮಾಡಿದ್ದೇವೆ ಇದರ ಬಗ್ಗೆ ಹಿಂದೆ ಸಾಕಷ್ಟು ಚರ್ಚೆ ಕೂಡ ಮಾಡಿದ್ದೇವೆ. ವಿಧಾನಸೌಧದ ಮುಂದೆ ಸರ್ಕಾರದ ಕೆಲಸ ದೇವರ ಕೆಲಸ

ಎಂದು ಬರೆಯಲಾಗಿದೆ. ನಾನು ಹೇಳುತ್ತೇನೆ, ಸರ್ಕಾರವೇ ದೇವರು ಅಲ್ಲ ಎಂದು, ಇದು ನಾಚಿಕೆಗೇಡಿನ ಮಾತು. ಸರ್ಕಾರವೇ ದೇವರು ಎಂದರೆ ಪ್ರತಿಯೊಬ್ಬ ಅಧಿಕಾರಿಯೂ ತಾನೇ ದೇವರು ಎಂದು ತಿಳಿದುಕೊಂಡು ಬಿಡುತ್ತಾನೆ. ಯಾರು ಯಾರು ಖುರ್ಚಿ ಮೇಲೆ ಬರುತ್ತಾರೆ ಹೋಗುತ್ತಾರೆ ಎನ್ನುವುದು ಮುಖ್ಯವಲ್ಲ, ಜನತೆಯ ಮುಂದೆ ಘೋಷಣೆ ಮಾಡುವುದು ಒಂದು, ಆಚರಣೆಗೆ ತರುವುದು ಮತ್ತೊಂದು ಆಗಬಾರದು. ನಮ್ಮ ಇಡೀ ಸಮಾಜ ಈ ಪ್ರಕಾರವಾಗಿ ನಡೆಯುತ್ತಿದೆ. ಮೊನ್ನೆ ಮುಖ್ಯಮಂತ್ರಿಯವರು ಮಾತನಾಡಿದರು. ಅವರ ಮಾತುಗಳನ್ನು ನಾನು ಮನವರಿಕೆ ಮಾಡಿಕೊಂಡಿದ್ದೇನೆ. ಇದಕ್ಕೆ ಜವಾಬ್ದಾರರು ಯಾರು ? ಕಾಂಗ್ರೆಸ್‌ನವರು ಇದಕ್ಕೆ ಜವಾಬ್ದಾರರೆ ? ಜನತಾ ಪಕ್ಷದವರು ಇದಕ್ಕೆ ಜವಾಬ್ದಾರರೆ ? ಇಡೀ ಸಮಾಜವೇ ಇದಕ್ಕೆ ಕಾರಣ. ಡೆಮೊಕ್ರಸಿಯಲ್ಲಿ, ಲೋಕಶಾಹಿಯಲ್ಲಿ ಪ್ರಜಾತಂತ್ರ ಪದ್ಧತಿಯಲ್ಲಿ ಎಂತಹ ಜನರನ್ನು ತಮ್ಮ ಪ್ರತಿನಿಧಿಯಾಗಿ ಜನರು ಆರಿಸುತ್ತಾರೆ ಎಂಬುದು ಮುಖ್ಯ ಅಂಶ. ನೂರು ಜನರು ಓಟು ಚಲಾಯಿಸಿದರೆ ಅವರಲ್ಲಿ ತೊಂಬತ್ತು ಜನರು ಕುಡುಕರು ಇರುತ್ತಾರೆ, ಕಟುಕರು ಇರುತ್ತಾರೆ. ಇಂತಹವರು ಎಂತಹ ಜನರನ್ನು ಆರಿಸುತ್ತಾರೆ. ಸಮುದ್ರದ ನೀರು ಉಪ್ಪು, ಸಮುದ್ರದ ನೀರನ್ನು ಲೋಟದಲ್ಲಿ, ಕೊಡದಲ್ಲಿ ಯಾವ ಸ್ಥಳದಲ್ಲಿ ಇಟ್ಟರೂ ಅದು ಉಪ್ಪು ನೀರೇ. ನಮ್ಮ ಸಮಾಜವೂ ಅದೇ ರೀತಿ ಇದೆ. ಈ ಸಮಾಜದಲ್ಲಿ ಆರಿಸಿ ಬಂದವರು ಒಬ್ಬರಮೇಲೆ ಒಬ್ಬರು ಕೂಡುತ್ತಾರೆ. ಈ ಪ್ರಕಾರ ನಮ್ಮ ರಾಜ್ಯದಲ್ಲಿ ಆಗುತ್ತಿದೆ. ವಿಧಾನಸೌಧದಲ್ಲಿ ನಾವು ನೋಡುತ್ತಿದ್ದೇವೆ.

ಅದೇ ಪ್ರಕಾರ ಹೆಣ್ಣುಮಕ್ಕಳ ಮಾನಾಪಹರಣ ಮಾಡುವುದು, ಮರ್ಡರ್ ಮಾಡುವುದು, ಕೊಲೆ ಆಗುವುದು ನಡೆದರೆ ರಾಜ್ಯದಲ್ಲಿ ಅಶಾಂತಿ ಉದ್ಭವವಾಗುವುದು. ಇಂಥಾದ್ದು ನಡೆಯುತ್ತಿದ್ದರೆ ಶಾಸಕರಾಗಿ ನಮ್ಮ ಕರ್ತವ್ಯವೇನು? ಅದನ್ನು ತಿಳಿದುಕೊಂಡು ಯಾರೂ ಕೆಲಸ ಮಾಡುತ್ತಿಲ್ಲ. ನಮ್ಮ ಜೊತೆಗೆ ರಾಜ್ಯದಲ್ಲಿರತಕ್ಕಂತಹ ಎಲ್ಲರ ಕರ್ತವ್ಯವೇನು? ಎಂದೂ ಯಾರೂ ಇದನ್ನು ತಿಳಿದುಕೊಂಡಿಲ್ಲ. ಆದರು ಇವತ್ತು ಪಕ್ಷ ಹಾಗೂ ಜಾತಿಗಳು ಉಳಿದಿವೆ. ಅವುಗಳು ಏತಕ್ಕಾಗಿ ಉಳಿದಿವೆ ಎಂದರೆ ಅಧಿಕಾರಕ್ಕಾಗಿ ಉಳಿದಿವೆ ಎಂಬುದಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಬಹಳ ಅಭ್ಯಾಸ ಮಾಡಿ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ ಸರ್ಕಾರದಲ್ಲಿ ಅವರ ಮಾತುಗಳನ್ನು ಯಾರೂ ಕೇಳುತ್ತಿಲ್ಲವಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಕುಡಿಯುವ ನೀರಿನ ಬಗ್ಗೆ ಹಿಂದೆ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಂತ್ರಿಗಳು ಆಶ್ವಾಸನೆಯನ್ನು ಕೊಡುತ್ತಾರೆ, ರಾಜ್ಯಪಾಲರು ತಮ್ಮ ೧೭-೩-೧೯೭೮ರಲ್ಲಿ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ.—

> "At the present progress Government hope that all the Villages in the State will be provided with protected water by March 1979"

ಆದರೆ ೧೯೮೨ನೇ ಇಸವಿಯಲ್ಲಿ ನೋಡಿದರೆ, ನಮ್ಮ ರಾಜ್ಯದಲ್ಲಿ ಇನ್ನೂ ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರು ಇಲ್ಲದೇ ಇರುವಂತಹದ್ದನ್ನು ನೋಡುತ್ತೇವೆ. ಇವತ್ತೂ ಅದೇ ಒಂದು ಪರಿಸ್ಥಿತಿ ಇದೆ.

ಶ್ರೀ ಕೆ.ಜಿ ಮಹೇಶ್ವರಪ್ಪ.—೧೯೮೦-೮೧ನೇ ಸಾಲಿನಲ್ಲೂ ಅದನ್ನೇ ಹೇಳಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಪಕ್ಷದ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಅಲ್ಲಿ ಕುಳಿತಾಗ ಒಂದು ಮಾತನಾಡುವುದು, ಇಲ್ಲಿ ಕುಳಿತಾಗ ಒಂದು ಮಾತನಾಡುವುದು ನನಗೆ ಅಭ್ಯಾಸ ಇಲ್ಲ. ಈ ವಿಚಾರದಲ್ಲಿ ಆ ಪಕ್ಷ ಈ ಪಕ್ಷ ಎಂಬುದನ್ನು ಬಿಟ್ಟು ಎಲ್ಲರೂ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನನಗೆ ಒಂದು ಗಾದೆ ನೆನಪಿಗೆ ಬರುತ್ತದೆ. ಅದೇನೆಂದರೆ, ಹಳದಿ ಬಣ್ಣದ ರೋಗ ಬಂದಿರುವವರ ಕಣ್ಣಿಗೆ ಕಾಣುವುದೆಲ್ಲಾ ಹಳದಿಯಾಗಿರುತ್ತದೆ. ನಾನು ಅಲ್ಲೂ ಕೂಡ ಅಂದರೆ ರೂಲಿಂಗ್ ಪಾರ್ಟಿಯಲ್ಲಿ ೩ ವರ್ಷ ಇದ್ದವನು. ಇವತ್ತು ನನಗನ್ನಿಸುತ್ತದೆ ಸರಿಯಾದ ಸ್ಥಳಕ್ಕೆ ಬಂದಿದ್ದೇನೆಂದು. ಅಧಿಕಾರಕ್ಕೆ ಯಾರೇ ಬರಲಿ, ಯಾವ ಪಕ್ಷವೇ ಬರಲಿ, ಈ ಒಂದು ಸಮಸ್ಯೆಯನ್ನು ಯಾರೂ

ಬಗೆಹರಿಸಲಿಲ್ಲ. ಅಧಿಕಾರಕ್ಕೆ ಬಂದಮೇಲೆ ವಿಚಾರಗಳು ಬದಲಾಗುತ್ತವೆ. ನನಗೆ ಅಕ್ಬರನ ಒಂದು ಕಥೆ ನೆನಪಿಗೆ ಬರುತ್ತದೆ ಅಕ್ಬರ್ ಒಂದು ದಿವಸ ಹಜಾಮತ್ ಮಾಡಿಸಿಕೊಳ್ಳಲು ಕುಳಿತ್ತಿದ್ದನಂತೆ. ಈ ಕಡೆ ಹಜಾಮತ್ ಎನ್ನುವುದಕ್ಕೆ ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಆ ಹಜಾಮ ಹಜಾಮತ್ ಮಾಡುತಾ ಮಧ್ಯೆದಲ್ಲಿ ಅಕ್ಬರ್‌ನ್ನು ಕುರಿತು, ನಿಮ್ಮ ಮಗಳನ್ನು ನನ್ನ ಮಗನಿಗೆ ತಂದುಕೊಂಡು ನಿಮ್ಮ ಜೊತೆ ನಂಟಸ್ಥಾನ ಮಾಡಬೇಕೆಂದಿದ್ದೇನೆ. ಇದನ್ನು ತಾವು ಒಪ್ಪುತೀರಾ ಎಂಬುದಾಗಿ ಕೇಳಿದನಂತೆ. ಆಗ ಅಕ್ಬರ್ ಮುಖಕ್ಷೌರ ಮುಗಿದ ಮೇಲೆ ಬೀರಬಲ್ಲನಿಗೆ ಈ ವಿಚಾರವನ್ನು ತಿಳಿಸಿದನಂತೆ. ಆಗ ಬೀರಬಲ್ಲನು ನೀವು ಕುಳಿತಿದ್ದಂತಹ ಜಾಗವನ್ನು ಬದಲಾವಣೆ ಮಾಡಿ ಎಂಬುದಾಗಿ ಹೇಳಿದನಂತೆ ಆಗ ಅಕ್ಬರ್ ಮಾರನೆ ದಿವಸ ಮಾಮೂಲಿ ಜಾಗವನ್ನು ಬಿಟ್ಟು ಬೇರೆ ಕಡೆ ಕುಳಿತುಕೊಂಡು ಮುಖಕ್ಷೌರ ಮಾಡಿಸಿಕೊಂಡಾಗ, ಆ ಹಜಾಮನು ಯಾವುದೇ ರೀತಿಯ ಮಾತನ್ನು ಹೇಳದೆ ಸುಮ್ಮನೆ ಹಜಾಮತ್ ಮಾಡಿದನಂತೆ. ಈ ವಿಚಾರವನ್ನು ಮತ್ತೆ ಬೀರಬಲ್ಲನಿಗೆ ಅಕ್ಬರ್ ತಿಳಿಸಿದನಂತೆ. ಆಗ ಬೀರಬಲ್ ಮತ್ತೆ ಮಾಮೂಲಿ ಜಾಗದಲ್ಲಿ ಕುಳಿತುಕೊಳ್ಳಿ ಎಂಬುದಾಗಿ ಹೇಳಿದನಂತೆ, ಆಗ ಮಾಮೂಲಿ ಜಾಗದಲ್ಲಿ ಕುಳಿತುಕೊಂಡಾಗ ಆ ಹಜಾಮ ಮತ್ತೆ ಅದೇ ಮಾತನ್ನು ಹೇಳಿದನಂತೆ. ಆಗ ಬೀರಬಲ್ಲನು ಹೇಳಿದ ನೀವು ಕುಳಿತಿದ್ದಂತಹ ಜಾಗದಲ್ಲೆ ದೊಡ್ಡ ಸಂಪತ್ತು ಇದೆ. ಅದನ್ನು ಅಗೆದು ತೆಗೆಯಿಸಿ ಎಂಬುದಾಗಿ ಹೇಳಿದನಂತೆ. ಅಲ್ಲಿ ಭೂಮಿಯನ್ನು ಅಗೆದು ತೆಗೆದಾಗ ಅಪಾರ ಸಂಪತ್ತು ಸಿಕ್ಕಿತಂತೆ. ಆದ್ದರಿಂದ ಈ ಅಧಿಕಾರದ ಜಾಗಕ್ಕೆ ಯಾರೇ ಬರಲಿ, ಆ ಸ್ಥಾನ ಆ ರೀತಿ ಮಾಡಿಸುತ್ತದೆ. ಆ ಸ್ಥಾನಕ್ಕೆ ಬಂದ ತಕ್ಷಣ ನಾನೇ ಸಾರ್ವಭೌಮ ಎಂದು ಮಾತನಾಡುತ್ತಾರೆ. ಜನತೆಯ ಜನಾಧರಣೆ ಎಂಬುದಾಗಿ ಹೇಳಿ ಆ ಜಾಗಕ್ಕೆ ಬಂದ ಮೇಲೆ ಅವರ ತಲೆಯ ಮೇಲೆ ಕೈಹಾಕುವುದು. ಈ ಕೆಲಸ ನಡೆಯುತ್ತದೆ. ಇದನ್ನು ಯಾರೂ ತಿಳಿದು ಮಾಡುವುದಿಲ್ಲ. ಅವರಿಗೆ ಆ ರೀತಿ ಮಾಡುತ್ತಿದ್ದೇವೆಂದು ಗೊತ್ತಾಗುವುದಿಲ್ಲ. ನಾವು ಆರಿಸಿ ಬಂದಿರುವುದು ಜನರ ರಕ್ಷಣೆಯನ್ನು ಕಾಪಾಡುವುದಗೋಸ್ಕರ ಎಂಬುದನ್ನು ತಿಳಿದುಕೊಳ್ಳುವುದೇ ಇಲ್ಲ. ಆ ರೀತಿ ಇದುವರೆವಿಗೂ ಮಾಡಿದ್ದರಿಂದ ಈ ಪರಿಸ್ಥಿತಿ ಬಂದಿದೆ. ರೀಜನಲ್ ಕಮಿಟಿಗಳನ್ನು ಮಾಡುವಂತಹ ಭಾವನೆಗಳನ್ನು ಸರ್ಕಾರ ಇಟ್ಟುಕೊಂಡಿದೆ. ಅದು ವಾಸ್ತವಿಕವಾಗಿ ಆಗಲಿಲ್ಲ. ನಾವು ಆರಿಸಿ ಬಂದಿರುವುದು ಜನರ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಾಗಿ. ಆದ್ದರಿಂದ ಆ ಪಾರ್ಟಿ ಈ ಪಾರ್ಟಿ ಎಂಬುದನ್ನು ಬಿಟ್ಟುಬಿಡಬೇಕು ಯಾವ ಕೆಲಸವನ್ನು ಮಾಡುವುದಕ್ಕೆ ಬಂದಿದ್ದೇವೆಂದು ಇಡೀ ಸಮಾಜದ ೩ ಕೋಟಿ ೭೩ ಲಕ್ಷ ಜನ ನಮ್ಮ ಕಡೆ ನೋಡುತ್ತಿದ್ದಾರೆ. ನಾವು ಇಲ್ಲಿ ಮಾತನಾಡತಕ್ಕಂತಹ ಕೆಲಸದ ಬಗ್ಗೆ ಜನರು ಕೇಳಿದರೆ ನಾವು ಅವರನ್ನು ಆರಿಸಿ ಕಳುಹಿಸಿದ್ದು ಮೋಸವಾಯಿತು ಎಂಬುದಾಗಿ ತಿಳಿದುಕೊಳ್ಳುತ್ತಾರೆ. ಆದ್ದರಿಂದ ಅವರಿಗೆ ಶಾಂತಿ ಬೇಕು. ರಕ್ಷಣೆ ಬೇಕು. ಆತ್ಮ ರಕ್ಷಣೆ ಬೇಕು. ಅಂತಹ ಸಮಾಜ ಇವತ್ತು ಇರಬೇಕು. ಅದನ್ನು ಬಿಟ್ಟು ಹಿಂದಿನವರ ಕಾಲದಲ್ಲಿ ೪ ಕೊಲೆಗಳಾಗಿದ್ದರೆ ನನ್ನ ಕಾಲದಲ್ಲಿ ೮ ಕೊಲೆಗಳನ್ನು ಮಾಡಿಸುತ್ತೇನೆ ಎಂಬುದಾಗಿ ಹೇಳುವುದು ಸರಿಯಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಸ್ವಲ್ಪ ಮಾತನ್ನು ನಮೂದಿಸಿದ್ದಾರೆ. ವಿರೋಧಪಕ್ಷದಲ್ಲಿ ಕುಳಿತು ವಿರೋಧ ಮಾಡಬೇಕೆಂದಲ್ಲ. ಪಕ್ಷ ಯಾವುದೇ ಇರಲಿ. ಪ್ಯಾರಿಟಿ ಪ್ರೈಸ್ ಫಾರ್ ಅಗ್ರಿಕಲ್ಚರಿಸ್ಟ್ಸ ಮಾಡಬೇಕೆಂಬುದು ಜನತಾ ಪಕ್ಷದ ಒಂದು ನಿಯಮ ಅಂತ ಹೇಳಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಂದುವರಿದು ರೈತರ ಸಂಕಷ್ಟಗಳನ್ನು ಪರಿಹರಿಸುವ ಕಡೆ ಗಮನ ಕೊಡುತ್ತಾರೆಂದು ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ ಅದನ್ನು ಮಾಡಬೇಕು ಅದೇ ರೀತಿ ಅಂತ್ಯೋದಯ ಯೋಜನೆಯಲ್ಲಿ ಯಾರೂ ಗರೀಬರಿದ್ದಾರೆ, ಅವರನ್ನು ಮೇಲಕ್ಕೆ ಎತ್ತತಕ್ಕಂತಹ ಪ್ರಯತ್ನವನ್ನು ಮಾಡಬೇಕು. ಇದು ಎಷ್ಟೋ ವರ್ಷಗಳಿಂದ ನಡೆಯುತ್ತಿದೆ. ಯಾರು ತೀರ ಬಡವರಿದ್ದಾರೆ ಅಂತಹವರನ್ನು ಮೇಲಕ್ಕೆ ಎತ್ತುವಂತಹ ಪ್ರಯತ್ನ ಒಳ್ಳೆಯದು. ಮತ್ತೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ರಾಜ್ಯಪಾಲರು ಹೇಳಿದ್ದಾರೆ. ಇದನ್ನು ನಾನು ೧೨ ವರ್ಷಗಳಿಂದಲೂ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಹಣಕಾಸಿನ ಸಚಿವರೂ ಸಹ ಹೌದು. ಮೊನ್ನೆ ಶ್ರೀ ಎಸ್.ಕೆ.ಡೇ ರವರು ಬಂದಾಗ There is no Panchayat Raj and Panchayat Act at all in Karnataka ಎಂದು ಹೇಳಿದರು. ಇದನ್ನು ೨೦ ವರ್ಷಗಳಿಂದಲೂ ಮಾಡುತ್ತಿದ್ದಾರೆ. ಈಗ ಅದು ಭಿಕ್ಷುಕರಂತಾಗಿದೆ. ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಭಿಕ್ಷುಕರಂತಾಗಿದ್ದಾರೆ. ಇರತಕ್ಕಂತಹ ಎಲ್ಲಾ ಅಧಿಕಾರವನ್ನು ಕೇಂದ್ರೀಕರಣ ಮಾಡಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮಾಡುವುದು ಒಳ್ಳೆಯದು. ಅದನ್ನು ಸ್ವಾಗತ

ಮಾಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮತ್ತೊಂದು ಮುಖ್ಯವಾದ ಅಂಶ ಬರಬೇಕಾಗಿತ್ತು. ಕಾರಣ ಮದ್ಯಪಾನದ ಬಗ್ಗೆ ಒಂದು ಶಬ್ದವನ್ನೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿಲ್ಲ. In the Governor's Address delivered to the Legislature on 24th January 1983 it is said.

> "My Government believes in the Philosophy of development of Mahatma Gandhi who wanted to wipe every tear from every eye".

ಮಹಾತ್ಮಗಾಂಧಿಯವರ ತತ್ವದಲ್ಲಿ ನಂಬಿಕೆ ನನ್ನ ಸರ್ಕಾರಕ್ಕೆ ಇದೆ ಎಂಬುದಾಗಿ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಒಳ್ಳೆಯದು. ಮಹಾತ್ಮಗಾಂಧಿಯವರು ಈ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸತ್ಯಾಗ್ರಹವನ್ನು ಮಾಡಿದಂತಹ ಪೂಜ್ಯರು ಹೌದು. ಮಹಾತ್ಮಗಾಂಧೀಜಿಯವರ ತತ್ವದಲ್ಲಿ ನಂಬಿಕೆ ಇದೆ ಎಂಬುದಾಗಿ ಹೇಳತಕ್ಕಂತಹವರು ಅವರ ಭಾಷಣದಲ್ಲಿ ಅದರ ಬಗ್ಗೆ ಒಂದು ಮಾತನ್ನೂ ಹೇಳದಿರುವುದು ಅತ್ಯಂತ ವಿಷಾದಕರ ಸಂಗತಿ. ಅದನ್ನು ನಾನು ಖಂಡಿಸುತ್ತೇನೆ.

ಕುಡಿಯುವ ನೀರಿನ ಬಗ್ಗೆ ನಿಜಕ್ಕೂ ಕೆಲಸ ಆಗಬೇಕು ಅಂತ ಹೇಳುತ್ತಿದ್ದಾರೆ. ಆದರೆ ಇವತ್ತಿಗೂ ಸುಮಾರು ೪೦೦ ರಿಂದ ೬೦೦ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ. ನಮ್ಮ ಜಿಲ್ಲೆಗೆ ಹಿಂದೆ ಒಂದು ಸಾರಿ ಮಂತ್ರಿಗಳು ಬಂದಾಗ ಕುಡಿಯುವ ನೀರಿನ ಬಗ್ಗೆ ಇರತಕ್ಕಂತಹ ತೊಂದರೆಯ ಬಗ್ಗೆ ವಿವರಿಸಿದಾಗ ಅವರು ಇದಕ್ಕಾಗಿ ಒಂದು ಕೋಟಿ ರೂಪಾಯಿ ಹಣವನ್ನು ಕೊಡುತ್ತೇವೆಂದು ಹೇಳಿದರು. ಆದರೆ ಕೊಟ್ಟದ್ದು ೧೦ ಲಕ್ಷ ರೂಪಾಯಿಗಳು. ಅವರು ಕೊಟ್ಟಂತಹ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾಲ್ಕು ದಿವಸ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದರು. ೪ ದಿವಸ ಕಳೆದ ಮೇಲೆ ಮತ್ತೆ ಯಥಾಪ್ರಕಾರ ೧೯೬೨ ರಿಂದ ಇಲ್ಲಿಯವರೆವಿಗೂ ನಡೆದುಕೊಂಡು ಬಂದಿದೆ. ಶಾಶ್ವತವಾಗಿ ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಲಿಲ್ಲ.

೨-೩೦ ಪಿ.ಎಂ.

ಈವೊತ್ತಿನ ದಿವಸ ವಾಸ್ತವಿಕವಾದ ಅಂಶ ಏನು ಇದೆ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಬೆಳಕು ಚೆಲ್ಲಲಿಲ್ಲ. ನಮ್ಮ ಬೀದರ್ ಜಿಲ್ಲೆಗೆ ರಿಗ್ಸ್ ಕಳುಹಿಸಿಕೊಡುತ್ತೇವೆಂದು ಹೇಳಿದರೂ, ಇದುವರೆಗೂ ಕೂಡ ನಮಗೆ ರಿಗ್ಸ್ ಬರಲಿಲ್ಲ. ನಮ್ಮ ಜಿಲ್ಲೆಯಲ್ಲಿರುವ ೬೦೦ ಹಳ್ಳಿಗಳ ಪೈಕಿ ಸುಮಾರು ೪೦೦ ಹಳ್ಳಿಗಳಿಗೆ ಕುಡಿಯುವ ನೀರನ್ನೇ ಇನ್ನೂ ಒದಗಿಸಿಲ್ಲ. ೧೯೬೨-೬೩ ರಿಂದ ಈ ನೀರಿನ ಕ್ಷಾಮ ಇದೆ, ಅದರ ಬಗ್ಗೆ ಇನ್ನೂ ಸರಿಯಾದ ಒಂದು ವ್ಯವಸ್ಥೆ ಆಗಿಲ್ಲ. ೧೫ ದಿವಸದ ಹಿಂದೆ ಜಿಲ್ಲಾಧಿಕಾರಿಗಳನ್ನು ನಾವು ನೋಡಿದ್ದೆ. ನನ್ನ ಹತ್ತಿರ ರಿಕಾರ್ಡ್ಸ್ ಇದೆ, ಅದನ್ನು ಈಗ ಹೇಳಲು ವೇಳೆ ಇಲ್ಲ. ನೀವು ಭಾಲ್ಕಿಗೆ ೩ ಲಕ್ಷ ಹಣ ಕೊಟ್ಟಿದ್ದೇವೆ ಅಂತ ಹೇಳಿದಿರಿ, ಅಲ್ಲಿ ಹೋಗಿ ಕೇಳಿದರೆ ಅವರು ೩ ಪೈಸೇನೂ ಕೊಟ್ಟಿಲ್ಲವೆಂದು ಹೇಳುತ್ತಾರೆ. ಹಾಗೆಯೇ ಈ ಒಂದು ಕುಡಿಯುವ ನೀರಿನ ವ್ಯವಸ್ಥೆಗಾಗಿ ೫೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ ಅಂತ ಹೇಳುತ್ತೀರಾ, ಆದರೆ ಅವರನ್ನು ಕೇಳಿದರೆ ೫೦ ಪೈಸೇ ಕೂಡ ಬಂದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ತಾವು ಉತ್ತರ ಕೊಡುವಾಗ ಸ್ಪಷ್ಟಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಅಸ್ಪೃಶ್ಯತೆ ವಿಚಾರ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ ಅವರು ಒಂದು ಮಾತೂ ಹೇಳಿಲ್ಲ, ಇದು ಬಹಳ ವಿಷಾದನೀಯ ಸಂಗತಿ. ಅದೇ ರೀತಿ ಬೆಗ್ಗರ್ ಪ್ರಶ್ನೆ ಇದೆ. ಬೆಗ್ಗರ್ ಆಕ್ಟ್ ಇದ್ದರೂ ಕೂಡ ಅದನ್ನು ಬಗೆಹರಿಸಿಲ್ಲ, ಅದೇ ರೀತಿ ಒಪ್ಪತ್ತು ಊಟ ಮಾಡುವವರ ಪ್ರಶ್ನೆ ಹಾಗೂ ಇನ್ನಿತರ ಪ್ರಶ್ನೆಗಳನ್ನೂ ಕೂಡ ಬಗೆಹರಿಸಿಲ್ಲ. ದೊಡ್ಡ ದೊಡ್ಡ ಮಾತು ಇರಲಿ, ಈ ಮೂರು ಮುಖ್ಯವಾದ ವಿಚಾರಗಳ ಬಗ್ಗೆ ವಾಸ್ತವಿಕವಾದ ಅಂಶಗಳನ್ನು ರಾಜ್ಯಪಾಲರ ಭಾಷಣದಲ್ಲಿ ಕೈಬಿಡಲು ಕಾರಣ ಏನು ಅನ್ನುವುದನ್ನು ತಾವು ಸ್ಪಷ್ಟಪಡಿಸಬೇಕು.

ಇನ್ನು ಲ್ಯಾಂಡ್ ರೀಫಾರಂಸ್ ವಿಚಾರ. ಇದರ ಬಗ್ಗೆ ಹೈಕೋರ್ಟ್‌ನಲ್ಲಿ ೪೦ ಸಾವಿರ ಕೇಸಸ್ ಪೆಂಡಿಂಗ್ ಇವೆ. ಇದನ್ನು ಕಡಿಮೆ ಮಾಡಬೇಕಾದರೆ, ಇದೆಲ್ಲ ಕೇಸುಗಳನ್ನೂ ಇತ್ಯರ್ಥ ಮಾಡಬೇಕಾದರೆ ಹೆಚ್ಚು ಸಂಖ್ಯೆಯಲ್ಲಿ ಜಡ್ಜಸ್ ಅಪಾಯಿಂಟ್ ಮಾಡಬೇಕು, ಅಲ್ಲದೆ ಇದರ ಒಂದು ಅಧಿಕಾರ ವ್ಯಾಪ್ತಿಯನ್ನು ಡಿಸ್ಟ್ರಿಕ್ಟ್ ಜಡ್ಜ್ ಅಥಾರಿಟಿಗೆ ಕೊಟ್ಟರೆ ಸಂಖ್ಯೆ ಕಡಿಮೆಯಾಗುತ್ತದೆ. ಇದು ಯಶಸ್ವಿಯಾಗಬೇಕಾದರೆ ಹೆಚ್ಚು ಹೆಚ್ಚು ಜಡ್ಜ್‌ಗಳನ್ನು ಅಪಾಯಿಂಟ್ ಮಾಡಬೇಕು, ಎಲ್ಲದಕ್ಕೂ ಸ್ಟೇ ಆರ್ಡರ್ ಕೊಡಬಹುದು, ಅದು ಮುಖ್ಯವಲ್ಲ. ಯಾರೇ ಆಗಲಿ ೧೦ ಸಾವಿರ ಕೇಸಸ್ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕು ಎಂದರೆ ಸಾಧ್ಯವಾಗುವುದಿಲ್ಲ. ಆದುದರಿಂದ ತಾವು ಈ ಬಗ್ಗೆ ಪೆಂಡಿಂಗ್ ಇರುವ ಕೇಸಸ್‌ಗಳನ್ನು ಮುಗಿಸುತ್ತೇವೆ ಎಂದರೆ ಅಸಾಧ್ಯ. ಇಂತಹ ಆಶ್ವಾಸನೆಗಳನ್ನು ಕೊಡಬೇಡಿ. ನಾನು ಮೊದಲೇ ಹೇಳಿದ ಹಾಗೆ ಇದರ ಒಂದು ಕಾರ್ಯ ವ್ಯಾಪ್ತಿಯನ್ನು ಡಿಸ್ಟ್ರಿಕ್ಟ್ ಜಡ್ಜ್ ಅಥಾರಿಟಿಗೆ ಕೊಟ್ಟರೆ ಮಾತ್ರ ಇದರ ಸಂಖ್ಯೆ ಕಡಿಮೆ ಮಾಡಬಹುದೇ ವಿನಾ ಇಲ್ಲವಾದರೆ ಆಗುವುದಿಲ್ಲ.

In page 9 of the Governor's Address, it has been stated thus :

> "My Government attaches the highest importance to timely completion of public works programmes such as roads, bridges, buildings and irrigation and power projects."

ತಮಗೆ ಹೇಳಬೇಕಾದರೆ, ಕಾರಂಜಿ ಪ್ರಾಜೆಕ್ಟ್ ತೆಗೆದುಕೊಳ್ಳಿ, ಅದರ ಒಂದು ಎಸ್ಟಿಮೇಟ್ ೫೧ ಕೋಟಿ ರೂಪಾಯಿ ಇತ್ತು. ಇದುವರೆಗೆ ಅದರ ಹತ್ತನೇ ಒಂದು ಭಾಗ ಕೂಡ ಖರ್ಚು ಆಗಿಲ್ಲ. ೧೦ ವರ್ಷವಾದರೂ ಅಲ್ಲಿ ಸರಿಯಾಗಿ ಕೆಲಸ ನಡೆದಿಲ್ಲ ಹಿಂದಿನ ಸರ್ಕಾರದವರು ಈ ಪ್ರಾಜೆಕ್ಟ್ ಅನ್ನು ೧೯೮೫ಕ್ಕೆ ಕಂಪ್ಲೀಟ್ ಮಾಡುತ್ತೇವೆ ಅಂತ ಹೇಳಿದ್ದರು, ಈಗಿನ ಸರ್ಕಾರದವರು ಈ ಕೆಲಸವನ್ನು ೧೯೯೦ಕ್ಕೆ ಮುಗಿಸುತ್ತೇವೆ ಅಂತ ಹೇಳುತ್ತಾರೆ. Whenever we ask, the Government gives a reply that as far as possible, we will do it. ಎಂದು ಹೇಳುತ್ತೀರಾ. ನಿಮ್ಮಲ್ಲಿ ಧೈರ್ಯ ಇದ್ದರೆ, ನೀವು ಇದನ್ನು ಮಾಡಬೇಕು ಅಂತ ಮನಸ್ಸು ಮಾಡಿದ್ದರೆ ಇದನ್ನು ಒಂದು ಟೈಂಬೌಂಡ್ ಪ್ರೋಗ್ರಾಂನಲ್ಲಿ ಮಾಡಿಸಬೇಕು. ಇಂತಿಷ್ಟೇ ದಿವಸದಲ್ಲಿ ಈ ಕೆಲಸ ಮುಗಿಯುವ ಹಾಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು. ಆ ರೀತಿ ಮಾಡುತ್ತೀರಾ ? ಈ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಏನು ಇದೆ ಅಂತ ಹೇಳಿದರೆ ಅದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ದಯವಿಟ್ಟು ಸ್ಪಷ್ಟಪಡಿಸಿ. ತಮಗೆ ಹೇಳಬೇಕಾದರೆ ನಮ್ಮ ರಾಜ್ಯದ ೨೬೦೦೦ ಹಳ್ಳಿಗಳ ಪೈಕಿ ೧೨ ಸಾವಿರ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರೇ ಇಲ್ಲ. ಅವರು ರೆಪ್ರೆಸೆಂಟ್ ಮಾಡಿದ್ದಾರೆ, ಅದಕ್ಕೆ ತಾವು ಏನು ಹೇಳುತ್ತೀರಾ ಎಂದರೆ, ನಾನು ಮೊದಲೇ ಹೇಳಿದ ಹಾಗೆ ಆದಷ್ಟು ಜಾಗ್ರತೆಯಾಗಿ ಮಾಡಿಕೊಡುತ್ತೇವೆ ಅಂತ ಹೇಳುತ್ತೀರೇ ವಿನಾ ಕಾರ್ಯ ಮಾತ್ರ ಆಗುವುದಿಲ್ಲ. ಕಾರಂಜಿ ಪ್ರಾಜೆಕ್ಟ್ ಬಗ್ಗೆ ಮೊನ್ನೆ ದಿವಸ ಪಾರ್ಲಿಮೆಂಟ್ ಮಿನಿಸ್ಟರ್ ಬಂದಾಗ ಕೇಳಿದೆ. ಶ್ರೀಮಾನ್ ಬಸವಣ್ಣಪ್ಪನವರೂ ಸಹ ನನ್ನ ಮಿತ್ರರೇ, ಎಲ್ಲರ ಬಗ್ಗೆಯೂ ನನಗೆ ಗೌರವ ಇದೆ. ಈ ಸರ್ಕಾರದ ಬಗ್ಗೆಯೂ ಗೌರವ ಇದೆ. ಬಹಳ ವರ್ಷಗಳಿಂದಲೂ ಈ ಕಾರಂಜಿ ಪ್ರಾಜೆಕ್ಟನ್ನು ಮುಗಿಸಿಕೊಡಬೇಕು ಎಂದು ಕೇಳುತ್ತಿದ್ದೇವೆ, ಆದರೆ ಇನ್ನೂ ಮುಗಿಸಿಲ್ಲ. ಈಗಲಾದರೂ ಬೇಗನೆ ಆ ಕೆಲಸವನ್ನು ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಭಾಷೆ ವಿಚಾರ. ನಮ್ಮ ರಾಷ್ಟ್ರದಲ್ಲಿ ಒಂದೇ ಭಾಷೆ ಇರಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ರಾಷ್ಟ್ರಭಾಷೆ ಹಿಂದಿ ಅನ್ನುವುದು ಆಗಬೇಕು, ನಮ್ಮ ರಾಷ್ಟ್ರದಲ್ಲಿ ಇಂಗ್ಲೀಷ್ ಭಾಷೆ ಇರಬೇಕು, ಅದರ ಜೊತೆಗೆ ಆಯಾಯಾ ರಾಜ್ಯ ಭಾಷೆಯೂ ಇರಬೇಕು, ಅದರಂತೆ ನಮ್ಮ ಕರ್ನಾಟಕದಲ್ಲಿ ಕನ್ನಡ ರಾಜ್ಯಭಾಷೆ ಕನ್ನಡವೂ ಇರಬೇಕು. ಯಾವುದೇ ರಾಷ್ಟ್ರವನ್ನು ತೆಗೆದುಕೊಳ್ಳಿ, ಅಲ್ಲಿ ಒಂದೇ ಭಾಷೆ ಇದೆ, ನಮ್ಮ ರಾಷ್ಟ್ರದಲ್ಲಿ ಯಾವ ರೀತಿಯಾಗಿ ಒಂದೇ ಕಾನ್ಸ್ಟಿಟ್ಯೂಷನ್ ಇದೆಯೋ ಅದೇ ರೀತಿಯಾಗಿ ಒಂದೇ ಭಾಷೆಯಾದ ಹಿಂದಿಯೂ ಇರಬೇಕು. ಇದಕ್ಕೆ ಒಂದು ಗಾದೆ ಇದೆ. ಸ್ಟಾಲಿನ್ ಇಂಡಿಯಾಕ್ಕೆ ಬಂದಿದ್ದಾಗ ಅವರ ಭಾಷೆಯನ್ನು ಇಲ್ಲಿ ಹಿಂದಿಗೆ ತರ್ಜುಮೆ ಮಾಡಿ ಓದಿದರು. ಅದಕ್ಕಾಗಿ ನಮ್ಮ ರಾಷ್ಟ್ರದಲ್ಲಿ ಹಿಂದಿ ರಾಷ್ಟ್ರ ಭಾಷೆಯಾಗಬೇಕು ಅಂತ ಅಂದಿನಿಂದಲೂ ಹೋರಾಟ ಇದೆ. ಇದರಲ್ಲಿ ಮಲತಾಯಿ ಧೋರಣೆ ಆಗಬಾರದು. ನಮ್ಮ ದೇಶ ಸ್ವತಂತ್ರವಾದ ಮೇಲೆ ಇಂಗ್ಲೀಷ್ ಭಾಷೆಯನ್ನು

ಕೂಡ ರೆಕಗ್ನೈಸ್ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ೧೦ ಲಕ್ಷ ಕನ್ನಡಿಗರು ಇದ್ದಾರೆ. ಮಹಾಜನ ಕಮೀಷನ್ ರಿಪೋರ್ಟ್ ಪ್ರಕಾರ ಕೆಲವು ಭಾಗಗಳು ನಮಗೆ ಬರಬೇಕು. ಈಗ ಮಹಾರಾಷ್ಟ್ರದಲ್ಲಿ ನಮ್ಮ ಕನ್ನಡ ಭಾಗಗಳು ಏನು ಸೇರಿವೆ ಅಲ್ಲಿ ಯಾವ ಕನ್ನಡ ಶಾಲೆಯನ್ನೂ ತೆಗೆಯಬಾರದು ಅಂತ ತೀರ್ಮಾನ ಮಾಡಿದ್ದಾರೆ. ಇದರ ಬಗ್ಗೆ ಅವರು ರೆಪ್ರೆಸೆಂಟ್ ಮಾಡಿದ್ದರೂ ಸಹ ಏನೂ ಪ್ರಯೋಜನವಾಗಿಲ್ಲ. ಆ ವಿಷಯವಾಗಿ ಎರಡೂ ಸದನಗಳಲ್ಲೂ ಚರ್ಚೆಯಾಗಿದೆ. ಇದು ನಾಚಿಕೆಗೇಡಿನ ವಿಷಯ. ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಆಂಧ್ರ ರಾಜ್ಯಗಳಲ್ಲಿರುವ ಕನ್ನಡಿಗರು ತಮಗೆ ರಕ್ಷಣೆ ಕೊಡಿ ಎಂದು ಕೇಳಿದಾಗ ಈ ಹಿಂದಿನ ಸರ್ಕಾರದಲ್ಲಿದ್ದ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಅವರೊಂದಿಗೆ ಮಾತನಾಡಿ ನಿಮಗೆಲ್ಲಾ ರಕ್ಷಣೆ ಕೊಡುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ನೋಡಿದರೂ ಕೂಡ ಆ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಯಾರೂ ಮಾತನಾಡಿಲ್ಲ. ಜೊತೆಗೆ ಇದರ ಬಗ್ಗೆ ಏನೂ ವ್ಯವಹಾರ ನಡೆಸಿಲ್ಲ. ಆ ಬಾರ್ಡರ್ ಏರಿಯಾದಲ್ಲಿ ಕನ್ನಡ ಶಾಲಾ ಮಾಸ್ತರ್ ಇಲ್ಲ, ಇದರ ಬಗ್ಗೆ ಎಷ್ಟು ಹೇಳಿದರೂ ಕೂಡ ಆ ಕನ್ನಡಿಗರ ಬಗ್ಗೆ ದಯೆಯನ್ನು ತೋರುತ್ತಾ ಇಲ್ಲ. ಅವರಿಗೆ ಸರಿಯಾದ ರಕ್ಷಣೆಯೂ ಇಲ್ಲದಂತಾಗಿದೆ. ಯಾರೇ ಆಗಲಿ ಕನ್ನಡಿಗರ ಅಭಿಮಾನದ ಬಗ್ಗೆ ಮಾತನಾಡುತ್ತಾರೇ ವಿನಾ ಆ ಕನ್ನಡಿಗರಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ನನಗೆ ವೇಳೆ ಇದ್ದಿದ್ದರೆ ಇನ್ನೂ ವಿವರವಾಗಿ ಹೇಳುತ್ತಿದ್ದೆ. ಆದರೆ ವೇಳೆ ಇಲ್ಲದಿರುವುದರಿಂದ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಲಾ ಅಂಡ್ ಆರ್ಡರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ಲಾ ಅಂಡ್ ಆರ್ಡರ್ ವಿಚಾರದಲ್ಲಿ ಏನು ಹೇಳಿದ್ದಾರೆ, ಅದನ್ನು ಕಾರ್ಯತಃ ಸಾಧನೆ ಮಾಡಿ ತೋರಿಸಬೇಕು ಎಂದು ಹೇಳುತ್ತೇನೆ. ನೀವು ಅಧಿಕಾರದಲ್ಲಿರತಕ್ಕಂಥಾ ಕಾಲದಲ್ಲೇ ಒಳ್ಳೆಯ ಕೆಲಸಗಳನ್ನು ಮಾಡಿ ತೋರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಲ್. ಅಸ್ತೇಕರ್ (ಬಾಗೇವಾಡಿ).—(ಮರಾಠಿಯಲ್ಲಿ ಮಾತನಾಡಲು ಪ್ರಾರಂಭ ಮಾಡಿದರು).

ಛೇರ್ಮನ್.—ತಾವು ಮರಾಠಿಯಲ್ಲಿ ಮಾತನಾಡಿದರೆ ಅದು ರೆಕಾರ್ಡ್ ಆಗುವುದಿಲ್ಲ. ಇಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಮಾತನಾಡಿದರೆ ಮಾತ್ರ ರೆಕಾರ್ಡ್ ಆಗುತ್ತದೆ. ತಮಗೆ ಕನ್ನಡ ಬಾರದೇ ಹೋದರೆ ಇಂಗ್ಲೀಷ್‌ನಲ್ಲಿ ಮಾತನಾಡಿ. ಅಭ್ಯಂತರವಿಲ್ಲ.

ತಾವು ಮರಾಠಿಯಲ್ಲಿ ಮಾತನಾಡಬೇಕು ಎಂದರೆ ನಮ್ಮ ಅಭ್ಯಂತರ ಇಲ್ಲ, ಆದರೆ ಅದು ರೆಕಾರ್ಡು ಆಗುವುದಿಲ್ಲ. ತಾವು ಮಾತನಾಡಿದರೂ ಸಹ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ತಮಗೆ ಕನ್ನಡ ಬರದೇ ಹೋದರೆ ಇಂಗ್ಲೀಷಿನಲ್ಲಿ ಮಾತನಾಡಬಹುದು.

ಶ್ರೀ ಭೀಮಣ್ಣ ಖಂಡ್ರೆ.—ಹಿಂದಿಯಲ್ಲಿ ಯಾರು ಮಾತನಾಡಿದರೂ ಸಹ ಅದನ್ನು ರೆಕಾರ್ಡು ಮಾಡತಕ್ಕ ವ್ಯವಸ್ಥೆ ಇರಬೇಕು.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಲೋಕಸಭೆಯಲ್ಲಿ ಮರಾಠಿಯಲ್ಲಿ ಮಾತನಾಡಿದ್ದನ್ನು ತರ್ಜುಮೆ ಮಾಡತಕ್ಕ ಅವಕಾಶ ಇದೆ. ಆದರೆ ರಾಜ್ಯದ ಶಾಸನಸಭೆಗಳಲ್ಲಿ ಮೂರು ಭಾಷೆಗಳಲ್ಲಿ ಮಾತನಾಡತಕ್ಕ ಅವಕಾಶ ಇದೆ, ಆರ್ಟಿಕಲ್ ೨೧೦ನ್ನು ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ.

ಛೇರ್ಮನ್.—ಮೂರನೆಯ ಭಾಷೆಯಲ್ಲಿ ಸದಸ್ಯರು ಮಾತನಾಡಿದರೂ ಸಹ ಒಪ್ಪಬಹುದು ಆದರೆ ಅದನ್ನು ರೆಕಾರ್ಡ್ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೆ ತಾವು ಮಾತನಾಡಿಯೂ ಸಹ ಏನು ಪ್ರಯೋಜನ ?

SRI R. S. MANEY.—Sir, the question here is about the legality of the speech. If the Chairman can allow a Member to speak in the

langauage he desires the Member with the permission of the Chair can speak in that particular language.

ಛೇರ್ಮನ್.—ತಾವು ಮರಾಠಿಯಲ್ಲಿ ಮಾತನಾಡಿದರೆ ಯಾರಿಗೂ ಅರ್ಥವಾಗುವುದಿಲ್ಲ, ಮತ್ತು ಅದು ಇಲ್ಲಿ ರೆಕಾರ್ಡ ಆಗುವುದಿಲ್ಲ.

SRI R. S. MANEY.—If the Chair allows, the Member can speak. Therefore I request you to allow my colleague to speak in Marathi.

ಛೇರ್ಮನ್.—ತಾವು ಸದನದ ಬಗ್ಗೆ ಏನು ಹೇಳುತ್ತೀರಿ, ಸರ್ಕಾರದ ಬಗ್ಗೆ ಏನು ಹೇಳುತ್ತೀರಿ ಎನ್ನುವುದು ಅರ್ಥವಾಗಬೇಕು. ಸದನಕ್ಕೆ ನಮಗೆ ಅರ್ಥವಾಗತಕ್ಕ ಒಂದು ಭಾಷೆಯಲ್ಲಿ ತಾವು ಮಾತನಾಡಬಹುದು. ತಾವು ಇಂಗ್ಲೀಷಿನಲ್ಲಿ ಮಾತನಾಡಬಹುದಲ್ಲವೇ ?

ಶ್ರೀ ಕೆ.ಜಿ ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೇ, ಸದನದಲ್ಲಿ ತಾವು ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಬೇಕು. ಅವರಿಗೆ ಕನ್ನಡ ಭಾಷೆ ಬರದಿದ್ದರೆ ಮಾತ್ರ ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವರಿಗೆ ಕನ್ನಡ ಭಾಷೆ ಬರುತ್ತದೆ, ಆದ್ದರಿಂದ ಕನ್ನಡದಲ್ಲಿಯೇ ಅವರು ಮಾತನಾಡಲಿ.

ಛೇರ್ಮನ್.—ಕನ್ನಡ ಮತ್ತು ಇಂಗ್ಲೀಷಿನಲ್ಲಿ ಮಾತನಾಡಿದರೆ ಮಾತ್ರ ರೆಕಾರ್ಡ್ ಮಾಡುವುದಕ್ಕೆ ಅವಕಾಶವಿದೆ. ಅಲ್ಲದೆ ತಾವು ಹೇಳತಕ್ಕದ್ದು ಸದನಕ್ಕೆ ಗೊತ್ತಾಗಬೇಕು. ತಾವು ಹಾಗೇನಾದರೂ ಬೇರೆ ಭಾಷೆಯಲ್ಲಿ ಮಾತನಾಡುವುದಾದರೆ ತಾವು ಮಾತನಾಡತಕ್ಕ ವಿಷಯದ ಬಗ್ಗೆ ಒಂದು ಪ್ರಥಮ ಮಾಹಿತಿಯನ್ನು ನಮಗೆ ಕೊಡಬೇಕು. ಮಾನ್ಯ ಸದಸ್ಯರಾದ ಅಸ್ಟೇಕರ್ ಅವರು ಹಳೆಯ ಸದಸ್ಯರು, ತಾವು ಇಂಗ್ಲೀಷಿನಲ್ಲಿ ಮಾತನಾಡಿರುವುದು ನಮಗೆ ಗೊತ್ತಿದೆ. ದಯಮಾಡಿ ತಾವು ಇಂಗ್ಲೀಷಿನಲ್ಲಿ ಮಾತನಾಡಿ.

ಶ್ರೀ ಕೆ. ಪಿ. ಶಾಂತಮೂರ್ತಿ,—ತಾವು ಕನ್ನಡದಲ್ಲಿ ಹೇಳಿದ್ದುದನ್ನು ಅವರು ಅರ್ಥಮಾಡಿಕೊಳ್ಳುತ್ತಿದ್ದಾರೆ, ಅಂದಮೇಲೆ ಅವರಿಗೆ ಕನ ಡ ಗೊತ್ತಾಗುತ್ತದೆ. ಆದ್ದರಿಂದ ಅವರು ಕನ್ನಡದಲ್ಲಿಯೇ ಮಾತನಾಡಬೇಕು.

ಛೇರ್ಮನ್.—ಅವರಿಗೆ ನಮ್ಮ ಭಾಷೆ ಅರ್ಥವಾಗಬಹುದು, ಆದರೆ ಮಾತನಾಡುವುದಕ್ಕೆ ಬರುತ್ತದೆಯೋ ಹೇಗೋ ಗೊತ್ತಿಲ್ಲ, ಈಗ ? ತಾವು ಯಾವ ಭಾಷೆಯಲ್ಲಿ ಮಾತನಾಡುತ್ತೀರಿ ?

ಶ್ರೀ ಬಿ.ಎಲ್. ಅಸ್ಟೇಕರ್,—ಹಿಂದಿಯಲ್ಲಿ ಮಾತನಾಡುತ್ತೇನೆ.

ಛೇರ್ಮನ್.—ಹಿಂದಿಯಲ್ಲಿ ಮಾತನಾಡಿದರೆ ಅದು ರೆಕಾರ್ಡ ಆಗುವುದಿಲ್ಲ ?

ಶ್ರೀ ವಿ.ಎಸ್. ಕೌಜಲಗಿ.—ಮಾನ್ಯ ಸದಸ್ಯರು ಆರಿಸಿಬಂದಿರುವ ಕ್ಷೇತ್ರದಲ್ಲಿ ಸುಮಾರು ೫೦ ಪರ್ಸೆಂಟ್ ಜನ ಕನ್ನಡಿಗರು ಇದ್ದಾರೆ. ಕನ್ನಡ ಜನರ ವೋಟನ್ನು ತೆಗೆದುಕೊಂಡು ಇಲ್ಲಿಗೆ ಬಂದಿದ್ದಾರೆ. ಅವರಿಗೆ ಕನ್ನಡ ಬರುತ್ತದೆ, ಆದ್ದರಿಂದ ಕನ್ನಡದಲ್ಲಿಯೇ ಅವರು ಮಾತನಾಡಬೇಕು.

ಛೇರ್ಮನ್.—ಅವರ ಮೇಲೆ ಇಂಥ ಭಾಷೆಯಲ್ಲಿಯೇ ಮಾತನಾಡಿ ಎಂದು ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈಗ ಅವರು ಮಾತನಾಡುವ ಭಾಷೆ ಯಾರಿಗೂ ಅರ್ಥವಾಗುವುದಿಲ್ಲ.

ಛೇರ್ಮನ್.—ನಾನು ಮಾನ್ಯ ಸದಸ್ಯರನ್ನು ಇಂಥ ಭಾಷೆಯಲ್ಲಿ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ.

ಒಬ್ಬರು ಸದಸ್ಯರು.—ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣವನ್ನು ಓದಿರುವುದರಿಂದಲೇ ಅವರು ಮಾತನಾಡಲು ಹೊರಟಿದ್ದಾರೆ. ಆದ್ದರಿಂದ ಅವರು ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಮಾತನಾಡಬಹುದು.

(ಶ್ರೀ ಬಿ. ಎಲ್. ಅಷ್ಟೇಕರ್ ಅವರು ಹಿಂದಿಯಲ್ಲಿ ಮಾತನಾಡಲು ಮತ್ತೆ ಪ್ರಾರಂಭ ಮಾಡಿದರು)

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ತಮಗೆ ಏನು ಅನ್ನುತ್ತಾರೆ, ನಮಗೆ ಏನು ಅನ್ನುತ್ತಾರೆ ಎಂದು ಗೊತ್ತಾಗುವುದಿಲ್ಲ ?

ಛೇರ್ಮನ್.—ಅವರು ಹಿಂದಿಯಲ್ಲಿ ಮಾತನಾಡಿದರೆ ನಮಗೆ ಗೊತ್ತಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಆರಿಸಿ ಬಂದಿರುವ ಕ್ಷೇತ್ರದಲ್ಲಿ ಸುಮಾರು ೫೦ ಪರ್ಸೆಂಟ್ ಜನ ಕನ್ನಡಿಗರು ಇದ್ದಾರೆ. ಆ ಕನ್ನಡಿಗರನ್ನು ಸಭೆಯಲ್ಲಿ ಅವರು ಪ್ರತಿನಿಧಿಸುತ್ತಿದ್ದಾರೆ. ಆದ್ದರಿಂದ ಅವರು ಸಭೆಯಲ್ಲಿ ಏನು ಮಾತನಾಡಿದರು ಎಂದು ಅವರ ಮತದಾರರಿಗೆ ಗೊತ್ತಾಗಬೇಕಲ್ಲವೇ ?

ಛೇರ್ಮನ್.—ಇದರ ಬಗ್ಗೆ ತಿಳುವಳಿಕೆ ಅವರಿಗೆ ಬೇಕು. ಹಿಂದಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ, ಆದರೆ ಅದು ರೆಕಾರ್ಡ್ ಆಗುವುದಿಲ್ಲ.

(ಶ್ರೀ ಜಿ. ಎಲ್. ಅಷ್ಟೇಕರ್ ಅವರು ಹಿಂದಿಯಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ...

ಚೇರ್‌ಮನ್.—ಮಾನ್ಯ ಸ್ವಾಮಿರಾವ್ ಅವರು ಪುನಃ ಪುನಃ ಅದೇ ವಿಚಾರವನ್ನು ಮಾತನಾಡುವುದು ಬೇಡ. ಅವರು ಮಾತನಾಡಲು ಅವಕಾಶ ಕೊಡಿ.

ಶ್ರೀ ಜಿ. ಎಲ್. ಅಷ್ಟೇಕರ್... (ಹಿಂದಿ)

ಶ್ರೀ ಆರ್. ಎಸ್. ನಾಯಕ್.— ಮಾನ್ಯ ಅಧ್ಯಕ್ಷರೇ, ಅವರು ಒಳ್ಳೆಯದನ್ನು ಹೇಳುತ್ತಾರೆಯೊ ಅಥವಾ ಕೆಟ್ಟದ್ದನ್ನು ಹೇಳುತ್ತಾರೆಯೋ ಎಂಬುದು ನಮಗೆ ಗೊತ್ತಾಗಬೇಕಾಗಿದೆ.

ಚೇರ್ಮನ್.— ದಯವಿಟ್ಟು ತಾವು ಕುಳಿತುಕೊಳ್ಳಿ. ಅವರು ತಪ್ಪು ಹೇಳಿದರೆ ಆಗ ನಾನು ಹೇಳುತ್ತೇನೆ.

ಶ್ರೀ ಜಿ. ಎಲ್. ಅಷ್ಟೇಕರ್.— (ಹಿಂದಿ)

ಶ್ರೀ ಎಸ್. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಈಗ ತಾನೇ ಮಾನ್ಯ ಸದಸ್ಯರು ದೇಶ ಪ್ರೇಮ ಬೆಳೆಯಬೇಕಾದರೆ ರಾಷ್ಟ್ರಭಾಷೆ ಕಲಿಯಬೇಕು ಎಂದು ಹೇಳಿದರು. ಅದೇ ರೀತಿ ಅವರಿಗೆ ರಾಜ್ಯಭಾಷೆ ಮೇಲೆ ಪ್ರೇಮ ಇದೆಯೋ ಎಂದು ನಾನು ಅವರನ್ನು ಕೇಳುತ್ತೇನೆ

ಶ್ರೀ ಅಷ್ಟೇಕರ್.— (ಹಿಂದಿ)

ಶ್ರೀ ಎಂ. ನಾರಾಯಣರಾವ್.— ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ.

ರೂಲ್ ೨೩೭ ರಲ್ಲಿ "The Secretary shall cause to be prepared a full report of the proceedings of the House at each of its sitting and shall as soon as practicable, publish it in such form and manner as the Speaker may from time to time, direct." ಎಂದು ಇದೆ.

ತಾವು ಆಗಲೇ ಮಾನ್ಯ ಸದಸ್ಯರಿಗೆ ಹಿಂದಿಯಲ್ಲಿ ಮಾತನಾಡಿದರೆ ಅದು ರೆಕಾರ್ಡ್ ಆಗುವುದಿಲ್ಲವೆಂದು ಹೇಳಿದಿರಿ ಆದರೆ ರೂಲ್ ಪ್ರಕಾರ, ಅವರು ಹಿಂದಿಯಲ್ಲಿ ಏನು ಮಾತನಾಡುತ್ತಿದ್ದಾರೆ ಅದನ್ನು ರೆಕಾರ್ಡ್ ಮಾಡಿ ಕೊಳ್ಳಬೇಕಾಗುತ್ತದೆ.

ಚೇರ್ಮನ್.— ಅವರು ಇಲ್ಲಿ ಏನು ಮಾತನಾಡುತ್ತಿದ್ದಾರೋ ಅದರ ಬಗ್ಗೆ ಅವರು ಆಮೇಲೆ ಒಂದು ಸಮ್ಮರಿ ಕೊಡುತ್ತಾರೆ. ಅದರಂತೆ ಅದು ಪ್ರೊಸೀಡಿಂಗ್ಸ್‌ನಲ್ಲಿ ಸೇರುತ್ತದೆ.

ಶ್ರೀ ಎಂ. ನಾರಾಯಣರಾವ್.— ಅವರು ಆಮೇಲೆ ಸಮ್ಮರಿ ಕೊಡುತ್ತಾರೆ, ಅದನ್ನು ಒಪ್ಪಿಕೊಳ್ಳೋಣ. ಆದರೆ ಈಗ ಅವರು ಏನು ಹೇಳುತ್ತಾರೆಯೋ ಅದನ್ನು ರೆಕಾರ್ಡ್ ಮಾಡಬೇಕಾಗುತ್ತದೆ.

ಚೇರ್ಮನ್.— ಮಾನ್ಯ ಸದಸ್ಯರು ಹಿಂದಿಯಲ್ಲಿ ಹೇಳತಕ್ಕಂಥಾದ್ದನ್ನು ರೆಕಾರ್ಡ್ ಮಾಡತಕ್ಕಂಥ ವ್ಯವಸ್ಥೆ ಇಲ್ಲಿ ಇಲ್ಲ. ಅವರು ಇಲ್ಲಿ ಏನು ಹೇಳುತ್ತಿದ್ದಾರೆಯೋ ಅದರ ಬಗ್ಗೆ ಮಾನ್ಯ ಸದಸ್ಯರು ಒಂದು ಸಾರಾಂಶವನ್ನು ಕೊಡುತ್ತಾರೆ, ಅದನ್ನು ಪ್ರೊಸೀಡಿಂಗ್ಸ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡಲಾಗುತ್ತದೆ.

ಶ್ರೀ ಎಂ. ನಾರಾಯಣರಾವ್. - ಅವರು ಇಲ್ಲಿ ಏನು ಹೇಳುತ್ತಾರೋ ಅದು ರೆಕಾರ್ಡ್ ಆಗ ಬೇಕು. ಅದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ಅವರು ಕೊಡತಕ್ಕಂಥ ಸಾರಾಂಶ ರೆಕಾರ್ಡ್ ಆಗುವುದಾದರೆ ಅದು ಸರಿಯಿರುವುದಿಲ್ಲ.

ಚೇರ್ಮನ್.— ಇಲ್ಲಿ ಮಾನ್ಯ ಸದಸ್ಯರುಗಳು ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಮಾತನಾಡಿದರೆ ಅದು ರೆಕಾರ್ಡ್ ಆಗುತ್ತದೆ. ಅವರು ಮಾಡತಕ್ಕಂಥ ಭಾಷಣದ ಒಂದು ಪ್ರತಿಯನ್ನು ಪ್ರತಿ ಮೆಂಬರಿಗೆ ಕಳಿಸಿಕೊಡುತ್ತಾರೆ, ಅವರು ಅದನ್ನು ಕರೆಕ್ಟ್ ಮಾಡಿ ಕಳಿಸಿಕೊಡುತ್ತಾರೆ. ಅದು ಆಮೇಲೆ ಎಡಿಟಿಂಗ್ ಆಗುತ್ತದೆ. ಅನಂತರ ಅದು ಪ್ರಿಂಟ್ ಆಗುತ್ತದೆ ಮಾನ್ಯ ಸದಸ್ಯರು ಈಗ ಇಲ್ಲಿ ಹಿಂದಿಯಲ್ಲಿ ಏನು ಮಾತನಾಡುತ್ತಿದ್ದಾರೆ ಆ ಬಗ್ಗೆ ಅವರು ಆಮೇಲೆ ಒಂದು ಟೆಕ್ಸ್ಟ್ ಕೊಡುತ್ತಾರೆ. ಅದನ್ನು ಪ್ರೊಸೀಡಿಂಗ್ಸ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡುತ್ತಾರೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.— ಮಾನ್ಯ ಅಧ್ಯಕ್ಷರೇ ಲೋಕಸಭೆಯಲ್ಲಿ ಮಾನ್ಯ ಸದಸ್ಯರುಗಳು ಕನ್ನಡದಲ್ಲಿ ಮಾತನಾಡತಕ್ಕಂಥಾದ್ದು ಇದೆ. ಅದನ್ನು ಅವರು ಅಲ್ಲಿ ಯಾವ ತರಹ ಪ್ರೊಸೀಡಿಂಗ್ಸ್‌ನಲ್ಲಿ ಸೇರಿಸುತ್ತಾರೆಂಬುದನ್ನು ತಿಳಿದುಕೊಂಡರೆ ಅದರಿಂದ ಇಲ್ಲಿ ನಮಗೆ ಸಹಾಯವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.— ಅಲ್ಲಿ ತತ್ಕಾಲದಲ್ಲೇ ತರ್ಜುಮೆ ಮಾಡುವ ವ್ಯವಸ್ಥೆ ಇದೆ. ಅಂತಹ ವ್ಯವಸ್ಥೆಯನ್ನು ಇಲ್ಲಿಯೂ ಮಾಡತಕ್ಕಂಥ ಅವಶ್ಯಕತೆ ಇದೆ.

ಚೇರ್ಮನ್.— ಮಾನ್ಯ ಅಷ್ಟೇಕರ್‌ರವರೇ, ನೀವು ನಿಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಅಷ್ಟೇಕರ್.— (ಹಿಂದಿ)

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ಅಧ್ಯಕ್ಷರೇ, ತಾವು ಅವರಿಗೆ 'ನೀವು ಭಾಷಣವನ್ನು ಮುಂದುವರಿಸಿ' ಎಂದು ಹೇಳಿದ್ದು ಅವರಿಗೆ ಹೇಗೆ ಗೊತ್ತಾಯಿತು.

ಶ್ರೀ ಅಷ್ಟೇಕರ್.—(ಹಿಂದಿ)* (ಮಾನ್ಯ ಸದಸ್ಯರು ಹಿಂದಿಯಲ್ಲೇ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು)

† ಶ್ರೀ ಬಿ. ಆರ್. ಯಾವಗಲ್ (ನರಗುಂದ).— ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸತಕ್ಕಂಥ ಕಾಲದಲ್ಲಿ ಈ ಬಗ್ಗೆ ನಾನು ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. 2 ತಿಂಗಳ ವಯಸ್ಸಿನ ಈ ಸರ್ಕಾರ ತಾನು ಯಾವ ಅಡಿಪಾಯದ ಮೇಲೆ ಹೋಗಬಯಸುತ್ತದೆ ಮತ್ತು ಮುಂದೆ ತನ್ನ ಮಾರ್ಗಗಳು ಯಾವುವು ಎಂಬುದನ್ನು ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಈ ಸಭೆಯ ಮುಂದಿಟ್ಟಿದೆ. ಈ ಹಿನ್ನಲೆಯಲ್ಲಿ ಈ ಸರ್ಕಾರದ ಅಭದ್ರತೆಯ ಬಗ್ಗೆ ಮಾನ್ಯ ವಿರೋಧ ಪಕ್ಷದವರು ಟೀಕೆ ಮಾಡುತ್ತಿದ್ದಾರೆ, ಮತ್ತು ಈ ಸರ್ಕಾರದ ಮಂತ್ರಿಗಳ ಮೇಲೂ ಟೀಕೆ ಮಾಡುತ್ತಿದ್ದಾರೆ.

೩ ಪಿ.ಎಂ.

ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಚುನಾವಣಾ ಪೂರ್ವದಲ್ಲಿ ಒಂದು ಸಂದರ್ಭವಿತ್ತು. ಅದೇನೆಂದರೆ, ಯಾರು ಯಾವ ಕ್ಷೇತ್ರದಿಂದ ಅಭ್ಯರ್ಥಿಗಳಾಗುತ್ತಾರೋ, ಅವರ ಹತ್ತಿರ ಹೋಗಿ ನೀನು ಆರಿಸಿ ಬರುವುದಿಲ್ಲ, ಅವನು ಮಂತ್ರಿಯಾಗುತ್ತಾನೆ ಅಥವಾ ನಿಮ್ಮ ಸರ್ಕಾರ ಬರುವುದಿಲ್ಲ. ನಿಮ್ಮ ಪಕ್ಷ ಗೆಲ್ಲುವುದಿಲ್ಲ, ಗೆದ್ದರೂ ೧೦-೨೦ ಸೀಟು ಗೆಲ್ಲುತ್ತೀರಿ ಎಂದು ಅಭದ್ರತೆ ತೋರಿಸುವುದು. ಆದರೆ ಚುನಾವಣೆ ನಂತರ ಜನತಾ ಪಕ್ಷ ಸರ್ಕಾರ ರಚಿಸಿತು. ಈಗ ಅವರಿಗೆ ಯಾವರೀತಿ ತೃಪ್ತಿ ಸಿಗುತ್ತಿದೆ

* The hon. member spoke in Hindi Speech, not recorded.

ಅಂದರೆ ಈ ಸರ್ಕಾರ ಬರೀ ಕೆಲವೇ ದಿವಸ ಇರುವುದು ಎಂದು ತೃಪ್ತಿ ಪಡುವಂಥ ಸನ್ನಿವೇಶ ನಿರ್ಮಾಣ ವಾಗಿದೆ. ಈ ರೀತಿ ಕೆಟ್ಟದ್ದು ಬಯಸುವ ಉದ್ದೇಶದಿಂದ ಅವರು ಟೀಕೆ ಟಿಪ್ಪಣಿ ಮಾಡುತ್ತಾ ಇದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಈ ಸನ್ನಿವೇಶವನ್ನು ಬಿಟ್ಟು ಬಿಟ್ಟು ಭದ್ರ ಬುನಾದಿಯ ಮೇಲೆ ಈ ಸರ್ಕಾರ ಮುಂದೆ ನಡೆಯುತ್ತದೆ ಎನ್ನುವಂಥ ಬೆಂಬಲವನ್ನು ಅವರು ಸೂಚಿಸಬೇಕು ಎಂಬ ಮನವಿ ಯನ್ನು ನಾನು ನಿಮ್ಮ ಮುಖಾಂತರ ಮಾಡುತ್ತೇನೆ. ಆದರೆ ನಾನು ವಿಶೇಷವಾಗಿ ನರಗುಂದ ಮತ ಕ್ಷೇತ್ರದಿಂದ ಬಂದವನಾಗಿದ್ದು, ರೈತರ ಹೋರಾಟದಲ್ಲಿ ಭಾಗವಹಿಸಿದವನಾಗಿದ್ದು, ನನ್ನ ಅನುಭವದಿಂದ ಹೇಳುವುದಾದರೆ ಆ ದಿಶೆಯಲ್ಲಿ ನಮ್ಮ ಸರ್ಕಾರದ ಧೋರಣೆ ಏನು ಎನ್ನುವುದು ಸುಸ್ಪಷ್ಟವಾಗಿದೆಯೆಂದು ಹೇಳಬಯಸುತ್ತೇನೆ. ಸರ್ಕಾರ ಮಾತುಕೊಟ್ಟಂತೆ ಈಗಾಗಲೇ ನಡೆಯುತ್ತಿದೆ. ಅದನ್ನು ಸರ್ಕಾರ ತೋರಿಸಿಕೊಡ ಬಯಸಿ, ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ಆ ಪ್ರದೇಶದಲ್ಲಿ ಕಳೆದ ೩ ವರ್ಷಗಳಿಂದ ಕೊಲೆ ಮೊಕದ್ದಮೆಗಳನ್ನು ಎದುರಿಸುತ್ತಿದ್ದ ರೈತರನ್ನು ಅಂದರೆ ಎಲ್ಲಾ ಹಂತಗಳಿಂದಲೂ ವಿರೋಧ ಬಂದರೂ ಲೆಕ್ಕಿಸದೆ ಆ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಂಡು ತಾನು ಕೊಟ್ಟ ಮಾತನ್ನು ನಡೆಸಿಕೊಟ್ಟಿದೆ. ಅಲ್ಲದೆ ನಾಡಿನ ರೈತ ಜನಾಂಗಕ್ಕೆ ಒಂದು ಒಳ್ಳೆಯ ಕೊಡುಗೆಯನ್ನು ಕೊಟ್ಟಿದೆ. ಸರ್ಕಾರ ರೈತರಿಗೆ ನಾನಾ ಕೊಡುಗೆಗಳನ್ನು ಕೊಡುತ್ತಿದೆ ಎನ್ನುವುದು ಸುಸ್ಪಷ್ಟವಿದೆ ಆದರೆ ಇದಕ್ಕೆ ಪೂರಕವಾಗಿ ಚರ್ಚೆಯಲ್ಲಿ ರೈತರಿಗೆ ಅದನ್ನು ಕೊಡಬೇಕು ಇದನ್ನು ಕೊಡಬೇಕು, ಅದು ಆಗಬೇಕು ಎನ್ನುವಂಥ ಟೀಕೆಗಳನ್ನು ಮಾಡಿದರು. ಅದಕ್ಕೆ ನಾನು ಉತ್ತರಿಸುತ್ತಾ ಅಥವಾ ಅದರ ಮೇಲೆ ನನ್ನ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಾ ಇದ್ದೇನೆ. ನಾನು ಹಿಂದಿನ ವರ್ಷದ ರಾಜ್ಯಪಾಲರ ಭಾಷಣ ವನ್ನು ನೋಡಿದೆ. ಅದರಲ್ಲಿ ಒಂದು ಶಬ್ದ ಕೂಡ ರೈತರ ಬಗ್ಗೆ ಇಲ್ಲ. ೧೯೮೦ ರಲ್ಲಿ ನರಗುಂದ, ನವಲ ಗುಂದದಲ್ಲಿ ಚಳುವಳಿ ನಡೆಯಿತು. ೩೩ ದಿವಸಗಳವರೆಗೆ ಸತತವಾಗಿ ಉಪವಾಸ ಸತ್ಯಾಗ್ರಹ ನಡೆದರೂ ಮಂತ್ರಿಗಳಾಗಲೀ, ಶಾಸಕರಾಗಲೀ ಅದರ ಬಗ್ಗೆ ಕಾಳಜಿ ಮಾಡದೇ ಇದ್ದರು. ಸತ್ಯಾಗ್ರಹಿಗಳು ಹಗಲಲ್ಲಿ ನಿಂತರು, ರಾತ್ರಿಯಲ್ಲಿ ನಿಂತರು, ಗಾಳಿ ಚಳಿಯಲ್ಲಿ ನಿಂತರು, ಬರೀ ಮೈಯಲ್ಲಿ ನಿಂತರೂ ಸಹಿತ ಲಕ್ಷಿಸದೆ ಯಾರೋ ದುಷ್ಕರ್ಮಿಗಳಿಂದ ಅಹಿತಕರ ಘಟನೆ ಆದಬಳಿಕ ಬಂದು ನಿಮ್ಮನ್ನು ನೋಡುತ್ತೇವೆಂದು ಹೇಳಿದ ಸರ್ಕಾರ, ರಾಜ್ಯವ್ಯಾಪಿ ಹೋರಾಡಿದಂಥ ಚಳುವಳಿ ಮಾಡಿದಂಥ ರೈತರನ್ನು ಬನ್ನಿ ನಿಮ್ಮ ಕೂಡ ಮಾತನಾಡೋಣ ಎನ್ನುವಂಥ ಸಂದರ್ಭ ಬಂದಾಗ ಏನೋ ಕರೆದು ಮಾತನಾಡಿದ ಹಾಗೆ ಮಾತನಾಡಿ, ಆ ಪ್ರದೇಶದ ರೈತರನ್ನು ಹಂತಹಂತವಾಗಿ ಬಗ್ಗುಬಡಿಯಬೇಕು ಎನ್ನುವಂಥ ಸನ್ನಿವೇಶವನ್ನು ಉಂಟು ಮಾಡಿದ್ದನ್ನು ನಾವು ಕಂಡಿದ್ದೇವೆ. ಆಗ ನಾಲ್ಕು ತಾಸುಗಳವರೆಗೆ ಚರ್ಚೆಯಾಯಿತು. ಆದಾಗ್ಯೂ ಸಹಿತ ಸಮಗ್ರ ರೈತರಿಗೆ ಬೇಕಾದಂಥ ಒಳ್ಳೆಯ ಕೆಲಸಗಳನ್ನು ಅಥವಾ ಚರ್ಚೆಯಲ್ಲಿ ಅಲ್ಪಸ್ವಲ್ಪ ತೋರಿದಂಥ ಭರವಸೆಗಳನ್ನೂ ಸಹಿತ ಈಡೇರಿಸದೆ ಇರತಕ್ಕ ಪರಿಸ್ಥಿತಿ ನಿರ್ಮಾಣವಾಯಿತು. ನಿಮ್ಮ ರೈತರನ್ನು ಬಿಡುತ್ತೇವೆ ಎಂದು ಭರವಸೆ ಕೊಟ್ಟಾಗ, ರೈತರನ್ನು ಬಿಡುವ ಪ್ರಸಂಗ ಬಂದರೂ ಬಿಡಲಿಲ್ಲ. ಅದಕ್ಕಾಗಿ ರಾಜ್ಯವ್ಯಾಪಿ ರೈತರ ಸಂಘಟನೆಯಾಯಿತು. ಆಗ ನಮ್ಮ ನಮ್ಮಲ್ಲೇ ಭಿನ್ನಾಭಿಪ್ರಾಯ ತಂದು ನಮ್ಮ ರಕ್ಷಣೆಗೆ ಯಾರೂ ಬರದಹಾಗೆ ಇರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು. ನರಗುಂದದಿಂದ ಬೆಂಗಳೂರಿಗೆ ಜಾಥಾ ಬಂದಂಥ ರೈತರಿಗೆ ಪ್ರತಿ ಹಂತದಲ್ಲೂ ಅಡಚಣೆ ಒಡ್ಡಿ, ಎಷರು ತೊಡರುಗಳನ್ನು ಎದುರಿಸಿ ಬೆಂಗಳೂರಿಗೆ ಬಂದು ಮುಟ್ಟಿದಾಗ, ಬೆಂಗಳೂರಿಗೆ ಬಂದಂಥ ರೈತರನ್ನು ಸ್ವಾಗತ ಮಾಡದೆ ಅವರನ್ನೆಲ್ಲಾ ಬಾಡಿಗೆ ರೈತರು ಎಂದು ಕರೆದಂಥ ಪ್ರಸಂಗ ಉಂಟಾಯಿತು. ನಂತರದಲ್ಲೂ ಸಹಿತ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತ ಮಾಡದೆ ಬರೀ ೨೫ ಕೋಟಿ ರೂಪಾಯಿಗಳ ಪರಿಹಾರ ಕೊಡುತ್ತೇವೆಂದು ಹೇಳಿದರೂ ಅದರಲ್ಲಿ ಏನೂ ವಿವರಣೆ ಇರಲಿಲ್ಲ. ರೈತರಿಗೆ ಬರೀ ಆಶ್ವಾಸನೆ ಗಳನ್ನು ಕೊಡುತ್ತಾ, ಚುನಾವಣೆ ಮುಗಿದ ಬಳಿಕ ಮತ್ತೆ ಇವರ ಮೇಲೆ ಹಾಕೋಣ ಎಂಬ ಕೆಟ್ಟ ಮನಸ್ಸಿನಿಂದ ಇದ್ದುದಲ್ಲದೆ ಬೆಟರ್‌ಮೆಂಟ್ ಲೆವಿ ಬಗ್ಗೆ ಮನವಿ ಮಾಡಿದರೂ ಸಹಿತ ಅದನ್ನು ಹಾಗೇ ಇಟ್ಟು ಅನಂತರ ವಿಚಾರ ಮಾಡೋಣ ಎಂದು ಹೇಳಿದರು. ಆ ಪ್ರದೇಶದ ರೈತರು ತಮ್ಮ ಬೇಡಿಕೆಗಳ ಬಗ್ಗೆ ತಿಂಗಳಾನುಗಟ್ಟಲೆ ಕೇಳಿದರೂ ಆಗಲಿಲ್ಲ, ಈಗ ಸರ್ಕಾರದವರು ಈ ವಿಷಯದಲ್ಲಿ ಆಮೂಲಾಗ್ರ ವಾಗಿ ವಿಚಾರ ಮಾಡಿ, ಮುಂದೆ ಏನು ಮಾಡಬಹುದು ಎನ್ನುವಂಥ ಒಂದು ದೃಷ್ಟಿಯನ್ನಿಟ್ಟುಕೊಂಡು ಮಾಡುತ್ತಿದ್ದಾರೆ. ಅದೂ ಅಲ್ಲದೆ ಈಗಾಗಲೇ ಎಲ್ಲಾ ಕಡೆಯಿಂದಲೂ ರೈತರನ್ನು ಕರೆದು ನಿಮ್ಮ ಸಮಸ್ಯೆಗಳೇನು, ಅದರ ಬಗ್ಗೆ ನಾವು ಏನು ಮಾಡುವುದಕ್ಕೆ ಆದೀತು ಎನ್ನತಕ್ಕ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುವ ಹಂತದಲ್ಲಿದ್ದಾರೆ. ರೈತರಿಗೆ ಏನು ಕೊಡಬೇಕಾಗಿದೆಯೋ ಅದನ್ನು ಕೊಟ್ಟೇ

ಕೊಡುತ್ತಾರೆ ಎನ್ನುವಂಥ ಭರವಸೆಯನ್ನು ನಾನು ತಳೆದಿದ್ದೇನೆ. ಈ ಸರ್ಕಾರ ಬದಲಾವಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ರೈತರಲ್ಲಿ, ಕಾರ್ಮಿಕರಲ್ಲಿ, ಯುವಕರಲ್ಲಿ ವಿಚಾರಧಾರೆ ಹರಿದು ಬಂದಿದೆ. ನಾನು ಈ ದಿಶೆಯಲ್ಲಿ ಟೀಕೆ ಮಾಡುತ್ತಿರುವ ವಿರೋಧಪಕ್ಷದವರಿಗೆ ಹೇಳುವುದಾದರೆ, ತಾವು ೩೪ ವರ್ಷಗಳಿಂದ ರಾಜ್ಯಭಾರ ಮಾಡಿ ಏನು ಅನುಭವವನ್ನು ಗಳಿಸಿಕೊಂಡಿದ್ದೀರಿ ಆ ಅನುಭವದ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ನೋಡಬೇಡಿ. ಒಳ್ಳೆಯ ಸೈದ್ಧಾಂತಿಕ ದೃಷ್ಟಿಯಿಂದ ತೆಗೆದುಕೊಂಡಿರತಕ್ಕ ಜನೋಪಯೋಗಿ ಕಾರ್ಯಕ್ರಮಗಳ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದನ್ನು ಬಿಟ್ಟು ಒಳ್ಳೆಯ ದೃಷ್ಟಿಯಿಂದ ಮಾತನಾಡುವುದು ಒಳ್ಳೆಯದೆಂದು ತಮ್ಮ ಮೂಲಕ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಸ್ವಾಮಿ ರಾವ್ (ಹೊಸನಗರ .—ಮಾನ್ಯ ಅಧ್ಯಕ್ಷರೇ, ನನ್ನ ನೆಚ್ಚಿನ ಗುರುಗಳೂ, ಕಟ್ಟಾ ಸಮಾಜವಾದಿಗಳೂ ಆದ ಗೋಪಾಲಗೌಡರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಪ್ರಾರಂಭ ಮಾಡುತ್ತೇನೆ. ಶ್ರೀಮಾನ್ ಗೋಪಾಲಗೌಡರನ್ನು ನಾನೇಕೆ ಈ ಸಂದರ್ಭದಲ್ಲಿ ನೆನಸಿಕೊಂಡೆ ಎಂದರೆ, ಒಂದು ಕಾಲದಲ್ಲಿ ರಾಜ್ಯಪಾಲರ ಭಾಷಣವನ್ನು ಹರಿದು ಎಸೆದಂತಹವರು ಅವರು. ಅದರಲ್ಲಿ ಅರ್ಥವಿತ್ತು. ರಾಜ್ಯಪಾಲರ ಭಾಷಣ ೧೦ ಪೇಜುಗಳಿವೆ, ಅದನ್ನು ರಾಜ್ಯಪಾಲರು ೨೪ನೇ ತಾರೀಖು ಇಂಗ್ಲೀಷಿನಲ್ಲಿ ಓದಿದರು. ಕೊನೆಯಲ್ಲಿ ದೇವರೇಗತಿ ಎಂದು ಕನ್ನಡದಲ್ಲಿ ಸ್ವಲ್ಪ ಬರೆದಿದ್ದಾರೆ. ಆದುದರಿಂದ ಈ ದಿವಸ ಗೋಪಾಲಗೌಡರನ್ನು ನೆನಪು ಮಾಡಿಕೊಳ್ಳತಕ್ಕ ಸಂದರ್ಭ ನನಗೆ ಬಂತು.

ಇಲ್ಲಿರತಕ್ಕ ಎಲ್ಲರೂ ರೈತರ ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದೇವೆ. ಆದರೆ ಯಾರಿಗೂ ರೈತರ ಬಗ್ಗೆ ಚಿಂತೆ ಇಲ್ಲ. ಸರ್ಕಾರದವರೇನೋ ಇವತ್ತಿನ ದಿವಸ ಹರಿಜನ ಗಿರಿಜನ ಹಾಗೂ ಬಡವರ ರಕ್ಷಣೆ ಮಾಡುತ್ತೇವೆಂದು ಹೇಳಿದ್ದಾರೆ, ಆದರೆ ಇನ್ನೂ ಹರಿಜನರಿಗೆ ಹಿಂಸೆಯಾಗುತ್ತಿದೆ, ಮಹಿಳೆಯರಿಗೆ ಹಿಂಸೆಯಾಗುತ್ತಿದೆ. ಇದು ಯಥೇಚ್ಛವಾಗಿ ನಡೆಯುತ್ತಿದೆ. ನನ್ನ ಕ್ಷೇತ್ರದಲ್ಲಿ ಮೊನ್ನೆ ದಿವಸ ಒಬ್ಬ ಹರಿಜನ ಮಹಿಳೆಯನ್ನು ಮಹಿಳೆ ಅಂತ ಹೇಳುವುದಕ್ಕಿಂತ ೧೨ ವರ್ಷಗಳ ಹುಡುಗಿಯೊಬ್ಬಳನ್ನು ಒಬ್ಬ ಹೊತ್ತುಕೊಂಡು ಹೋಗಿ ಅನಂತರ ೫-೬ ದಿವಸಗಳ ಕಾಲ ಇಟ್ಟುಕೊಂಡು, ಆ ಹುಡುಗಿಗೆ ಚೆನ್ನಾಗಿ ಹೆದರಿಸಿ, ಬೆದರಿಸಿ ನನ್ನ ಹೆಸರನ್ನು ಏನಾದರೂ ಹೇಳಿದರೆ ನಿನ್ನ ಜೀವ ತೆಗೆದು ಬಿಡುತ್ತೇನೆಂದು ಹೇಳಿ ಅನಂತರ ವಾಪಸ್ಸು ಆಕೆಯ ತಂದೆತಾಯಿಯ ಹತ್ತಿರ ಬಿಟ್ಟು ಹೋಗಿದ್ದಾನೆ. ಅವಳ ತಂದೆತಾಯಿಗಳು ಈಗ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಇದುವರೆಗೂ ಅದರ ಬಗ್ಗೆ ಪೋಲೀಸಿನವರು ಕ್ರಮ ತೆಗೆದುಕೊಂಡಿಲ್ಲ. ಮೊನ್ನೆ ಇದೇ ನಗರದಲ್ಲಿ ಮಹಿಳೆಯ ಮಾನಭಂಗವಾದಾಗ ರಕ್ಷಣೆ ಕೊಡಲಿಕ್ಕೆ ಆಗಲಿಲ್ಲ, ಇನ್ನು ಹಳ್ಳಿಗಳಲ್ಲಿ ಪಟ್ಟಣದಿಂದ ದೂರವಿರತಕ್ಕ ಪ್ರದೇಶಗಳಲ್ಲಿರತಕ್ಕವರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ? ಆದುದರಿಂದ ಈ ಎರಡು ತಿಂಗಳಲ್ಲಿ ನೀವು ಏನು ಸಾದನೆ ಮಾಡಿದ್ದೀರಿ ಎಂಬುದರ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ ಮೇಲಾಗಿ ರಾಜ್ಯಪಾಲರ ಭಾಷಣದಲ್ಲಿ 'ಥಿಂಕ್‌ಟ್ಯಾಂಕ್' ಮಾಡುವುದರ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ನಾನೊಂದು ಸಲಹೆ ಕೊಡಬಯಸುತ್ತಿದ್ದೇನೆ, ಅದು ಏನೆಂದರೆ, ಎಲೆಕ್ಟ್ರಾನಿಕ್ ಅಡ್ಮಿನಿಸ್ಟ್ರೇಷನ್ ತರುವುದಕ್ಕೂ ಏನಾದರೂ ವ್ಯವಸ್ಥೆ ಮಾಡಿ ಬಿಟ್ಟರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. 'ಥಿಂಕ್ ಟ್ಯಾಂಕ್' ಏತಕ್ಕೆ ಬೇಕು ? ಥಿಂಕ್ ಟ್ಯಾಂಕ್‌ನ್ನು ನೀವು ಇಟ್ಟುಕೊಳ್ಳುವುದಾದರೆ ನಾವು ಎಲೆಕ್ಷನ್ ನಡೆಸಿ ಮನೆ ಮನೆಗೂ ಹೋಗಿ ಕೈ ಮುಗಿದು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ನಾವು ಇಲ್ಲಿಗೆ ಏತಕ್ಕೆ ಬರಬೇಕಾಗಿತ್ತು ಎಂದು ಪ್ರಶ್ನೆ ಮಾಡುತ್ತೇನೆ ಇಂಥಾ ವ್ಯವಸ್ಥೆ ಮಾಡುವುದು ನನಗಂತೂ ಸರಿ ಕಾಣುತ್ತಿಲ್ಲ. ಮೇಲಾಗಿ ನಾನು ಹೊಸದಾಗಿ ಈ ಸಭೆಗೆ ಬಂದಿದ್ದೇನೆ. ಸರ್ಕಾರದವರು ನನಗೊಂದು ಪತ್ರವನ್ನು ಕಳುಹಿಸಿದ್ದಾರೆ, ನಿಮ್ಮ ಕ್ಷೇತ್ರದಲ್ಲಿ ಆಗತಕ್ಕ ಕಾಮಗಾರಿಗಳ ಬಗ್ಗೆ, ಸ್ಕೂಲ್, ಸೇತುವೆ, ಆಸ್ಪತ್ರೆಗಳ ಬಗ್ಗೆ ಒಂದು ಪಟ್ಟಿ ಮಾಡಿ ಕಳುಹಿಸಿ ಕೊಡಿ. ಹಾಗೆಯೇ ಕ್ಷಾಮ ನಿವಾರಣೆಯ ಬಗ್ಗೆ ಕೂಡ ಬರೆದು ಕಳುಹಿಸಿ ಎಂದು ತಿಳಿಸಿದ್ದಾರೆ ಇದು ನನಗಂತೂ ಅರ್ಥವಾಗಲಿಲ್ಲ. ಈ ರೀತಿಯ ಪತ್ರಗಳನ್ನು ಸದಸ್ಯರಿಗೆ ಕಳುಹಿಸುತ್ತಿರುವುದರಿಂದ ಸರ್ಕಾರ ಇದೆಯೋ ಇಲ್ಲವೋ ? ಅಧಿಕಾರಿಗಳೇನು ಮಾಡುತ್ತಿದ್ದಾರೋ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಇಂಥಾ ಶಬ್ದಗಳನ್ನು, ಇಂಥಾ ವಾಕ್ಯಗಳನ್ನು ಉಪಯೋಗಿಸಿ ಕಳುಹಿಸುವಾಗ ಮೇಲಾಧಿಕಾರಿಗಳು ಏನು ಮಾಡುತ್ತಿದ್ದರು ? ಇದರಿಂದಲೇ ಇವತ್ತಿನ ದಿವಸ ಕ್ಷಾಮ

ಪರಿಹಾರ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂದು ತಿಳಿಯಬಹುದು. ಇವತ್ತು ವಿಧಾನಸೌಧದಲ್ಲಿರತಕ್ಕ ಅಧಿಕಾರಿಗಳೇನು ಮಾಡುತ್ತಿದ್ದಾರೆ? ದೂರದಲ್ಲಿರತಕ್ಕವರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಆಗದಿದ್ದರೂ ವಿಧಾನಸೌಧದ ಪಕ್ಕದಲ್ಲಿಯೇ ಯಾರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಜನ ಅತ್ತ ಕಡೆ ತಿರುಗಾಡುವ ಹಾಗಿಲ್ಲ, ಪೋಲೀಸಿನವರು ಆ ರೀತಿಯಾಗಿ ಬಂದೂಕು ಹಿಡಿದುಕೊಂಡು ನಿಂತಿದ್ದಾರೆ. ಅವರ ಬಗ್ಗೆ ಏತಕ್ಕೆ ತಾವು ವಿಚಾರ ಮಾಡಲಿಲ್ಲ. ಇದೇ ರೀತಿ ರೈತರ ಬಗ್ಗೆ ಚುನಾವಣೆಯ ಕಾಲದಲ್ಲಿ ಭರವಸೆಕೊಟ್ಟು ಇಲ್ಲಿಗೆ ಗೆದ್ದು ಆರಿಸಿ ಬಂದಿದ್ದೀರಿ.

ಒಬ್ಬ ಮಾನ್ಯ ಸದಸ್ಯರು.—ನೀವು ಹೇಳಿರಲಿಲ್ಲವೇ ?

ಶ್ರೀ ಸ್ವಾಮಿ ರಾವ್ ಬಿ.—ನಾವು ಹೇಳಿದ್ದೇವೆ. ಹೇಳಲಿಲ್ಲವೆಂದು ಅಲ್ಲ. ರೈತರಿಗೆ ಪರಿಹಾರ ಒದಗಿಸುತ್ತೇವೆಂದು ಹೇಳಿದ್ದೇವೆ. ಸ್ಟೈಫಂಡರಿ ಗ್ರಾಜ್ಯುಯೇಟ್ಸ್ ಬಗ್ಗೆ ಹೇಳಿದ್ದೇವೆ. ಮಹಿಳೆಯರಿಗೆ ರಕ್ಷಣೆ ಕೊಡುತ್ತೇವೆಂದು ಹಾಗೂ ಇನ್ನು ಅನೇಕ ಆಶ್ವಾಸನೆಗಳನ್ನು ನಾವೂ ಕೂಡ ಕೊಟ್ಟು ಬಂದಿದ್ದೇವೆ ಅದೇ ರೀತಿಯಾಗಿ ಕುಡಿಯುವ ನೀರಿನ ಬಗ್ಗೆ ಕೂಡ ಭರವಸೆ ಕೊಟ್ಟು ಬಂದಿದ್ದೇವೆ, ಆದರೆ ಇದುವರೆಗೂ ಏನೂ ನಡೆದಿಲ್ಲ ಗೋಲಿಬಾರ್ ಘಟನೆಗಳ ಬಗ್ಗೆ ಇನ್ನೂ ವಿಚಾರಣೆ ಶುರುವಾಗಿಲ್ಲ. ಆದುದರಿಂದ ಈ ಎಲ್ಲಾ ವಿಚಾರಗಳನ್ನು ನಾನು ಹೇಳಬೇಕಾಗಿದೆ. ರಾಜ್ಯಪಾಲರ ಭಾಷಣದ ಬಗ್ಗೆ ಕೆಲವರು ಹೊಗಳಿದ್ದಾರೆ ಮತ್ತೆ ಕೆಲವರು ತೆಗಳಿದ್ದಾರೆ. ನಾನಂತೂ ಇದನ್ನು ಭಾಷಣವೆಂದು ಹೇಳುವುದಿಲ್ಲ, ಏತಕ್ಕೆಂದರೆ ಇದರಲ್ಲಿ ಇನ್ನೂ ಅನೇಕ ಸಮಸ್ಯೆಗಳು ಬಿಟ್ಟು ಹೋಗಿದೆ. ನಮ್ಮ ರೈತರ ಸಮಸ್ಯೆಗಳ ಬಗ್ಗೆ ಇದರಲ್ಲಿ ಇಲ್ಲ, ಬಡವರ ಸಮಸ್ಯೆ, ಹರಿಜನ ಗಿರಿಜನರ ಸಮಸ್ಯೆಯ ಬಗ್ಗೆ ಪ್ರಸ್ತಾಪವಾಗಿದ್ದರೂ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಒಂದು ಚಕಾರವನ್ನೂ ಹೇಳಿಲ್ಲ ಇನ್ನು ದೇಶದ ಅಭಿವೃದ್ಧಿಗಾಗಿ ಯಾವ ಜನ ಇವತ್ತು ತಮ್ಮ ಮನೆ, ಭೂಮಿಯನ್ನು ಕಳೆದುಕೊಂಡು ನೆಲೆ ಇಲ್ಲದೆ ತೊಳಲಾಡುತ್ತಿದ್ದಾರೆ, ಆ ಮುಳುಗಡೆಯಾದಂಥ ಜನರ ಸಮಸ್ಯೆಯ ಬಗ್ಗೆ ಒಂದು ಮಾತನ್ನೂ ಹೇಳಿಲ್ಲ. ಇದೆಲ್ಲದರ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿತ್ತು ಆದರೆ ಹೇಳಿಲ್ಲ ಇನ್ನೂ ಕೆಲವು ವಿಷಯಗಳನ್ನು ಹೇಳಬೇಕಾಗಿತ್ತು. ಆದರೆ ಸಮಯದ ಅಭಾವವಿರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಹೆಗಡೆ (ಅಂಕೋಲ).—ಸನ್ಮಾನ್ಯ ಅಧ್ಯಕ್ಷರೇ, ಹಾಗೂ ವಿಧಾನ ಮಂಡಲದ ಮಾನ್ಯ ಸದಸ್ಯರುಗಳೇ, ನಾನು ಈ ಸದನಕ್ಕೆ ಹೊಸಬನಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ಮತ್ತು ಇಲ್ಲಿಯವರೆಗೂ ಮಾತನಾಡಿದಂಥ ಅನೇಕ ಮಹನೀಯರ ವಿಚಾರಗಳನ್ನು ನಾನು ಕೇಳಿದ್ದೇನೆ ರಾಜ್ಯಪಾಲರ ಭಾಷಣದಲ್ಲಿ. "ತಾಲ್ಲೂಕ್ ಮತ್ತು ಗ್ರಾಮ ಮಟ್ಟಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸಹಕಾರ ಸಂಘಸಂಸ್ಥೆಗಳೇ ಮುಂತಾದ ಸಂಸ್ಥೆಗಳ ಆಡಳಿತ ವಿವಿಧ ಸ್ಥಳಗಳಲ್ಲಿ ಜನತಾ ಪ್ರತಿನಿಧಿಗಳು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಅನುಕೂಲ ಕಲ್ಪಿಸಿಕೊಡುವುದು ನನ್ನ ಸರ್ಕಾರದ ಮೂಲ ಧ್ಯೇಯವಾಗಿದೆ'' ಎಂದು ಹೇಳಿದ್ದಾರೆ, ಅವರ ಈ ಸಿದ್ಧಾಂತಕ್ಕೆ ಜನತಾ ಪ್ರತಿನಿಧಿಗಳು ಆಡಳಿತದಲ್ಲಿ ಭಾಗವಹಿಸುವುದಕ್ಕೆ ಮೊದಲು ಅಗತ್ಯವಿರುವ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇವರಲ್ಲಿ ಚುನಾವಣೆ ಮುಖಾಂತರ ಎಂದು ಇದ್ದಿದ್ದರೆ ನನಗೂ ಸ್ವಲ್ಪ ಧೈರ್ಯ ಬರುತ್ತಿತ್ತು. ಇಲ್ಲಿ ಚುನಾವಣೆ ಮುಖಾಂತರವಾಗಿ ಎಂದು ಹೇಳದೇ "ಅಗತ್ಯವಿರುವ ಸಕಲ ಕ್ರಮಗಳನ್ನೂ ಕೈಗೊಳ್ಳಲು ನಿರ್ಧರಿಸಿದೆ'' ಎಂದು, ಹೇಳಿರುವುದರಿಂದ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದ್ದೆ. ಬೇರೆ ಯಾವುದೇ ಅಡ್ಡ ದಾರಿಯಿಂದ ತಮಗೆ ಬೇಕಾದಂಥವರನ್ನು ಅಲ್ಲಿಗೆ ಹಾಕಿ ಬೇಕಾದಂಥ ಕಾರ್ಯಕ್ರಮಗಳನ್ನು ನಡೆಸಿಕೊಳ್ಳಬಹುದು ಎನ್ನತಕ್ಕ ಒಂದು ಸಂಶಯ ಒಡಮೂಡಿ ಬರುತ್ತಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ. ಇಲ್ಲಿ ಪಕ್ಷಾಂತರ ನಿಷೇಧದ ಮಸೂದೆಯನ್ನು ತರುತ್ತೇವೆಂದು ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಕಳೆದ ೩೫ ವರ್ಷದವರೆಗೂ ಕಾಂಗ್ರೆಸ್ ಸರ್ಕಾರವೇ ಆಡಳಿತವನ್ನು ನಡೆಸಿ ಈಗ ಕಾಂಗ್ರೆಸ್ಸೇತರರಾದ ನಾವು ಇವತ್ತು ಇದನ್ನು ಜಾರಿಗೆ ತರುತ್ತಿದ್ದೇವೆಂದು ಅತ್ತ ಕಡೆಯ ಅನೇಕ ಮಹನೀಯರು ಹೇಳುತ್ತಿದ್ದಾರೆ. ನನಗಂತೂ ಇದು ಸರಿಯಾಗಿ ಅರ್ಥವಾಗಲಿಲ್ಲ. ಏತಕ್ಕೆಂದರೆ ನಾನು ಮೊದಲಿನಿಂದಲೂ ಕಾಂಗ್ರೆಸ್‌ನಲ್ಲಿಯೇ ಇದ್ದಂಥವನು, ನಮ್ಮ ಕಾಂಗ್ರೆಸ್ ಸಂಸ್ಥೆಯಲ್ಲಿಯೇ ಇದ್ದವರು ಇವತ್ತು ಸಿಡಿದು ಅತ್ತ ಕಡೆಗೆ ಹೋಗಿ ರಾಜ್ಯಭಾರ ಮಾಡುತ್ತಿದ್ದಾರೆಯೇ ಹೊರತು ಬೇರೆ ಏನೂ ಅಲ್ಲ. ಆದುದರಿಂದ ಇದು ಕಾಂಗ್ರೆಸ್ಸೇತರ ಸರ್ಕಾರ

ವೆಂದರೆ ಅದು ಒಂದು ಬಲವಾದಂಥ ಪಾರ್ಟಿಯಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಇನ್ನು ನಾನು ಆಗಲೇ ಹೇಳಿದ ಹಾಗೆ ನಾನು ಇಲ್ಲಿಗೆ ಹೊಸ ಸದಸ್ಯನಾಗಿ ಆರಿಸಿ ಬಂದಿದ್ದೇನೆ. ನಾನು ಇಲ್ಲಿ ನಡೆಯುತ್ತಿರತಕ್ಕಂಥ ಕಾರ್ಯಕ್ರಮದ ಕಲಾಪಗಳನ್ನು ನೋಡಿದಾಗ ಜನತೆ ನಮ್ಮನ್ನು ಯಾವ ರೀತಿಯಾಗಿ ಆಳತೆ ಮಾಡಬೇಕು, ನಾವು ಯಾವ ರೀತಿಯಾಗಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆಂಬುದರ ಬಗ್ಗೆ ನಾವೆಲ್ಲಾ ಸರಿಯಾಗಿ ಅರಿತಿಲ್ಲವೆಂದು ಕಾಣುತ್ತದೆ. ಬಹುಶಃ ಇಲ್ಲಿ ನಡೆಯುತ್ತಿರತಕ್ಕಂಥ ಕಾರ್ಯಕ್ರಮವನ್ನು ನೋಡಿದರೆ ನಾಯಕರೇ ಇಲ್ಲದೇ ಹೋದಂಥ ಅಥವಾ ಬಹು ನಾಯಕರುಗಳಿಂದ ಕೂಡಿದ ಸರ್ಕಾರ ಇದೆಯೋ ಅಂತ ಹೇಳಿ ಜನ ತಿಳಿದುಕೊಂಡಾರು ಎಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲವೆಂದು ತಿಳಿದುಕೊಂಡಿದ್ದೇನೆ.

ಇಲ್ಲಿ ಎಲ್ಲ ಮಟ್ಟದಲ್ಲೂ ಭ್ರಷ್ಟಾಚಾರಗಳನ್ನು ಮುಕ್ತ ಮಾಡಿ ಸ್ವಚ್ಛ ಆಡಳಿತ ಒದಗಿಸುವುದಕ್ಕಾಗಿ ಇವರು ಲೋಕಾಯುಕ್ತವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಮುಂದೆ ನಾವು ಆಲೋಚನಾ ಟ್ಯಾಂಕ್ ಮಾಡುತ್ತೇವೆ ಮತ್ತು ಆರ್ಥಿಕಾಭಿವೃದ್ಧಿಯ ಸಲುವಾಗಿ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ, ಅಲ್ಪಸಂಖ್ಯಾತರಿಗೆ ಭದ್ರತೆ ಕೊಡುವ ಸಲುವಾಗಿ ಅಲ್ಪಸಂಖ್ಯಾತರ ಆಯೋಗವನ್ನು ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಇದನ್ನೆಲ್ಲ ನೋಡಿದಾಗ ನನಗನ್ನಿಸುತ್ತದೆ ಬಹಳ ಒಳ್ಳೆಯ ರೀತಿಯಿಂದ ಆಡಳಿತವನ್ನು ಕೊಡತಕ್ಕ ಒಂದು ಕಾರ್ಯಕ್ರಮವನ್ನು ಇವರು ಹುಟ್ಟು ಹಾಕುವುದಕ್ಕೆ ಹೊರಟಿದ್ದಾರೆಂದು. ಆದರೆ ಇದನ್ನೆಲ್ಲಾ ಕಾರ್ಯಗತ ಮಾಡತಕ್ಕ ಜನ ಯಾವ ರೀತಿ ಮಾಡುತ್ತಾರೆಂದು ಹೇಳುವುದನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಏಕೆಂದರೆ ಇವುಗಳನ್ನು ಆಚರಣೆಗೆ ತರತಕ್ಕ ಜನರು ಯಾರು ಎಂಬುದನ್ನು ನಾವು ಆಲೋಚಿಸಬೇಕಾಗಿದೆ. ಅನೇಕ ಯುವಜನರಿಗೆ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವರಲ್ಲಿ ಏತಕ್ಕೆ ಕಷ್ಟವಾಗಿದೆ ಎಂದರೆ ಈವತ್ತು ಆಡಳಿತದಲ್ಲಿ ಅನುಭವ ಇರತಕ್ಕ ಜನರಿದ್ದರೂ ವ್ಯವಹಾರಿಕ ಕ್ಷೇತ್ರದಲ್ಲಿ ತಜ್ಞರಿಲ್ಲದಿರುವುದರಿಂದ ಇದು ಕುಂಠಿತವಾಗಿದೆಯೋ ಹೊರತು ಬುದ್ಧಿವಂತಿಕೆಯಿಂದೇನು ಈ ಯೋಜನೆ ಕುಂಠಿತವಾಗಿಲ್ಲ. ಸಾಮಾನ್ಯ ತಜ್ಞರಿಗೂ ವ್ಯವಹಾರ ತಜ್ಞರಿಗೂ ಬಹಳ ಅಂತರ ಇದೆ ಎಂಬುದನ್ನು ಸರ್ಕಾರ ತಿಳಿದುಕೊಳ್ಳಬೇಕು. ಇಂದು ವ್ಯವಹಾರಿಕವಾಗಿ ಕೆಲಸ ಮಾಡತಕ್ಕ ಜನರು, ಯೋಜನೆಯನ್ನು ಸಾಧನೆ ಮಾಡತಕ್ಕ ಜನರು ಅನೇಕ ಸಾಧನೆಗಳನ್ನು ಮಾಡಿದಂತಹ ಜನರು ರಾಜ್ಯದಲ್ಲಿದ್ದಾಗ ಅವರು ಯಾವ್ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಿ ತೋರಿಸಿದ್ದಾರೆಂಬುದನ್ನು ಗುರುತಿಸಿ ಅಂಥವರ ನೆರವನ್ನು ತೆಗೆದುಕೊಳ್ಳದೆ ಬರೀ ವಿದ್ಯಾವಂತರ ಮತ್ತು ತಜ್ಞರ-ಸಮಿತಿಗಳನ್ನು ಮಾಡಿ ಇವತ್ತು ನಾವು ಜನರಿಗೆ ಹೊಸ ಕಾರ್ಯಕ್ರಮ ಹಾಕಿ ಒಳ್ಳೆಯದು ಮಾಡುತ್ತೇವೆಂದು ಹೇಳಿದರೆ ಬಹುತೇಕ ಅದು ಶಬ್ದಾಡಂಬರ ಆಗಬಹುದೇ ಹೊರತು ಅದರ ಪರಿಣಾಮ ಒಳ್ಳೆಯದಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಈ ಸಲಹಾ ಪರಿಷತ್ತು, ಆಲೋಚನಾ ಟ್ಯಾಂಕು ಇವುಗಳನ್ನು ಯಾವ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕೆಂದಿದೆಯೋ ಆ ಕ್ಷೇತ್ರದಲ್ಲಿ ವ್ಯವಹಾರ ಮಾಡಿ, ನಮ್ಮ ದೇಶದ, ನಮ್ಮ ಕ್ಷೇತ್ರದ ತಜ್ಞರನ್ನು ಸಹ ಅಲಕ್ಷ್ಯ ಮಾಡದೆ ತೆಗೆದುಕೊಂಡರೆ ಮಾತ್ರ ಇದರ ಫಲ ಸಿಗಬಹುದೆಂದು ಆಶಿಸುತ್ತೇನೆ. ಇದಕ್ಕೆ ಮುಖ್ಯವಾಗಿ ಬೇಕಾಗಿರತಕ್ಕಂಥ ಶಿಕ್ಷಣದ ವಿಚಾರವಾಗಿ ಹೇಳುವುದಾದರೆ, ರಾಜ್ಯಪಾಲರ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳದಿರುವುದರಿಂದ ಅದಕ್ಕೆ ಅರ್ಥವಿಲ್ಲವೆಂದು ಅನ್ನಿಸುತ್ತದೆ. ನಿಜವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಕೊಡಬೇಕಾದ ಪ್ರಾಶಸ್ತ್ಯವನ್ನು ಸರ್ಕಾರ ಕೊಟ್ಟಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಅಲಕ್ಷ್ಯ ಮಾಡಿ ಹೆಚ್ಚಿನ ಶಿಕ್ಷಣವನ್ನು ಅಂದರೆ ಪ್ರೌಢ ಮತ್ತು ಕಾಲೇಜು ಶಿಕ್ಷಣವನ್ನು ಹೆಚ್ಚಿನ ರೀತಿಯಲ್ಲಿ ಊರ್ಜಿತ ಮಾಡುತ್ತೇವೆಂದು ಹೇಳಿದರೆ ಎಷ್ಟರಮಟ್ಟಿಗೆ ಅದು ಒಳ್ಳೆಯದಾಗಬಹುದು ಎಂಬುದನ್ನು ಆಲೋಚಿಸಬೇಕಾಗಿದೆ. ಇವತ್ತು ಅನುಭವಿಸತಕ್ಕ ಒಂದು ಅರಾಜಕತೆ ಆಗಲಿ ಪ್ರತಿದಿವಸ ನೋಡತಕ್ಕ ಅನೇಕ ಕೆಟ್ಟ ಸಂಪ್ರದಾಯಗಳ ಚಟುವಟಿಕೆಗಳನ್ನಾಗಲಿ ನೋಡಿದಾಗ, ಶಿಕ್ಷಣ ಕ್ಷೇತ್ರದಲ್ಲಿರತಕ್ಕ ಅತ್ಯಮೂಲ್ಯವಾದ ಅಂಶಗಳನ್ನು ಮರೆತ್ತಿದ್ದಾರೆ, ನೈತಿಕ ಶಿಕ್ಷಣ ಕೊಡತಕ್ಕ ಪ್ರಾಥಮಿಕ ಶಿಕ್ಷಣವನ್ನು ಮರೆತಿದ್ದಾರೆ, ಪ್ರಾಥಮಿಕ ಶಿಕ್ಷಣಕ್ಕೆ ಕೊಡಬೇಕಾದ ಮರ್ಯಾದೆಯನ್ನು ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ, ಇನ್ನೂ ಅತ್ಯಂತ ಮಹತ್ವದ ಕಾರ್ಯಕ್ರಮವಾದ ವೈದ್ಯಕೀಯ ಸೌಲಭ್ಯ ಏನಿದೆ ಅದು ಎಲ್ಲಿಯೂ ಸರಿಯಾಗಿ ಸಿಗುತ್ತಿಲ್ಲ. ಇವತ್ತು ಅವಶ್ಯಕ ಕಾರ್ಯಕ್ರಮವಾದ ವೈದ್ಯಕೀಯ ಸೌಲಭ್ಯದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಹಳ್ಳಿಯ ವೈದ್ಯರ ರಕ್ಷಣೆಯ ಸಲುವಾಗಿ ಹಿಂದಿನ ಸರ್ಕಾರ ಏನೇನು ಸವಲತ್ತುಗಳನ್ನು ಕೊಡುವುದಾಗಿ

ಹೇಳಿತ್ತು ಅದನ್ನಾದರೂ ಸೇರಿಸಿದ್ದರೆ ಒಳ್ಳೆಯದಿತ್ತು. ಯಾರಿಗೆ ಯಾವ ನೋವು ಇದೆ ಎಂಬುದನ್ನು ಕನಸು ಕಂಡ ಮಹಾತ್ಮ ಗಾಂಧಿಯವರ ಆರ್ಥಿಕಾಭಿವೃದ್ಧಿ ತತ್ವದಲ್ಲಿ ನಮ್ಮ ಸರ್ಕಾರಕ್ಕೆ ಸಂಪೂರ್ಣ ನಂಬಿಕೆ ಇದೆ ಈ ಧ್ಯೇಯ ಸಾಧನೆಗಾಗಿ ಕಡುಬಡವರಲ್ಲಿ ಅಂತ್ಯೋದಯ ಕಾರ್ಯಕ್ರಮವನ್ನು ನನ್ನ ಸರ್ಕಾರ ಜಾರಿಗೆ ತರಲಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ನಿಜವಾಗಿ ಇದು ಪ್ರತಿಯೊಬ್ಬರೂ ಸ್ವಾಗತ ಮಾಡತಕ್ಕ ವಿಚಾರ. ಆದರೆ ಇದನ್ನು ಯಾರು ಹೇಳಿದ್ದಾರೆಂಬುದು ಪ್ರಶ್ನೆ. ಆವತ್ತು ಗಾಂಧೀಜಿಯವರ ಸಮಾಧಿ ಎದುರು ಪ್ರತಿಜ್ಞೆ ಮಾಡಿ ಸ್ವಚ್ಛವಾದ, ಭದ್ರವಾದ ಆಡಳಿತವನ್ನು ಕೊಡುತ್ತೇವೆಂದು ಹೇಳಿದಂತಹ ಜನರು ೩ ವರ್ಷಗಳ ಕಾಲವೂ ರಾಜ್ಯಭಾರ ಮಾಡಲಿಕ್ಕೆ ಆಗದೆ ಹೋದವರು ಹಾಗೂ ಯಾರು ಆವತ್ತು ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಬರಲಿಕ್ಕೆ ಪ್ರಯತ್ನ ಮಾಡಿದಂತಹ ಜಯಪ್ರಕಾಶ್ ನಾರಾಯಣರನ್ನು ಅಧಿಕಾರಕ್ಕೆ ಬಂದಾಗ ಅವರ ಸಲಹೆಗಳನ್ನು ಕೇಳದೆ ಇದ್ದ ಜನರು ಈ ಮಾತನ್ನು ಹೇಳುತ್ತಿದ್ದಾಗ, ಆ ಜಾಗದಲ್ಲಿ ಕೂರಲಿಕ್ಕೆ ಅವಕಾಶ ಮಾಡಿಕೊಟ್ಟಂತಹ ಅವರ ಸಂಗಡ ಇದ್ದಂತಹ ಹಾಗೂ ಅವರನ್ನು ನೀವೇ ಇಂದ್ರ-ಚಂದ್ರ ಎಂದಂತಹ ಜನ ಬಂಗಾರಪ್ಪನವರನ್ನು ತಿರಸ್ಕರಿಸಿದಾಗ ಇವರು ಈ ಕೆಲಸ ಮಾಡಬಹುದೇ ಎಂದು ನನಗೆ ಸಂಶಯ.

ಒಬ್ಬರು ಮಾನ್ಯ ಸದಸ್ಯರು.—೫ ವರ್ಷ ಆದಮೇಲೆ ಕೇಳಿ.

ಶ್ರೀ ಎಸ್.ಆರ್.ಹೆಗಡೆ.—ತಾವು ಮಾತನಾಡುವಾಗ ನಾನು ಮಧ್ಯೆ ಮಾತನಾಡಲಿಲ್ಲ. ನನ್ನಿಂದ ತಪ್ಪಿದ್ದರೆ ಹೇಳಿ. ರಾಜ್ಯಪಾಲರ ಭಾಷಣದಲ್ಲಿ ಸಂಪೂರ್ಣವಾಗಿ ನೋಡಲಾಗುವುದು ಮಾಡಲಾಗುವುದು, ಪರಿಶೀಲಿಸಲಾಗುವುದು ಎನ್ನುವ ರೀತಿಯಲ್ಲಿ ಅಂದರೆ ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಮಾತುಗಳಿವೆಯೇ ಹೊರತು ನಿಶ್ಚಿತವಾಗಿ ಇಂಥದ್ದನ್ನು ಮಾಡುತ್ತೇವೆಂದು ಹೇಳತಕ್ಕ ಧೈರ್ಯ ಕಾಣಲಿಲ್ಲ. ಆದ್ದರಿಂದ ಈ ಭಾಷಣ ಏನಿದೆ ಇದು ತುಂಬಾ ನಿರಾಶಾದಾಯಕವಾದುದೆಂದು ಹೇಳಿ, ಇಷ್ಟು ಕಾಲ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸೂಚಿಸುವುದಕ್ಕೆ ಮುಂಚೆ ಕರ್ನಾಟಕದ ಜನತೆಗೆ ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನತೆಗೆ ಈ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕಾರಣ ಇಷ್ಟೆ, ನಮ್ಮ ವಿರೋಧ ಪಕ್ಷದ ನಾಯಕರ ಮತ್ತು ಅವರ ಪಕ್ಷದ ಜನರ ಕನಸನ್ನು ಜನರು ಕನಸಾಗಿಯೇ ಉಳಿಸಲಿಕ್ಕೆ ಪ್ರಯತ್ನ ಮಾಡಿದ ಫಲವಾಗಿ ಇಲ್ಲಿ ಹೊಸ ಸರ್ಕಾರ ಬರಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಈ ಸದನದ ಮೂಲಕ ನನ್ನ ಹಾಗೂ ನಮ್ಮ ಪಕ್ಷದ ಪರವಾಗಿ ಕರ್ನಾಟಕದ ಜನತೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹಲವಾರು ಉತ್ತಮವಾದ ಅಂಶಗಳನ್ನು ಉಲ್ಲೇಖ ಮಾಡಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುತ್ತೇವೆಂದು ಘೋಷಣೆ ಮಾಡಿದ್ದಾರೆ. ಈಗಾಗಲೇ ಈ ಬಗ್ಗೆ ಕ್ರಮ ಕೂಡ ಕೈಗೊಂಡಿದ್ದಾರೆ. ಪತ್ರಿಕಾ ಸ್ವಾತಂತ್ರ್ಯವನ್ನು ಉಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಕೂಡ ಇದರಲ್ಲಿ ಉಲ್ಲೇಖ ಇದೆ. ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಆಲೋಚನೆ ಮಾಡುವಾಗ ಸಣ್ಣ ಹಾಗೂ ಮಧ್ಯಮ ದರ್ಜೆಯ ಪತ್ರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆಂಬ ವಿಶ್ವಾಸ ವ್ಯಕ್ತ ಮಾಡಿದೆ. ಹಳ್ಳಿಗಳಲ್ಲಿರುವ ನಿರುದ್ಯೋಗ ನಿವಾರಣೆ ವಿಚಾರದಲ್ಲಿ ಕಾರ್ಯಕ್ರಮ ಹಾಕಿಕೊಂಡು ಗೃಹ ಕಲೆಗಳಿಗೆ ಆದ್ಯತೆ ಕೊಡುತ್ತದೆ ಮತ್ತು ಭೂಸೇನೆಯ ಪುನರ್ ನಿರ್ಮಾಣಕ್ಕೆ ವ್ಯವಸ್ಥೆ ಮಾಡುತ್ತದೆಂದು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ.

೩-೩೦ ಪಿ. ಎಂ.

ಹರಿಜನ ಗಿರಿಜನರ ಹಕ್ಕು ರಕ್ಷಣೆಗೆ ಮತ್ತು ಸಾಮಾಜಿಕ ಏಳಿಗೆಗೆ ಹರಿಜನ ಗಿರಿಜನರ ಆಯೋಗವನ್ನು ಮಾಡಿ ಅದರ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯ ವಿಚಾರ. ಅದೇ ರೀತಿ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಆಯೋಗವನ್ನು ರಚನೆ ಮಾಡುವ ಬಗ್ಗೆ ಉಲ್ಲೇಖ ಇದೆ. ಇದರ ಬಗ್ಗೆ ಕೇವಲ ಹಿಂದಿನ ಸರ್ಕಾರಗಳು ಮಾಡಿದ ರೀತಿಯಲ್ಲಿ ಮಾಡದೆ ಈ ಯೋಜನೆಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕು. ಹರಿಜನ ಗಿರಿಜನರು ಮತ್ತು ಅಲ್ಪಸಂಖ್ಯಾತರಿಗೆ ವಿಶ್ವಾಸ ಮೂಡುವಂತೆ ಕೆಲಸಕಾರ್ಯಗಳನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ವಿನಂತಿ ಮಾಡಿ

ಕೊಳ್ಳುತ್ತೇನೆ. ಉದ್ಯೋಗ ವಿನಿಮಯ ಕೇಂದ್ರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಇದೆ. ಅಲ್ಲಿ ಕಂಪ್ಯೂಟರ್‌ಗಳನ್ನು ಬಳಸಿ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯವನ್ನು ಕ್ರಮಬದ್ಧಗೊಳಿಸಲಾಗುವುದಲ್ಲದೆ ಸುಧಾರಣೆಯನ್ನು ತರಲಾಗುವುದೆಂದು ಹೇಳಿದ್ದಾರೆ. ಇದು ತೀವ್ರಗತಿಯಲ್ಲಿ ಆಗಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ವಿಶೇಷವಾಗಿ ಕಾರ್ಮಿಕ ವಿವಾದಗಳನ್ನು ತ್ವರಿತವಾಗಿ ಪರಿಹಾರ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ಉಲ್ಲೇಖ ಮಾಡಿದ್ದಾರೆ. ಕೆಲವು ಪಕ್ಷಗಳಿಂದ ಕೂಡಿದ ಕಾರ್ಮಿಕ ನಾಯಕರುಗಳು ಹಿಂದಿನ ಸರ್ಕಾರದಲ್ಲಿ ಯಾವ ರೀತಿ ನಡೆದುಕೊಂಡರು ಎಂಬುದನ್ನು ಗಮನಿಸಿ ಕ್ರಮ ತೆಗೆದುಕೊಳ್ಳಬೇಕು. ಹೆದರಿಕೆ ಬೆದರಿಕೆಗಳಿಂದ ಕಾರ್ಮಿಕರನ್ನು ಶೋಷಿಸಿ ಕಾರ್ಮಿಕರ ಹಕ್ಕುಗಳ ಹೋರಾಟದ ಹೆಸರಿನಲ್ಲಿ ಅನೇಕ ಕೈಗಾರಿಕೆಗಳನ್ನು ನಿರ್ನಾಮ ಮಾಡಿದಂಥದ್ದು ಮತ್ತು ಲಕ್ಷಗಟ್ಟಲೇ ಹಣವನ್ನು ಪಲಿಗೆ ಮಾಡಿದಂಥದ್ದು ಇವುಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು. ವಿಶೇಷವಾಗಿ ಮಂಗಳೂರಿನ ಬಗ್ಗೆ ಹೇಳುವುದಾದರೆ ಹಲವಾರು ಕೈಗಾರಿಕೆಗಳು ಆ ಸಂದರ್ಭದಲ್ಲಿ ಮುಚ್ಚಿಹೋದುದನ್ನು ನೋಡಿದ್ದೇವೆ. ಮಂಗಳೂರಿನ ನವ ಬಂದರಿನಲ್ಲಿ ದುಡಿಯುತ್ತಿರುವ ಕಾರ್ಮಿಕರ ಮೇಲೆ ಅನೈತಿಕವಾದ ರೀತಿಯಲ್ಲಿ ಹತೋಟಿ ಇಟ್ಟುಕೊಂಡು ಶೋಷಣೆ ಮಾಡುತ್ತಿರುವ ಕಾರ್ಮಿಕ ಸಂಘಟನೆ ಬಗ್ಗೆ ಸರ್ಕಾರ ಗಮನ ಹರಿಸಬೇಕು, ಮತ್ತು ಎಚ್ಚರಿಕೆಯಿಂದಿರಬೇಕು. ಕಾರ್ಮಿಕರಿಗೆ ಎಲ್ಲ ಸೌಲಭ್ಯ ನೀಡಿ ಅವರಿಗೆ ನ್ಯಾಯ ಸಿಗುವಲ್ಲಿ ಸರ್ಕಾರ ಮುಂಚೂಣಿಯಲ್ಲಿದ್ದುಕೊಂಡು ಕೆಲಸಕಾರ್ಯ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಪಕ್ಷಾಂತರ ನಿಷೇಧದ ಬಗ್ಗೆ ಮಸೂದೆ ತರುವುದಾಗಿ ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ಈ ಬಗ್ಗೆ ನಮ್ಮ ಪಕ್ಷದ ನೀತಿಯನ್ನು ಈಗಾಗಲೇ ನಮ್ಮ ನಾಯಕರು ಸ್ಪಷ್ಟಪಡಿಸಿದ್ದಾರೆ. ಲೋಕಾಯುಕ್ತದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖವಿದೆ. ಲೋಕಾಯುಕ್ತ ವ್ಯಾಪ್ತಿಯಲ್ಲಿ ಈಗಿರುವಂಥ ಮುಖ್ಯಮಂತ್ರಿಗಳು, ಮಂತ್ರಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಬರುತ್ತಾರೆಂದು ಅದರಲ್ಲಿ ಹೇಳಲಾಗಿದೆ. ಆದರೆ ಹಿಂದಿನ ಸರ್ಕಾರದಲ್ಲಿದ್ದ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳನ್ನೂ ಈ ವ್ಯಾಪ್ತಿಯಲ್ಲಿ ತರುವುದಕ್ಕೆ ಗಮನ ಹರಿಸಬೇಕು. ಕಾರಣ ಇಷ್ಟು ಕೋಟಿ ಗಟ್ಟಲೆ ಹಣ ಮಾಡಿಕೊಂಡಿದ್ದಾರೆಂದು ಅಲ್ಲಲ್ಲಿ ಜನ ಮಾತನಾಡಿಕೊಳ್ಳುತ್ತಿದ್ದನ್ನು ಕೇಳಿದ್ದೇನೆ. ಯಾವ ಸಂದರ್ಭದಲ್ಲಿ ಎಲ್ಲಿಂದ ಬಡಜನತೆಯ ಹಣವನ್ನು ಯಾವ ರೀತಿ ದೋಚಿದ್ದಾರೆ, ಯಾವ ರೀತಿ ತಮ್ಮ ಬಗಲಿಗೆ ಹಾಕಿಕೊಂಡಿದ್ದಾರೆ ಎಂಬ ವಿಚಾರ ಜನತೆಗೆ ತಿಳಿಯುವ ಸಂದರ್ಭ ಆಗಬೇಕು. ಆದ್ದರಿಂದ ಲೋಕಾಯುಕ್ತದ ವ್ಯಾಪ್ತಿಯಲ್ಲಿ ಹಿಂದಿನ ಸರ್ಕಾರದ ಮಂತ್ರಿಗಳು ಮತ್ತು ಅವರ ಆಪ್ತೇಷ್ಟರು ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಬೆಲೆ ನಿಯಂತ್ರಣದ ಬಗ್ಗೆ ಉಲ್ಲೇಖ ಇದೆ. ಆದರೂ ಎರಡು ತಿಂಗಳ ಅವಧಿಯಲ್ಲಿ ಪರಿಣಾಮಕಾರಿಯಾದ ಕ್ರಮ ಕೈಗೊಂಡಂತೆ ಕಾಣಿಸುತ್ತಿಲ್ಲ. ಅಕ್ಕಿ ಹಾಗೂ ಇತರ ಆಹಾರ ಸಾಮಗ್ರಿಗಳ ನಿರಂತರ ಪೂರೈಕೆ ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ ವಿಶೇಷವಾಗಿ ಮಂಗಳೂರಿನಲ್ಲಿ ಆಹಾರ ಸಾಮಗ್ರಿ ವಿಷಯದಲ್ಲಿ ವಿಚಿತ್ರ ಪರಿಸ್ಥಿತಿ ಇದೆ ನಮ್ಮ ಜಿಲ್ಲೆಯಲ್ಲಿ ನಮಗೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ಬೆಳೆಯುವ ಸಾಧ್ಯತೆ ಇಲ್ಲ. ನಮ್ಮ ದೈನಂದಿನ ಬೇಡಿಕೆಗೆ ನೆರೆ ಜಿಲ್ಲೆಯಾದ ಶಿವಮೊಗ್ಗ, ಮಂಡ್ಯ ಇತರ ಜಿಲ್ಲೆಗಳನ್ನು ಅವಲಂಬಿಸಬೇಕಾಗಿದೆ. ಮಂಗಳೂರಿಗೆ ಸರಿಯಾಗಿ ಅಕ್ಕಿಯು ಪೂರೈಕೆ ಆಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ತುರ್ತು ಗಮನಹರಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಮಂಗಳೂರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳ ಚರಂಡಿ ವ್ಯವಸ್ಥೆ ಅಸಮರ್ಪಕವಾಗಿದೆ. ಸರ್ಕಾರ ಇದರ ಕಡೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ ಮಂಗಳೂರಿನಲ್ಲಿ ಮೀನಿನ ಮಾರುಕಟ್ಟೆಯ ರಚನೆಯಾಗಿ ಮೂರು ವರ್ಷಗಳಾದರೂ ಮೀನಿನ ಮಾರಾಟ ಮಾಡಲಿಕ್ಕೆ ಅಲ್ಲಿ ಬೇಕಾದ ವ್ಯವಸ್ಥೆ ಆಗಿಲ್ಲ. ರಾಜಕೀಯ ಒತ್ತಡದಿಂದಾಗಿ ಹಿಂದಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಂಥವರು ಮೀನಿನ ಮಾರುಕಟ್ಟೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡುವುದಕ್ಕೆ ತಡೆಯಾಜ್ಞೆ ನೀಡಿದರು. ಈ ರೀತಿ ರಾಜಕೀಯ ಒತ್ತಡಗಳಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. ಜನತೆಯ ಹಿತಾಸಕ್ತಿಗಳನ್ನು ಪರಿಗಣನೆ ಮಾಡಿ ಯೋಗ್ಯ ನಿರ್ಧಾರ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಭ್ರಷ್ಟಾಚಾರದ ನಿರ್ಮೂಲನದ ಬಗ್ಗೆ ಉಲ್ಲೇಖ ಇದೇ ಈ ದಿಸೆಯಲ್ಲಿ ಹೊಸ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ವಿರೋಧಪಕ್ಷದ ಹಲವಾರು ಸದಸ್ಯರು ಮೂದಲಿಕೆಯ ಮಾತುಗಳನ್ನು ಆಡಿದರು. ಈ ಭ್ರಷ್ಟಾಚಾರವನ್ನು ತಡೆಗಟ್ಟಿದರೆ ನಮ್ಮ ಜನತೆಯ ಸಂಕಷ್ಟಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಕಡಿಮೆಯಾಗಬಹುದು ಎಂದು ನನಗನ್ನಿಸುತ್ತದೆ. ಆದ್ದರಿಂದ ಭ್ರಷ್ಟ ಅಧಿಕಾರಿಗಳ ಮೇಲೆ ಸೂಕ್ತ ನಿಗಾ ಇಡಬೇಕು. ಇತ್ತೀಚೆಗೆ ಮಂಗಳೂರು ಜಿಲ್ಲೆಗೆ

ಒಬ್ಬ ಸಾರಿಗೆ ಅಧಿಕಾರಿಯನ್ನು ಅಲ್ಲಿನ ಜನರ ಮನಸ್ಸಿಗೆ ವಿರೋಧವಾಗಿ ಹೇರಲಾಗಿತ್ತು. ಅದರ ಬಗ್ಗೆ ಜನ ಪ್ರತಿಭಟನೆ ಮಾಡಬೇಕಾಯಿತು. ನಾನು ಏತಕ್ಕೆ ಈ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೆನೆಂದರೇ, ಇನ್ನು ಮುಂದಾದರೂ ಕೂಡ ಇಂಥ ಕೆಲಸಗಳನ್ನು ಮಾಡುವಾಗ ಸಂಬಂಧಪಟ್ಟ ಕ್ಷೇತ್ರದ ಶಾಸಕರೊಡನೆ ಸಮಾಲೋಚನೆ ಮಾಡಿದ ನಂತರ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ಅನೇಕ ಹಿರಿಯ-ಸದಸ್ಯರುಗಳಿದ್ದಾರೆ. ಆ ಕಡೆಯಲ್ಲಿ ಇರುವ ಸದಸ್ಯರುಗಳು ಮತ್ತು ಈ ಕಡೆ ಇರುವ ಸದಸ್ಯರುಗಳು ಕೆಲವು ಸ್ವಾರಸ್ಯಕರವಾದ ಮಾತುಗಳನ್ನು ಹೇಳಿದ್ದಾರೆ. ನಾವು ಇಲ್ಲಿ ಮಧ್ಯದಲ್ಲಿ ಕುಳಿತಿದ್ದೇವೆ. ಈ ಸಂದರ್ಭದಲ್ಲಿ ಒಂದು ಸಂತೋಷದ ವಿಷಯವನ್ನು ಹೇಳ ಬೇಕಾಗಿದೆ. ಮುಂದೆ ಬರುವ ದಿವಸಗಳಲ್ಲಿ ಆಡಳಿತದ ಕಡೆಗೆ ಭಾರತೀಯ ಜನತಾ ಪಾರ್ಟಿಯವರು ದೇಶದ ಎಲ್ಲೆಡೆಯಲ್ಲೂ ಬರುವವರಿದ್ದೇವೆ. ಆದ್ದರಿಂದ ಎರಡೂ ಕಡೆಯವರು ಆತಂಕಪಡಬೇಕಾಗಿಲ್ಲ. ಆ ಬಗ್ಗೆ ಇಡೀ ದೇಶದ ಜನತೆ ನಿರ್ಧಾರ ಮಾಡಿದ್ದಾರೆ ಎಂಬ ಮಾತನ್ನು ಬಹಳ ಸಂತೋಷದಿಂದ ಹೇಳುತ್ತಾ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಓದಿದ್ದೇನೆ. ಅಧಿಕಾರಿಗಳಿಂದ ಬರೆಸಿ ರಾಜ್ಯಪಾಲರ ಮೂಲಕ ಅದನ್ನು ಸರ್ಕಾರದವರು ಓದಿಸಿದ್ದಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳದೆ ವಿಧಿಯಿಲ್ಲ. ಪ್ರಥಮವಾಗಿ ವಾಸ್ತವಾಂಶಕ್ಕೆ ವಿರೋಧವಾದ ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ೧೬ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಮುಂದುವರೆದಿದೆ. ಆದರೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಹೇಳಿದ್ದಾರೆ. ಹತೋಟಿಯಲ್ಲಿದೆ ಎಂದು ಅವರ ಕಡೆಯಿಂದ ಸರ್ಕಾರದವರು ಹೇಳಿಸಿದ್ದಾರೆ. ಎಲ್ಲಿ ಹತೋಟಿಗೆ ತಂದಿದ್ದೀರಿ ? ಎಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೀರಿ ? ಜನರಿಗೆ ಎಲ್ಲಿ ಕೂಲಿ ಒದಗಿಸಿದ್ದೀರಿ ? ದನಕರುಗಳಿಗೆ ಎಲ್ಲಿ ಮೇವನ್ನು ಒದಗಿಸಿದ್ದೀರಿ? ಹೀಗಿದ್ದರೂ ವಾಸ್ತವಾಂಶಕ್ಕೆ ದೂರವಾದ ವಿಚಾರವನ್ನು ರಾಜ್ಯಪಾಲರಿಂದ ಹೇಳಿಸಿದ್ದೀರಿ. ಇದು ಸತ್ಯಕ್ಕೆ ದೂರವಾದ ವಿಚಾರ. ಆದ್ದರಿಂದಲೇ ನಾನು ಪ್ರಥಮದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈಗಲಾದರೂ ಕೂಡ ತಾವು ಏನು ರಾಜ್ಯಪಾಲರಿಂದ ಹೇಳಿಸಿದ್ದೀರಿ, ಅದಕ್ಕೆ ಬೆಲೆ ಕೊಟ್ಟು ಜನರಿಗೆ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿ. ಪ್ರತಿಯೊಂದು ತಾಲ್ಲೂಕಿಗೂ ರಿಗ್ ಕಳುಹಿಸಿ ಜನರಿಗೆ ನೀರು ಸಿಗುವಂಥ ವ್ಯವಸ್ಥೆ ಮಾಡಿ. ಜನತೆಯ ಹಿತವನ್ನು ಕಾಪಾಡತಕ್ಕ ಯೋಜನೆಗಳನ್ನು ಮಾಡಿ ಕ್ಷಾಮದ ದವಡೆಯಿಂದ ಜನರನ್ನು ತಪ್ಪಿಸುವ ಕೆಲಸವನ್ನು ಮಾಡಿದರೆ ರಾಜ್ಯಪಾಲರಿಂದ ಓದಿಸಿದಂಥ ಭಾಷಣಕ್ಕೆ ಪುರಸ್ಕಾರ ಕೊಟ್ಟಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬೆಲೆಗಳ ಹತೋಟಿಯನ್ನು ತರುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಇದು ಬಹಳ ಸತ್ಯಕ್ಕೆ ದೂರವಾದ ವಿಚಾರವೆಂದು ನಾನು ಹೇಳುತ್ತಿದ್ದೆನೆ. ಈ ಬಗ್ಗೆ ಒಂದು ಸಬ್ ಕಮಿಟಿ ಮಾಡಿದ್ದು ಅದರ ವರದಿ ಬಂದ ನಂತರ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆಂದು ಅನೇಕ ಸಾರಿ ಹೇಳಿದ್ದೀರಿ. ಈ ಬಗ್ಗೆ ಸದಸ್ಯರು ಯಾವ ಪಕ್ಷದವರೇ ಆಗಿರಲಿ, ತಮ್ಮ ಅಭಿಪ್ರಾಯಗಳನ್ನು ಬಿಚ್ಚು ಮನಸ್ಸಿನಿಂದ ಹೇಳಿದ್ದಾರೆ. ಇವತ್ತು ಅದು ಕಾರ್ಯರೂಪಕ್ಕೆ ಬಂದಿಲ್ಲ. ಇವತ್ತು ಬೆಲೆಗಳ ಇಳಿತ ಇರಲಿ, ಬೆಲೆಗಳು ಏರುಮುಖವಾಗಿವೆಯೇ ವಿನಹ ಇಳಿಮುಖ ಕಂಡಿಲ್ಲವೆಂದು ಹೇಳುತ್ತೇನೆ. ಅನೇಕ ಕಡೆಗಳಲ್ಲಿ ಸರಿಯಾದ ರೀತಿಯಲ್ಲಿ ದವಸಧಾನ್ಯಗಳ ವಿತರಣೆಯಾಗುತ್ತಿಲ್ಲ. ಪಂಚಾಯಿತಿ ಮಟ್ಟದಲ್ಲಿ ಹಳ್ಳಿಗಳ ಕಡೆ ನ್ಯಾಯ ಬೆಲೆ ಅಂಗಡಿಗಳನ್ನು ತೆರೆದು ಆಹಾರ ಪದಾರ್ಥಗಳನ್ನು ಒದಗಿಸಬೇಕಾಗಿದೆ. ಈ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಈ ದಿನ ಸೀಮೆಎಣ್ಣೆ ಬಹಳ ದುರ್ಲಭವಾಗಿದೆ. ಇದು ಜನರಿಗೆ ದೊರಕುವುದು ಕಷ್ಟವಾಗಿದೆ. ಇದೆಲ್ಲಾ ಪರಿಸ್ಥಿತಿಯನ್ನು ನೋಡಿದರೆ ತಾವು ಏನು ಬೆಲೆ ಹತೋಟಿಯನ್ನು ತಂದಿದ್ದೇವೆಂದು ಹೇಳುತ್ತಿದ್ದೀರಿ, ಅದು ಸತ್ಯಕ್ಕೆದೂರವಾದ ಮಾತು ಎಂದು ನಾನು ಹೇಳುತ್ತೇನೆ. ಈಗಲಾದರೂ ಕೂಡ ಬೆಲೆಗಳನ್ನು ಇಳಿಸುವ ಬಗ್ಗೆ ಮತ್ತು ಹತೋಟಿಗೆ ತರುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಅಂತ್ಯೋದಯ ಸ್ಕೀಮನ್ನು ನಮ್ಮ ಸರ್ಕಾರವೇ ಮಾಡಿದ್ದು ಎಂದು ಹೇಳುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ? ಈ ಬಗ್ಗೆ ನಮ್ಮ ಸರ್ಕಾರವೇ ಹಿಂದೆ ಪ್ರಯತ್ನ ಮಾಡಿತ್ತು. ಆದ್ದರಿಂದ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತನ್ನಿ ಎಂದು ಹೇಳುತ್ತೇನೆ.

ಹಾಗೂ 20 ಅಂಶಗಳ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ತಾವು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿಲ್ಲ. ೨೦ ಅಂಶಗಳ ಆರ್ಥಿಕ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಆ ಕಡೆ ಕುಳಿತಿರುವ ಸ್ನೇಹಿತರೂ ಕೂಡಾ ಬಹಳ ಶ್ರಮಪಟ್ಟಿದ್ದಾರೆ. ಈ ಕಾರ್ಯಕ್ರಮದಿಂದ ಕಡುಬಡವರಿಗೆ ಬಡತನ ರೇಖೆಯಿಂದ ಕೆಳಗೆ ಇರುವವರಿಗೆ ಎಷ್ಟು ಸಹಾಯ ಆಗಿದೆ ಎಂಬುದನ್ನು ಮರೆಯುವ ಹಾಗಿಲ್ಲ. ಈ ವಿಷಯ ರಾಜ್ಯಪಾಲರ ಭಾಷಣದಲ್ಲಿ ಏಕೆ ಉಲ್ಲೇಖವಾಗಿಲ್ಲವೆಂಬುದು ನನಗೆ ತಿಳಿಯಲಿಲ್ಲ. ನಮ್ಮ ಸಹಕಾರ ಮಂತ್ರಿಗಳು ಮೊನ್ನೆ ಒಂದು ಕಡೆ ಮಾತನಾಡುತ್ತಾ ಸಣ್ಣ ಮತ್ತು ಅತಿ ಸಣ್ಣ ರೈತರ ನಾಲ್ಕೂವರೆ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವುದಕ್ಕೆ ನಮಗೇನೂ ಕಷ್ಟವಿಲ್ಲವೆಂದು ಹೇಳಿದ್ದಾರೆ.

ಶ್ರೀ ಆರ್ ಎಲ್. ಜಾಲಪ್ಪ.—ನಾನು ಎಲ್ಲೂ ಆ ರೀತಿ ಹೇಳಿಲ್ಲ ಸ್ವಾಮಿ.

ಶ್ರೀ ಬಿ. ಬೈರಪ್ಪಾಜಿ.—ತಾವು ಹೇಗೆ ಹೇಳಿದಿರೆಂದು ಪತ್ರಿಕೆಗಳಲ್ಲಿ ಬಂದಿದೆ. ಈಗ ತಾವು ಹೀಗೆ ಹೇಳುವುದಾದರೆ ನಾನು ಆ ಪತ್ರಿಕೆಯನ್ನು ತಂದು ತೋರಿಸುತ್ತೇನೆ. ಈಗ ೧೮ ಜಿಲ್ಲೆಗಳು ಕ್ಷಾಮದ ದವಡೆಗೆ ತುತ್ತಾಗಿವೆ. ಇದನ್ನು ವಜಾಮಾಡಬೇಕೆ ಅಥವಾ ಬೇಡವೇ ಎನ್ನುವುದು ವಿಚಾರವಲ್ಲ. ಏನಾದರೂ ಒಂದು ರಿಯಾಯಿತಿ ತೋರಿಸಿ ಅವರ ಕಷ್ಟವನ್ನು ಪರಿಹರಿಸಬೇಕೆನ್ನುವ ಒಂದು ಕಾಳಜಿ ಸರ್ಕಾರಕ್ಕೆ ಇಲ್ಲವಲ್ಲಾ ಎಂದು ನನಗನ್ನಿಸುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಸದಸ್ಯರು ನಾಳೆ ಮಧ್ಯಾಹ್ನ ಮೂರೂವರೆ ಗಂಟೆಯ ವರೆವಿಗೂ ಕಾದು ನೋಡಬೇಕೆಂದು ಹೇಳುತ್ತೇನೆ. ನಾಳೆ ಆಯವ್ಯಯ ಮಂಡನೆ ಇದೆ.

ಶ್ರೀ ಬಿ. ಬೈರಪ್ಪಾಜಿ.—ಈಗ ಕ್ಷಾಮ ಬಂದಿದೆ. ಇದು ಬಹಳ ಪ್ರಾಮುಖ್ಯವಾದ ಸಮಸ್ಯೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ.—ನಿಮಗೂ ನಮಗೂ ವ್ಯತ್ಯಾಸ ಏನೆಂದರ, ನೀವು ಬರೆದೂ ಬರೆದೂ ಕೆಲಸ ಮಾಡಿಲ್ಲ. ನಾವು ಬರೆಯದೇ ಕೆಲಸ ಮಾಡುವುದನ್ನು ತಾವು ನೋಡಿ,

ಶ್ರೀ ಬಿ. ಬೈರಪ್ಪಾಜಿ.—ಇವನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ಒಳ್ಳೆಯ ಕೆಲಸಗಳನ್ನು ಮಾಡಿ ಜನರ ವಿಶ್ವಾಸವನ್ನು ಗಳಿಸಿ. ಆದರೆ ಈಗ ನೀವೂ ಕೂಡ ಭಾಷಣ ಮಾಡಿಕೊಂಡು ದಿನನಿತ್ಯ ಹೇಳಿಕೆ ಕೊಟ್ಟುಕೊಂಡೇ ಹೋಗುತ್ತಿದ್ದೀರಿ. ಅನೇಕ ವಿಚಾರಗಳು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಆಡಳಿತ ಪಕ್ಷದ ಸದಸ್ಯರೂ ಸಹ ಹೇಳಿದ್ದಾರೆ. ಇವನ್ನೆಲ್ಲಾ ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಿ ೫ ವರ್ಷ ರಾಜ್ಯಭಾರ ಮಾಡಿ. ಜನರಿಗೆ ಒಳ್ಳೆಯದನ್ನು ಮಾಡಿ. ರೈತರ ಬಗ್ಗೆ ನಮ್ಮ ಸರ್ಕಾರವೂ ಸಾಕಷ್ಟು ಕೆಲಸ ಮಾಡಿದೆ. ತಾವು ಮಾಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆ ಕಾಲದಲ್ಲೂ ರೈತಸಂಘದ ಪ್ರತಿನಿಧಿಗಳು ಸರ್ಕಾರದ ಹತ್ತಿರ ಬಂದು ಹಿಂದಿನ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಂದು ಮಾತನಾಡಿದ್ದಾರೆ. ಹಾಗೂ ರೈತರಿಗೆ ಆಗಿನ ಸರ್ಕಾರವು ಅಗತ್ಯವಾದ ರಿಯಾಯಿತಿಗಳನ್ನು ತೋರಿಸಿದೆ. ನಮ್ಮ ಸರ್ಕಾರದವರು ೧೦ ಎಕರೆಗೆ ಒಳಪಟ್ಟು ಇರುವ ಇರುವ ಖುಷ್ಕಿ ಜಮೀನಿಗೆ ಕಂದಾಯ ವಜಾ ಮಾಡಿದ್ದಾರೆ. ನೀರಿನ ಅಭಿವೃದ್ಧಿ ತೆರಿಗೆಯನ್ನು ಸುಮಾರು ೮೦ ಕೋಟಿ ರೂಪಾಯಿಗಳವರೆಗೆ ವಜಾ ಮಾಡಿರುವ ವಿಷಯ ನನಗೆ ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ.—ದಯಮಾಡಿ ಆ ಆಜ್ಞೆಯನ್ನು ತೋರಿಸುತ್ತೀರಾ ?

ಶ್ರೀ ಬಿ. ಭೈರಪ್ಪಾಜಿ.—ಅನೇಕ ರೈತರಿಗೆ ಕಿರುಕುಳವಾಗಿದ್ದಂತಹ ಕೃಷಿ ವರಮಾನ ತೆರಿಗೆಯನ್ನು ನಮ್ಮ ಸರ್ಕಾರ ವಜಾ ಮಾಡಿದ್ದು ತಮಗೆ ಗೊತ್ತಿಲ್ಲವೇ ? ಇಂತಹ ಹಲವಾರು ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಿಂದೆ ಮಾಡಿದೆ ಎಂಬುದನ್ನು ತಾವು ಮರೆಯಬಾರದು. ಕನ್ನಡದ ಬಗ್ಗೆ ಹೆಚ್ಚಿನ ಅಭಿಮಾನವನ್ನು ಹೊಂದಿದ್ದೀರೆಂದು ತಾವು ಹೇಳಿದ್ದೀರಿ. ಅದನ್ನು ನಾನು ಸ್ವಲ್ಪ ಮಟ್ಟಿಗೆ ಒಪ್ಪುತ್ತೇನೆ. ಅತಿ ಶೀಘ್ರವಾಗಿ ಎಲ್ಲಾ ಹಂತಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ತರುವುದಕ್ಕೆ ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಅಧಿಕಾರಿಗಳು ಬರೆದುಕೊಟ್ಟ ಭಾಷಣವನ್ನು ರಾಜ್ಯಪಾಲರಿಂದ ಓದಿಸಿದ್ದಕ್ಕಾಗಿ ನನ್ನ ವಿರೋಧವಿದೆಯೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ.ಪಿ. ಶಾಂತಮೂರ್ತಿ (ಹನೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ವರದಿ ಬಗ್ಗೆ ನಾನು ಕೂಡ ಓದಿದ್ದೇನೆ. ನಾನು ಈ ಬಗ್ಗೆ ಹೆಚ್ಚಿನ ವಿಶ್ಲೇಷಣೆ ಮಾಡಿದ್ದೇನೆ. ಈ ಬಗ್ಗೆ ಶಾಸನ ಸಭೆಯ ಅನೇಕ ಮಾನ್ಯ ಸದಸ್ಯರು ಮಾತನಾಡಿ ಅವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುವುದು ಇಷ್ಟೇ, ನಾನು ಈ ಸಭೆಗೆ ಹೊಸಬನಾದರೂ ಕೂಡಾ ರಾಜ್ಯಪಾಲರ ಹಿಂದಿನ ವರದಿಗಳನ್ನು ಓದುತ್ತಾ ಬಂದಿದ್ದೇನೆ. ಹಾಗೂ ಇದನ್ನೂ ಓದಿದ್ದೇನೆ. ಆದರೆ ಈ ವರದಿಯನ್ನು ವಿಶ್ಲೇಷಣೆ ಮಾಡಿದಾಗ ಇದು ಒಂದು ನೀರಸವಾದ ಭಾಷಣವೆಂದು ನಾನು ಅಭಿಪ್ರಾಯ ಪಡಬೇಕಾಗುತ್ತದೆ. ಅವರ, ಭಾಷಣ ಮಾಡುವಾಗ ಸರ್ಕಾರದ ನೀತಿ ಏನು ಇದೆಯೋ ಅದನ್ನು ಅವರು ನಿರೂಪಿಸಬೇಕಾಗಿತ್ತು.

ಆದರೆ ಈ ಸಲದ ರಾಜ್ಯಪಾಲರ ಭಾಷಣವನ್ನು ನೋಡಿದಾಗ ನನಗನ್ನಿಸಿದ್ದು ಏನೆಂದರೆ, ಈ ಸರ್ಕಾರ ನಿರ್ಧಿಷ್ಟವಾದ ಹಾಗೂ ಪ್ರಗತಿಪರವಾದ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ನಿರೂಪಿಸಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನೂತನ ಸರ್ಕಾರ ಒಳ್ಳೆಯ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತದೆನ್ನುವ ವಿಶ್ವಾಸ ನಮಗೆ ಇತ್ತು. ಈಗಿನ ಆಡಳಿತ ಪಕ್ಷದಲ್ಲಿ ಅನೇಕ ಮಂದಿ ಸಮಾಜವಾದಿಗಳು ಇದ್ದಾರೆ,

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವರು ತಮ್ಮ ಪ್ರಭಾವವನ್ನು ಬೀರಿ ರಾಜ್ಯಪಾಲರ ಭಾಷಣದಲ್ಲಿ ಪ್ರಗತಿಪರ ಧೋರಣೆಯಿಂದ ಕೂಡಿರತಕ್ಕಂಥ ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅಂಥ ಕಾರ್ಯಕ್ರಮಗಳನ್ನು ಏತಕ್ಕೆ ಹಾಕಿಕೊಳ್ಳಲಿಲ್ಲ ಎಂಬುದು ನಮಗೆ ಅರ್ಥವಾಗಲಿಲ್ಲ. ನಾನು ಆಡಳಿತವನ್ನು ಪಕ್ಷವನ್ನು ಟೀಕೆ ಮಾಡುತ್ತಿಲ್ಲ. ಆಡಳಿತ ಪಕ್ಷಕ್ಕೆ ಬೆಂಬಲ ಕೊಟ್ಟಿರತಕ್ಕಂಥ ಬಿ.ಜೆ.ಪಿ. ಸದಸ್ಯರನ್ನು ಇವತ್ತು ನಾನು ಕೇಳುತ್ತೇನೆ, ಏನೆಂದರೆ, ನಿಮ್ಮ ಬೆಂಬಲ ಇದ್ದರೂ ಏತಕ್ಕೆ ಜನಹಿತ ಕಾರ್ಯಕ್ರಮಗಳು ಸರ್ಕಾರದಿಂದ ಬರಲಿಲ್ಲವೆಂದು. ಜನತಾ ಸರ್ಕಾರ ಚುನಾವಣೆ ಪೂರ್ವದಲ್ಲಿ ಜನತೆಗೆ ಕೊಟ್ಟಂತ ಆಶ್ವಾಸನೆಗಳನ್ನು ಈಡೇರಿಸತಕ್ಕ ದಿಸೆಯಲ್ಲಿ ಕೆಲಸ ಮಾಡಬೇಕಾಗಿತ್ತು. ಜನತಾ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಕೆಲವು ಘೋಷಣೆಗಳನ್ನು ಮಾಡಿದರು. ಮುಖ್ಯವಾಗಿ ರಾಜ್ಯಕ್ಕೆ ಸಣ್ಣ ಮಂತ್ರಿಮಂಡಲ ಕೊಡುತ್ತೇವೆಂದು. ಅಂದರೆ ಇವತ್ತು ೨೪ ಜನರು ಇರತಕ್ಕ ಮಂತ್ರಿಮಂಡಲ ರಚನೆಯಾಗಿದೆ. ಇನ್ನೂ ೫-೬ ಜಿಲ್ಲೆಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಚಳುವಳಿಗಳು ನಡೆಯುವಂಥ ಯಾವುದೇ ಸಂದರ್ಭಗಳಲ್ಲಿ ಗೋಳಿಬಾರು ಮಾಡುವುದಿಲ್ಲವೆಂದು ಹೇಳಿದ್ದರು. ಆದರೆ ಬಳ್ಳಾರಿಯಲ್ಲಿ ಗೋಳಿಬಾರು ಮಾಡಿಸಿ ಮಾನ್ಯ ಮುಖ್ಯಮಂತ್ರಿಯವರು ಜನತೆಗೆ ಕೊಟ್ಟಂಥ ಆಶ್ವಾಸನೆಯನ್ನು ಮುರಿದಿದ್ದಾರೆಂದು ಹೇಳುತ್ತೇನೆ. ಜೊತೆಗೆ ಆಹಾರ ಪದಾರ್ಥಗಳ ಬೆಲೆಗಳನ್ನು ಇಳಿಸುತ್ತೇವೆಂದು ಹೇಳಿ ಅದನ್ನೂ ಕೂಡ ಮಾಡುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ.

ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದ ೧೬ ಜಿಲ್ಲೆಗಳಲ್ಲಿ ಭಯಂಕರವಾದ ಕ್ಷಾಮ ಪರಿಸ್ಥಿತಿ ಬಂದಿದೆ. ಇದನ್ನು ಹತೋಟಿಗೆ ತಂದಿದ್ದೇವೆಂದು ಹೇಳಿದ್ದಾರೆ. ಬೇರೆ ಜಿಲ್ಲೆಗಳ ಪರಿಸ್ಥಿತಿಯನ್ನು ನಾನು ನೋಡದೆ ಇದ್ದರೂ ಕೂಡ ಮೈಸೂರು ಜಿಲ್ಲೆಯ ೧೧ ತಾಲ್ಲೂಕುಗಳ ನೂರಕ್ಕೆ ೬೦ ಭಾಗದಲ್ಲಿ ಕ್ಷಾಮ ಪರಿಸ್ಥಿತಿ ಇದೆ. ಕ್ಷಾಮದ ದವಡೆಗೆ ಸಿಕ್ಕಿರತಕ್ಕ ಭಾಗಗಳಲ್ಲಿ ಕುಡಿಯುವ ನೀರು ಕೂಡ ಸಿಗುತ್ತಿಲ್ಲ, ನನ್ನ ಸ್ವಂತ ಕ್ಷೇತ್ರವಾದ ಹನೂರು ಕ್ಷೇತ್ರದ ಜನರು ಕುಡಿಯುವುದಕ್ಕೆ ನೀರು ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಬರಗಾಲದ ದವಡೆಗೆ ಸಿಕ್ಕಿರುವ ಜನತೆ ಗ್ರಾಮಗಳನ್ನು ಬಿಟ್ಟು ವಲಸೆ ಹೋಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ತಾವು ರಾಜ್ಯಪಾಲರ ಭಾಷಣದಲ್ಲಿ ಹತೋಟಿಗೆ ತಂದಿದ್ದೇವೆಂದು ಏನು ಹೇಳಿದ್ದೀರಿ ಅದು ಸತ್ಯಕ್ಕೆ ದೂರವಾದ ಮಾತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕ್ಷಾಮ ಪರಿಸ್ಥಿತಿ ಬಹಳ ದಿವಸಗಳು ಇರುವುದಿಲ್ಲ. ಮಳೆ ಬಿದ್ದಮೇಲೆ ಪರಿಸ್ಥಿತಿ ಸುಧಾರಿಸುತ್ತದೆ. ಕಳೆದ ಎರಡು ತಿಂಗಳಲ್ಲಿ ಕ್ಷಾಮ ಪರಿಹಾರಕ್ಕಾಗಿ ತಾವು ಖರ್ಚು ಮಾಡಿರುವುದು ಏನೇನು ಸಾಲದು, ಇವತ್ತು ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ಸಂಬಂಧಪಟ್ಟಂತೆ ಒಂದೊಂದು ತಾಲೂಕಿಗೆ ಇಂತಿಷ್ಟು ಬೋರ್‌ವೆಲ್‌ಗಳೆಂದು ಹಾಕಿಸಿದ್ದೀರಿ, ಈ ದಿಸೆಯಲ್ಲಿ ಅಧಿಕಾರಿಗಳು

ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿಲ್ಲವೆಂದು ಹೇಳುತ್ತೇನೆ. ಹನೂರು ಕ್ಷೇತ್ರಕ್ಕೆ ಸುಮಾರು ೮೫ ಬೋರ್‌ವೆಲ್‌ಗಳನ್ನು ಮಂಜೂರು ಮಾಡಿದ್ದೀರಿ, ಆದರೆ ಇದುವರೆಗೆ ಕೇವಲ ೧೨ ಬೋರ್‌ವೆಲ್‌ಗಳನ್ನು ಮಾತ್ರ ಹಾಕಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—೮೦ ಬಾವಿಗಳನ್ನು ಒಂದೇ ರಾತ್ರಿಗೆ ತೋಡುವುದಕ್ಕಾಗುತ್ತದೆಯೇ? ನಿಮ್ಮ ತಾಲ್ಲೂಕಿನಲ್ಲಿ ರಿಗ್‌ಗಳು ಈಗ ಕೆಲಸ ಮಾಡುತ್ತಿವೆ.

ಶ್ರೀ ಕೆ. ಪಿ. ಶಾಂತಮೂರ್ತಿ.— ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಿಲ್ಲ, ಚುನಾವಣೆಗಳನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೀರಿ. ಬಹಳ ಸಂತೋಷ. ಚುನಾವಣೆಗಳನ್ನು ನಡೆಸಿ, ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುತ್ತೇನೆ. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಿ ಸದಸ್ಯರಿಗೆ ಅಧಿಕಾರ ಕೊಟ್ಟರೆ ಸಾಲದು. ಮಾನ್ಯ ಸದಸ್ಯರಾದಂಥ ಮಹೇಶ್ವರಪ್ಪನವರು ಮಹಾತ್ಮ ಗಾಂಧೀಜಿಯವರ ಕನಸನ್ನು ನನಸು ಮಾಡುತ್ತೇವೆ, ಅವರ ತತ್ವಗಳನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಾರೆ, ಸಂತೋಷ. ನಾನು ಕೂಡ ಗಾಂಧೀ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವವನು, ಸಮಾಜವಾದ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ಆಡಳಿತಾಧಿಕಾರವನ್ನು ಕೊಡುವುದರ ಜೊತೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಅಧಿಕಾರವನ್ನು ಸಹ ಕೊಟ್ಟು ಅವು ಬಲಯುತವಾಗುವಂತೆ ಶಕ್ತಿಯನ್ನು ಕೊಡಬೇಕು. ರಾಜ್ಯ ಮಟ್ಟದಿಂದ ಹಳ್ಳಿ ಮಟ್ಟದವರೆಗೆ ಆರ್ಥಿಕ ವಿಕೇಂದ್ರೀಕರಣವನ್ನು ಮಾಡಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ರೇಷ್ಮೆ ಕೈಗಾರಿಕೆಯ ಬಗ್ಗೆ ಒಂದು ಮಾತನ್ನೂ ಕೂಡ ಹೇಳಿಲ್ಲ ಇವತ್ತು ಕರ್ನಾಟಕ ರಾಜ್ಯದಲ್ಲಿ ೧೦ ಲಕ್ಷ ಕುಟುಂಬಗಳು ರೇಷ್ಮೆ ಕೈಗಾರಿಕೆಯಿಂದ ಜೀವನ ಮಾಡುತ್ತಿವೆ. ಹತ್ತು ಲಕ್ಷ ಕುಟುಂಬಗಳು ಅಂದರೆ ಸುಮಾರು ಒಂದು ಕೋಟಿ ಜನಕ್ಕೆ ಈ ಕೈಗಾರಿಕೆಯಿಂದ ಉದ್ಯೋಗ ದೊರೆಯುತ್ತದೆ. ಈ ಸರ್ಕಾರ ರೇಷ್ಮೆ ಕೈಗಾರಿಕೆಯನ್ನು ತಿರಸ್ಕಾರ ಮಾಡಿದೆಯೆಂದು ಹೇಳುತ್ತೇನೆ. ರೇಷ್ಮೆ ಕೈಗಾರಿಕೆಗೆ ಪ್ರೋತ್ಸಾಹ ಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ನಮ್ಮ ರಾಜ್ಯದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಭೂ ಸುಧಾರಣಾ ಬಗ್ಗೆ ಹೈಕೋರ್ಟಿನಲ್ಲಿರತಕ್ಕ ಕೇಸುಗಳನ್ನು ತೀರ್ಮಾನ ಮಾಡಲಿಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ಆಡಳಿತ ಪಕ್ಷದ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ, ಏನೆಂದರೆ ಭೂ ಸುಧಾರಣೆ ಕಾರ್ಯಕ್ರಮಕ್ಕೆ ಮಹತ್ವಕೊಟ್ಟು ಯಾವರೀತಿ ಕಾರ್ಯಕ್ರಮ ಜಾರಿಗೆ ತರುತ್ತಿದ್ದೀರೋ ಅದೇರೀತಿ ಪಟ್ಟಣದಲ್ಲಿ ಅರ್ಬನ್ ಸೀಲಿಂಗ್ ಆಕ್ಟ್ ಜಾರಿಗೆ ತರಬೇಕೆಂದು ಹೇಳುತ್ತೇನೆ. ಈ ಹಿನ್ನೆಲೆಯಲ್ಲಿ ಸಮಾಜವಾದ ಮತ್ತು ಸಮತಾವಾದದ ಸಿದ್ಧಾಂತವನ್ನು ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಇತ್ತೀಚೆಗೆ ಬೆಳೆಯುತ್ತಿರುವ ಪಟ್ಟಣಗಳ ಪರಿಸ್ಥಿತಿಯನ್ನು ನೋಡಿದಾಗ ಅರ್ಬನ್ ಸೀಲಿಂಗ್ ಆಕ್ಟ್ ತರುವುದು ಸೂಕ್ತವೆಂದು ಹೇಳುತ್ತೇನೆ.

ಕೆಲವು ದಿವಸಗಳ ಹಿಂದೆ ನಮ್ಮ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ನಮ್ಮ ರಾಜ್ಯದ ಹಿತವನ್ನು ರಕ್ಷಣೆ ಮಾಡುತ್ತೇವೆ, ಕಡೆಗಣಿಸುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ವರಪ್ರಧಾನವಾಗಿರುವ ಕಾವೇರಿನದಿ ನೀರಿನಲ್ಲಿ ಒಂದು ತೊಟ್ಟು ನೀರನ್ನು ಬೇರೆ ರಾಜ್ಯದವರಿಗೆ ಬಿಟ್ಟುಕೊಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದರು. ಆದರೆ ಈಗಾಗಲೇ ಕಬಿನಿ ಯೋಜನೆಯಿಂದ ಮೂರು ಸಿಎಂಟಿಎಫ್‌ಆರ್‌ಐ ನೀರನ್ನು ಮದ್ರಾಸ್ ರಾಜ್ಯಕ್ಕೆ ಕೊಟ್ಟಿದ್ದಾರೆ. ಇದರಿಂದ ನಮ್ಮ ಪ್ರದೇಶದಲ್ಲಿರುವ ಬೆಳೆಗೆ ಹಾನಿಯಾಗಿದೆ. ಒಂದು ಕಡೆ ಕುಡಿಯುವ ನೀರಿಲ್ಲ ಮತ್ತೊಂದು ಕಡೆ ಬೆಳೆಗಳಿಗೆ ನೀರಿಲ್ಲದಿರುವಾಗ ಯಾವ ರೀತಿ ರಾಜ್ಯದ ಹಿತವನ್ನು ಕಾಪಾಡುತ್ತೀರೆಂದು, ನಮಗೆ ಗೊತ್ತಾಗುತ್ತಿಲ್ಲ. ಪ್ರಗತಿಪರವಾದ ಹಾಗೂ ಸಾಮಾಜಿಕ ತಳಹದಿಯ ಮೇಲೆ ಇಲ್ಲದೇ ಇರತಕ್ಕ ರಾಜ್ಯಪಾಲರ ಭಾಷಣಕ್ಕೆ ತಂದಿರುವ ವಂದನಾ ನಿರ್ಣಯವನ್ನು ವಿರೋಧಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪–೦೦ ಪಿ. ಎಂ.

ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೆ, ಪ್ರಪ್ರಥಮವಾಗಿ ನಾನು ಈ ಸದನಕ್ಕೆ ಆರಿಸಿ ಬಂದಿದ್ದೇನೆ. ಇವೊತ್ತು ನಾನು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಎನ್ನುವ ಬಗ್ಗೆ ಹಿಂದೆ ಬಹಳಷ್ಟು ಚರ್ಚೆಗಳಾಗಿವೆ ಕಳೆದ ೩೫ ವರ್ಷಗಳಿಂದ ನಮ್ಮ ರಾಜ್ಯವನ್ನು ಆಳಿಕೊಂಡು ಬಂದಿರತಕ್ಕ ಏಕೈಕ ಪಕ್ಷ, ಅಭಾವದ ಬಗ್ಗೆ ಪರಿಹಾರವನ್ನು ಮಾಡಿಕೊಂಡು ಬಂದಿದ್ದರೆ ಇವೊತ್ತು ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಆದರೆ ಅದನ್ನು ಅವರು ಮೊದಲಿನಿಂದಲೂ ಮರೆತುಕೊಂಡು ಬಂದಿದ್ದಾರೆ. ಈ ರೀತಿ ಇರುವಾಗ ನಾವು ಕೇವಲ ೬೦ ದಿವಸಗಳಲ್ಲಿ ಎಲ್ಲವನ್ನೂ ಸರಿಪಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಈಗತಾನೇ ನಾವು ಬಂದಿದ್ದೇವೆ. ನಮಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟರೆ. ನಾವು ಪ್ರತಿಯೊಂದು ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಬಹುದು. ಹಿಂದಿನ ಸರ್ಕಾರ ೧೭೮ ಸಮಸ್ಯೆಗಳ ಸರಮಾಲೆಯನ್ನು ಸೃಷ್ಟಿ ಮಾಡಿದ್ದು ಬಿಟ್ಟರೆ ಅದರ ಪರಿಹಾರಕ್ಕೆ ಯಾವುದೇ ಸಲಹೆಗಳನ್ನು ಕೊಟ್ಟಿಲ್ಲ. ವಿದ್ಯಾರ್ಥಿಗಳ, ಕಾರ್ಮಿಕರ, ರೈತರ ಹಿಂದುಳಿದವರ, ಹರಿಜನ ಗಿರಿಜನರ, ಸಣ್ಣ ಮತ್ತು ದೊಡ್ಡ ರೈತರುಗಳ ಸಮಸ್ಯೆಗಳನ್ನು ಸೃಷ್ಟಿ ಮಾಡಿದರೇ ವಿನಃ ಅದಕ್ಕೆ ಪರಿಹಾರ ಹೇಳಲಿಲ್ಲ. ಇವರು ಮೊದಲು ಹರಿಜನ ಗಿರಿಜನರ ಬಗ್ಗೆ ಸರಮಾಲೆ ಹಿಡಿದು ಜಪ ಮಾಡಿದ ಹಾಗೆ ರೇಡಿಯೋವಿನಲ್ಲಿ, ಪೇಪರ್‌ನಲ್ಲಿ, ವಾರ್ತೆಯಲ್ಲಿ ಹೇಳಿದ್ದು ಹೇಳಿದ್ದೆ; ಅದನ್ನು ಬಿಟ್ಟರೆ ಬೇರೆ ಶಬ್ದವೇ ಇಲ್ಲ. ಹರಿಜನ ಗಿರಿಜನರ ಸಮಸ್ಯೆ ಬಗೆ ಹರಿಸುತ್ತೇವೆಂದು ದಾಸರ ಪದ ಹಾಡಿಕೊಂಡು ಬಂದಹಾಗೆ ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲ ಒಂದು ಇದ್ದರೆ ಸಾಕೋ, ಎಂದು ಹೇಳಿಕೊಂಡು ಬಂದ ಹಾಗೆ ಅವರ ಹೆಸರುಗಳನ್ನು ಹೇಳಿಕೊಂಡು ರಾಜ್ಯದ ಉದ್ಧಾರ ಮಾಡುತ್ತೇವೆಂದು ಹೇಳಿಕೊಂಡು ಬಂದರೆ ಹೊರತು ಅವರಿಗೆ ಅನುಕೂಲ ಮಾಡಲಿಲ್ಲ. ಇವೊತ್ತು ಕೂಡ ಕೇವಲ ಕೆಲವೇ ಮಂದಿ ಮಾತ್ರ ಹರಿಜನ ಗಿರಿಜನರು ಪಡೆದುಕೊಳ್ಳತಕ್ಕ ಸೌಕರ್ಯಗಳನ್ನು ಪಡೆದುಕೊಳ್ಳುತ್ತಿರುವುದು ನೂರಕ್ಕೆ ತೊಂಭತ್ತು ಮಂದಿ ಗಿರಿಜನರು, ಕಾಡುಗಳಲ್ಲಿ ವಾಸ ಮಾಡುತ್ತಿದ್ದಾರೆ. ಓಟುಗಳನ್ನು ಪಡೆಯುವಂಥ ಸಂದರ್ಭದಲ್ಲಿ ಬೇಗ ಗುರುತಿಸಲಿಕ್ಕೋಸ್ಕರ ಅವರಿಗೋಸ್ಕರವೇ ಎ. ಕೆ. ಕಾಲೋನಿ ಎಂದು ಸೃಷ್ಟಿ ಮಾಡಿ ಅವರು ಪ್ರತ್ಯೇಕವಾಗಿ ಇರುವಂತೆ ಮಾಡಿದರೆ ಹೊರತು ಅವರ ಬಗ್ಗೆ ಒಳ್ಳೆಯ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದುವರೆಗೂ ನಾನು ಹೇಳಿರತಕ್ಕದ್ದನ್ನು ಹಿಂದಿನ ಸರ್ಕಾರ ಮಾಡುವಲ್ಲಿ ವಿಫಲವಾಗಿದೆ. ಈಗ ನಮ್ಮ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಮಾಡಬೇಕು. ಈ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಲಿ ಎಂದು ಜನರು ಸಾಕಷ್ಟು ಜನ ಯುವಕರನ್ನೇ ಆಯ್ಕೆಮಾಡಿ ಕಳುಹಿಸಿದ್ದಾರೆ. ೩೫ ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ಮಾಡದೇ ಇರುವ ಸಾಧನೆಯನ್ನು ನಮ್ಮ ಸರ್ಕಾರ ೩೫ ತಿಂಗಳುಗಳಲ್ಲಿ ಮಾಡಿ ತೋರಿಸುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ತಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇನ್ನು ದೇಶದ ಸಂಪತ್ತಿನ ಬಗ್ಗೆ ಹೇಳಬೇಕೆಂದರೆ, ಸಸಿ, ಶಿಶು, ಪಶು, ಜಲ, ನೆಲ ಈ ಸಂಪತ್ತುಗಳ ಬಗ್ಗೆ ಇದುವರೆಗೂ ಹಿಂದಿನ ಸರ್ಕಾರ ಮರೆತುಕೊಂಡು ಬಂದಿದ್ದಾರೆ. ಇವೊತ್ತು ಸಸಿಗಳು ರಾಷ್ಟ್ರದ ಸಂಪತ್ತು, ಅವುಗಳನ್ನು ಹೆಚ್ಚು ಬೆಳೆಸಬೇಕು. ಕಳೆದ ೩೫ ವರ್ಷದಲ್ಲಿ ಹಿಂದಿನ ಸರ್ಕಾರ ಏನು ಮಾಡಿದೆ. ಅದನ್ನು ಹೇಳಲಿ, ಈಗ ಅವರು ಭ್ರಷ್ಟಾಚಾರ. ಅನಾಚಾರ. ಅತ್ಯಾಚಾರ ಎಂದು ಹೇಳಲಿಕ್ಕೆ ಅವರಿಗೆ ನೈತಿಕ ಹಕ್ಕು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ತರೀಕೆರೆ ಚುನಾವಣೆಯ ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ಗೆದ್ದಿರತಕ್ಕ ಕ್ಷೇತ್ರ ಮೂಡಿಗೆರೆ ನನ್ನ ವಾಸ ತರೀಕೆರೆ. ತಾವು ತರೀಕೆರೆ ಚುನಾವಣೆಯಲ್ಲಿ ನಡೆಸಿರತಕ್ಕ ಭ್ರಷ್ಟಾಚಾರ, ಹಣದ ಹೊಳೆ ಹರಿಸಿರತಕ್ಕದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಶಿಕ್ಷಣದಲ್ಲಿ ಸಮಗ್ರ ಬದಲಾವಣೆ ಮಾಡುವ ವಿಚಾರ ಇದೆ. ನಿಜ ಅದನ್ನು ನಾವು ಮಾಡಬೇಕು. ಹಿಂದಿನಿಂದಲೂ ಹರಿಜನ ಗಿರಿಜನರನ್ನು ವಿದ್ಯಾವಂತರನ್ನಾಗಿ ಮಾಡಿದರೆ ನಮಗೆ ಓಟು ಕೊಡುವವರು ಯಾರು ಎಂದು ಯೋಚನೆ ಮಾಡಿ ಅವರನ್ನು ಹಾಗೆಯೇ ಇಟ್ಟುಕೊಂಡು ಬಂದರೆ ಹೊರತು ಅವರನ್ನು ಬುದ್ಧಿವಂತರನ್ನಾಗಿ ಮಾಡಲಿಕ್ಕೆ ಹೋಗಲಿಲ್ಲ. ಹಿಂದೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ತಂದು ಅದರ ಮೂಲಕ ನಿಮಗೆ

ಎಮ್ಮೆ ಕೊಡುತ್ತೇವೆ, ಹಸು ಕೊಡುತ್ತೇವೆಂದು ಹೇಳಿ ನೂರಕ್ಕೆ ಒಂದು ಕಡೆ ಸಹ ಕೊಟ್ಟಿಲ್ಲ. ಇವರು ಕೊಟ್ಟಿರುವುದು ಹೇಗೆ ಇದೆ ಎಂದರೆ, ೫ ಎಮ್ಮೆ ೫ ಹಸುಗಳನ್ನು ಹಂಚಿಕೆ ಮಾಡಲಿಕ್ಕೆ ೫ ಲಕ್ಷ ರೂಪಾಯಿ ಖರ್ಚು ಮಾಡಿಕೊಂಡು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿರುವುದನ್ನು ನಾವು ಕಂಡಿದ್ದೇವೆ.

(ಗೊಂದಲ)

ಇನ್ನು ಇವರು ಹಿಂದೆ ಕಟ್ಟಿಸಿಕೊಟ್ಟಿಂತಕ್ಕ ಜನತಾ ಮನೆಗಳ ಬಗ್ಗೆ ಹೇಳಬೇಕೆಂದರೆ ಅವು ಎರಡು ಮೂರು ವರ್ಷಗಳಲ್ಲಿ ಬಿದ್ದು ಹೋಗುವಂತಹ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಈಗ ನಮ್ಮ ಸರ್ಕಾರದವರು ಅಂತ್ಯೋದಯ ಕಾರ್ಯಕ್ರಮದಲ್ಲಿ ಉತ್ತಮವಾದ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ೩೫ ವರ್ಷಗಳಲ್ಲಿ ಸ್ವರಾಜ್ಯ ಬರುವುದಕ್ಕೆ ಮೊದಲಿನಿಂದಲೂ ಹರಿಜನ ಗಿರಿಜನರನ್ನು ಬುದ್ಧಿವಂತರನ್ನಾಗಿ ಮಾಡುತ್ತೇವೆಂದು ದಲಿತ ಸಂಘರ್ಷ ಸಮಿತಿ, ಅಂಬೇಡ್ಕರ್ ಸಂಘ ಎಂದು ಮಾಡಿದ್ದು, ಅವುಗಳನ್ನು ನಡೆಸುವವರಿಗೆ ಅನೇಕ ಕಿರುಕುಳವನ್ನು ಹಿಂದಿನ ಸರ್ಕಾರ ಕೊಟ್ಟಿದೆ. ಈಗ ಹೊಸ ರೂಪದಲ್ಲಿ ಹೊಸ ಸರ್ಕಾರ ಬಂದಿದೆ. ನಮ್ಮ ಸರ್ಕಾರ ಹೊಸ ಬೆಳಕನ್ನು ತರುವ ಸನ್ನಿವೇಶ ಉಂಟು ಮಾಡಿದ್ದಾರೆಂದು ತಿಳಿಸಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಿದೆ. ರಾಜ್ಯಪಾಲರ ಭಾಷಣದಲ್ಲಿ ನನಗೆ ಹೊಸದೇನು ಕಾಣಲಿಲ್ಲ. ಕಳೆದ ೨೦ ವರ್ಷಗಳಿಂದ ರಾಜ್ಯಪಾಲರ ಭಾಷಣ ಯಾವ ರೀತಿ ಇತ್ತೋ ಅದೇ ವೈಖರಿಯಲ್ಲಿ ಈ ಸಲವೂ ಇದೆ. ನಾವು ಎಲ್ಲಾ ರಾಜ್ಯಪಾಲರ ಭಾಷಣದಲ್ಲಿ ಕೇಳುತ್ತಿದ್ದುದು ಚುನಾವಣೆ ನಡೆದ ವಿಚಾರ, ಹರಿಜನ ಗಿರಿಜನರ ಅಭಿವೃದ್ಧಿಗೆ ಆಯೋಗ ರಚನೆ ಮಾಡತಕ್ಕದ್ದು, ಕನ್ನಡಕ್ಕೆ ಅಗ್ರಸ್ಥಾನ ಎನ್ನತಕ್ಕದ್ದನ್ನು ಮಾತ್ರ. ಇಲ್ಲಿ ಏನು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಎಂದರೆ ಆಲೋಚನಾ ಬ್ಯಾಂಕ್ ಎನ್ನತಕ್ಕದ್ದರ ಬಗ್ಗೆ ಹೇಳಿದ್ದಾರೆ.. ಅಂದರೆ ಚಿಂತನಾ ನಿಧಿ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ನಾವು ಇದನ್ನು ನೋಡುತ್ತಿದ್ದೇವೆ, ಬಹುಶಃ ಇಂತಹದನ್ನು ನಾವು ಯಾವ ವರ್ಷದಲ್ಲೂ ಕಂಡಿರಲಿಲ್ಲ. ಅದನ್ನು ಈ ವರ್ಷ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ತಮ್ಮ ನಾಯಕರು ರಾಜ್ಯಪಾಲರ ಭಾಷಣದಲ್ಲಿ ಹೊಸದೇನು ಇಲ್ಲ ಎಂದು ಹೇಳಿದರು. ಇದು ಹೊಸದು ಅಲ್ಲವೇನು ?

ಶ್ರೀ ಕೆ. ಎಸ್. ಕಾಳಮರಿಗೌಡ.—ತಾವು ಹೊಸದಾಗಿ ಹೇಳಿರುವುದನ್ನು ನಾವು ಯಾರೂ ನಿರಾಕರಿಸುವುದಿಲ್ಲ. ಆದರೆ ಈ ಚಿಂತನಾ ನಿಧಿಗೆ ಐ. ಎ. ಎಸ್. ಅಧಿಕಾರಿಗಳನ್ನು ಹಾಕಿ ರಚನೆ ಮಾಡಿರುವುದು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕೇವಲ ಐ, ಎ. ಎಸ್. ಅಧಿಕಾರಿಗಳೇ ಅಲ್ಲ. ಬೇರೆಯವರು ಅದರಲ್ಲಿ ಇದ್ದಾರೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಅಧ್ಯಕ್ಷರೆ, ಈ ಒಂದು ಚಿಂತನಾ ನಿಧಿಗೆ ಕರ್ನಾಟಕದ ೩ ಕೋಟಿ ಜನಸಂಖ್ಯೆಯಲ್ಲಿ ಶಾಸಕರ ಪೈಕಿ ಕೆಲವರನ್ನು, ಗ್ರಾಮಾಂತರ ಪ್ರದೇಶದಲ್ಲಿ ಅನುಭವ ಪಡೆದುಕೊಂಡಿರತಕ್ಕ ಕೆಲವರನ್ನು ಹಾಕಿದ್ದರೆ ನಾನು ಸಂತೋಷಪಡುತ್ತಿದ್ದೆ. ಈಗ ಇವರು ರೈತರ ಬಗ್ಗೆ ಚಿಂತನೆ ಇಲ್ಲದೇ ಇರುವಂತಹವರನ್ನು ಚಿಂತನಾ ನಿಧಿಯ ಮೇಲ್ವಿಚಾರಕರನ್ನಾಗಿ ಮಾಡಿದ್ದಾರೆ.

ಅವರು ಏನು ಇದನು ರಚನೆ ಮಾಡುತ್ತಾರೆ, ಅದರ ಆಧಾರದಮೇಲೆ ಅವರು ಏನು ಸಲಹೆ ಕೊಡುತ್ತಾರೆ ಅದರ ಪ್ರಕಾರ ನಡೆಯುವುದಕ್ಕೆ ಚಿಂತನಾ ನಿಧಿಯನ್ನು ರಚನೆ ಮಾಡಿದ್ದಾರೆ. ಆದರೆ ನಾನಾದರೂ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಗ್ರಾಮದ ಅಭಿವೃದ್ಧಿಯ ಬಗ್ಗೆ ಗ್ರಾಮದ ಮೇಲೆ ಅಭಿಮಾನವಿರುವವರನ್ನು ಅಥವಾ ಗ್ರಾಮದಿಂದ ಬಂದವರನ್ನು ಸೇರಿಸಿಕೊಂಡು ಚಿಂತನೆ ಮಾಡುವುದು ಒಳ್ಳೆಯದು,

ಇನ್ನು ಗ್ರಾಮಾಂತರದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಇವತ್ತು ಹಳ್ಳಿಗಾಡುಗಳಲ್ಲಿ ಬಹುಪಾಲು ನಿರುದ್ಯೋಗಿಗಳಿದ್ದಾರೆ. ಎಸ್.ಎಸ್.ಎಲ್.ಸಿ. ಬಿ. ಎ. ಬಿ.ಎಸ್ಸಿ. ಇನ್ನೂ ಮುಂತಾದುವನ್ನು ಓದಿರುವವರು ಶೇಕಡ ೮೦ರಷ್ಟು ಜನರು ಹಳ್ಳಿಗಳಲ್ಲಿದ್ದಾರೆ. ಅವರಿಗೆಲ್ಲಾ ತಾವು ಕೆಲಸವನ್ನು ಕೊಡಬೇಕು ಬಿ.ಎಸ್ಸಿ., (ಅಗ್ರಿ)ಗೆ ಅಥವಾ ಮೆಡಿಕಲ್ ಕಾಲೇಜಿನಲ್ಲಿ ಸೀಟುಗಳನ್ನು ರಿಸರ್ವ್ ಇಡುವಂತೆಯೇ ರೈತ ಕುಟುಂಬದಿಂದ ಬಂದವರಿಗೂ ಇಂತಿಷ್ಟು ಪರ್ಸೆಂಟ್ ಎಂದು ರಿಸರ್ವ್ ಮಾಡಬೇಕು......

ಒಬ್ಬರು ಮಾನ್ಯ ಸದಸ್ಯರು.— ಎಸ್. ಎಸ್. ಎಲ್. ಸಿ. ಬಿ. ಎ. ಬಿ.ಎಸ್ಸಿ. ಪರೀಕ್ಷೆಗಳು ಇನ್ನೂ ಆಗಿಯೇ ಇಲ್ಲ, ಪರೀಕ್ಷೆ ಮುಗಿದಮೇಲೆ ರಿಸಲ್ಟ್ ಬರಬೇಕಾಗಿದೆ. ಆದರೆ ತಾವು ಏತಕ್ಕೆ ಈಗಲೇ ಅದನ್ನು ಮಾತನಾಡುತ್ತಿದ್ದೀರಿ.

ಶ್ರೀ ಕೆ. ಎಸ್. ಕಾಳಮರಿಗೌಡ.—ಇದು ನನ್ನ ವೈಯಕ್ತಿಕ ಸಲಹೆ. ಇದಕ್ಕೆ ತಾವು ಸಹಕಾರ ಮಾಡಬೇಕು. ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ, ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಏನು ರಿಸರ್ವೇಷನ್ ಇಡುತ್ತೀರಿ, ಅದೇರೀತಿ ರೈತ ಕುಟುಂಬದಿಂದ ಬಂದವರಿಗೂ ರಿಸರ್ವೇಷನ್ ಇಡಬೇಕು.

ಇನ್ನು ಬರಗಾಲ ಪರಿಸ್ಥಿತಿ ಬಗ್ಗೆ ಒಂದು ಮಾತನ್ನು ಹೇಳಿದ್ದೀರಿ. ಇವತ್ತು ನಾವು ಹಳ್ಳಿಗಾಡಿನಲ್ಲಿ ಏನೊಂದು ಭೀಕರ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಜನಗಳಿಗೆ, ದನಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಮಾಡುವುದಕ್ಕೆ ಕೆಲಸ ಇಲ್ಲ. ಅಲ್ಲಿನ ನೀರಿನ ಸಮಸ್ಯೆಯನ್ನು ಅರಿತುಕೊಂಡು ತಾವು ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸುತ್ತಿದ್ದೀರಿ. ನಮ್ಮ ಹಿಂದಿನ ಸರ್ಕಾರ ಕೂಡ ಅದೇ ಕೆಲಸವನ್ನೇ ಮಾಡಿತ್ತು. ಆದರೆ ಅದು ಸಾಲದು ಎನ್ನುವಂತೆ ಹೇಳುತ್ತಿದ್ದರು. ಇವತ್ತು ಅಲ್ಲಿ ನೀರಿಗೆ ಬಹಳ ತೊಂದರೆ ಇರುವುದರಿಂದ ಅಲ್ಲಿ ಬೋರ್‌ವೆಲ್‌ಗಳನ್ನು ಹೆಚ್ಚಿಗೆ ಹಾಕುವುದಕ್ಕೆ ಆದ್ಯತೆ ಕೊಡಬೇಕು.

ಇನ್ನು ಸಹಕಾರ ಸಂಘಗಳಿಗೆ, ತಾಲ್ಲೂಕು ಬೋರ್ಡ್‌ಗಳಿಗೆ, ಪಂಚಾಯತಿಗಳಿಗೆ ಹಾಗೂ ಎಲ್ಲ ಮಟ್ಟದಲ್ಲೂ ಚುನಾವಣೆಗಳನ್ನು ಮಾಡುತ್ತೇವೆಂದು ತಾವು ಹೇಳಿದ್ದೀರಿ. ಅದರಲ್ಲೂ ಜೂನ್ ತಿಂಗಳಲ್ಲೇ ಈ ಸಹಕಾರ ಸಂಘಗಳಿಗೆ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಪತ್ರಿಕೆಗಳಲ್ಲಿ ವರದಿ ಬರುವುದನ್ನು ನೋಡಿದರೆ ಈ ಚುನಾವಣೆ ಸೆಪ್ಟೆಂಬರ್ ತಿಂಗಳಿಗೆ ಹೋಗುವಂತೆ ಕಾಣುತ್ತದೆ. ಈ ಚುನಾವಣೆ ಏನಿದೆ ಇದು ನೇರವಾಗಿರಬೇಕು ಮತ್ತು ಇದರಿಂದ ಅಧಿಕಾರ ವಿಕೇಂದ್ರಿಕರಣ ಆಗುವಂತಿರಬೇಕು. ಜಿಲ್ಲಾ ಬೋರ್ಡ್, ತಾಲ್ಲೂಕು ಬೋರ್ಡ್ ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸಿ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಇದುವರೆಗೂ ಇಲ್ಲೆಲ್ಲಾ ಐ.ಎ.ಎಸ್. ಅಧಿಕಾರಿಗಳಲ್ಲಿ ಈ ಅಧಿಕಾರ ಕೇಂದ್ರೀಕೃತವಾಗಿತ್ತು. ಆದಷ್ಟು ಬೇಗ ಇವುಗಳಿಗೆ ಚುನಾವಣೆಯನ್ನು ಮಾಡಿ ಅಲ್ಲಿನ ಅಧ್ಯಕ್ಷರುಗಳಿಗೆ ಛೇರ್ಮನ್‌ಗಳಿಗೆ ಅಧಿಕಾರವನ್ನು ಕೊಡಬೇಕು. ಪ್ರತಿಯೊಂದು ಕೆಲಸಕ್ಕೂ ಅವರು ಈ ಬೆಂಗಳೂರಿಗೆ ಬರುವುದನ್ನು ತಪ್ಪಿಸಿ ಅಲ್ಲೇ ಅವರು ಕೆಲಸ ಮಾಡಿಕೊಳ್ಳುವಂತೆ ಅಧಿಕಾರವನ್ನು ಕೊಡಬೇಕು.

ನಿಮ್ಮ ಸರ್ಕಾರ ರಚನೆಯಾಗಿ ಎರಡು ತಿಂಗಳಾಗಿದೆ. ಆದರೆ ನಿಮ್ಮ ಹೊಸ ಧೋರಣೆಗಳು ಏನು, ಘೋಷಣೆಗಳು ಏನು, ಸಂಧಾರಣೆಗಳು ಏನು ಎಂಬುದನ್ನು ನಾವು ಕೇಳಿಲ್ಲ. ಕೇಳಿರತಕ್ಕ ಕೆಲವು ಘೋಷಣೆಗಳೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಆಂಧ್ರ ಪ್ರದೇಶದಲ್ಲಿ ನಮ್ಮ ಜೊತೆಯಲ್ಲೇ ಚುನಾವಣೆಯಾಯಿತು ಅಲ್ಲಿ ಎನ್. ಟಿ. ರಾಮರಾವ್‌ರವರು ಮುಖ್ಯಮಂತ್ರಿಯಾದರು. ಕೇವಲ ಎರಡು ತಿಂಗಳಲ್ಲಿ ಅವರು ಅನೇಕ ಘೋಷಣೆಗಳನ್ನು ಮಾಡಿದರು ಮತ್ತು ಕಾರ್ಯಗತ ಮಾಡಿದ್ದಾರೆ. ಉದಾಹರಣೆ ಹೇಳುವುದಾದರೆ ನಿವೃತ್ತಿ ವಯಸ್ಸು ೫೮ ವರ್ಷ ಇದ್ದುದನ್ನು ೫೫ ವರ್ಷಕ್ಕೆ ಇಳಿಸಿದರು. ಒಂದು ಕೆ. ಜಿ. ಅಕ್ಕಿಗೆ ಎರಡು ರೂ. ಎಂದು ಮಾಡಿದರು. ಆದರೆ ನೀವು ಏನು ಘೋಷಣೆಗಳನ್ನು ಮಾಡಿದ್ದೀರಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಇನ್ನೂ ನಿಮಗೆ ಸಾಧ್ಯವಾಗಿಲ್ಲ, ಅದನ್ನು ಮಾಡುವುದಕ್ಕೆ ನಿಮಗೆ ಧೈರ್ಯ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಶ್ರೀ ಎನ್.ಟಿ. ರಾಮರಾವ್‌ರಂತೆ ನೀವೂ ಮಾಡಬಹುದು. ಆದರೆ ನಿಮ್ಮಲ್ಲಿ ಅಂಜುಬುರುಕುತನ ಇದೆ. ಆದ್ದರಿಂದ ನಿಮಗೆ ಮಾಡುವುದಕ್ಕೆ

ಆಗುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ಅನೇಕ ಘೋಷಣೆಗಳನ್ನು ಮಾಡಿದಿರಿ. ರೈತರಿಗೆ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದಿರಿ, ಆದರೆ ಅದನ್ನು ಮಾಡಲಿಲ್ಲ. ಶ್ರೀ ಬಂಗಾರಪ್ಪನವರ ಕಮಿಟಿಯ ವರದಿಯನ್ನು ಮತ್ತು ಶ್ರೀಬೊಮ್ಮಾಯಿನವರ ಕಮಿಟಿಯ ವರದಿಗಳನ್ನೂ ನೀವು ಕಾರ್ಯಗತ ಮಾಡಲಿಲ್ಲ. ಅವರು ಏನು ವರದಿಯನ್ನು ಕೊಟ್ಟಿದ್ದಾರೆ ಎಂಬುದನ್ನು ಸಭೆಯಲ್ಲಿ ಓದಿದರೆ ಸಾಕು ಈಗ ಕಮ್ಯುನಿಸ್ಟ್‌ನವರು, ಬಿ. ಜೆ. ಪಿ.ಯವರು, ಸಿ. ಪಿ. ಐ.ನವರೂ, ಸಿ. ಪಿ. ಎಂ.ನವರೂ ನಿಮಗೆ ಕಂಡೀಷನಲ್ ಸಪೋರ್ಟ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಕೆ . ಎನ್. ಕಾಳಮರಿಗೌಡ.—ಮೇಲ್ಮನೆಯಲ್ಲಿ ಮಾನ್ಯ ಸುಬ್ಬಯ್ಯನವರು ಈ ಮಾತನ್ನು ಹೇಳಿದ್ದಾರೆ. ಆದರೆ ಇಲ್ಲಿ ಮಾನ್ಯ ಆಚಾರ್‌ರವರು ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ.

ಶ್ರೀ ವಿ. ಎಸ್. ಆಚಾರ್.—ನನ್ನ ಪರವಾಗಿ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಬರುವುದಿಲ್ಲ. ನಾವು ಅನ್‌ಕಂಡೀಷನಲ್ ಸಪೋರ್ಟ್ ಕೊಟ್ಟಿದ್ದೇವೆ.

ಶ್ರೀ ಕೆ. ಎನ್. ಕಾಳಮರಿಗೌಡ.—ಮೇಲ್ಮನೆಯಲ್ಲಿ ಮಾನ್ಯ ಸುಬ್ಬಯ್ಯನವರು ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಯಾವ ಘಳಿಗೆಯಲ್ಲಿ ಈ ಸರ್ಕಾರ ಬಿದ್ದು ಹೋಗುತ್ತದೋ ಎಂದು ಜನರು ರಾಜ್ಯದ ಮೂಲೆ ಮೂಲೆಯಲ್ಲೂ ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಪಿ. ಶಾಂತಮೂರ್ತಿ.—ಸರ್ಕಾರವನ್ನು ಬೀಳಿಸುವುದಕ್ಕೆ ಹೋಗುವುದಿಲ್ಲ. ಆದರೆ ಜನರ ಅಭಿಪ್ರಾಯವನ್ನು ಕೆಡಿಸುವುದಕ್ಕೆ ನಾವು ಹೋಗುವುದಿಲ್ಲ.

ಶ್ರೀ ಕೆ. ಎನ್. ಕಾಳಮರಿಗೌಡ.—ಹಳ್ಳಿಗಳಿಗೆ ಹೋದರೆ ಗೊತ್ತಾಗುತ್ತದೆ. ಬಂಗಾರಪ್ಪನವರು ತಮ್ಮ ರಿಪೋರ್ಟ್‌ನಲ್ಲಿ ತಂಬಾಕಿಗೆ ೧೮ ರೂ. ಭತ್ತಕ್ಕೆ ೩೦೦ರೂ. ರಾಗಿಗೆ ೨೦೦ ಎಂದು ಶಿಫಾರಸು ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರ ಸಮಿತಿಯ ವರದಿಯನ್ನು ಹಿಂದಿನ ಸಭೆಯಲ್ಲಿ ಮಂಡಿಸಿತ್ತು. ಅದನ್ನು ಈಗ ತಾವು ಇಂಪ್ಲಿಮೆಂಟ್ ಮಾಡಿ. ಅದನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ನಿಮಗಿರತಕ್ಕ ತೊಂದರೆಯಾದರೂ ಏನು ?

(ಗೊಂದಲ)

ಶ್ರೀ ಹೆಚ್. ಡಿ. ಚೌಡಯ್ಯ.—ಬಂಗಾರಪ್ಪನವರ ಕಮಿಟಿಯ ರಿಪೋರ್ಟ್ ಮತ್ತು ಬೊಮ್ಮಾಯಿಯವರ ಕಮಿಟಿ ರಿಪೋರ್ಟ್‌ನ್ನು................

ಶ್ರೀ ಕೆ. ಪಿ. ಶಾಂತಮೂರ್ತಿ.—ಬಂಗಾರಪ್ಪನವರ ಕಮಿಟಿ ರಿಪೋರ್ಟ್‌ನ್ನು ಜಾರಿಗೆ ತರುವುದಕ್ಕೆ ನಿಮಗೆ ಆಗದಿದ್ದರೆ ಬಂಗಾರಪ್ಪನವರಿಗೇ ಆಡಳಿತವನ್ನು ವಹಿಸಿಕೊಡಿ. ಅವರೇ ಅಧಿಕಾರವನ್ನು ನಡೆಸುತ್ತಾರೆ ಮತ್ತು ಆ ಕಮಿಟಿಯ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುತ್ತಾರೆ.

ಶ್ರೀ ಕೆ. ಎನ್. ಕಾಳಮರಿಗೌಡ. – ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಅಲ್ಲಿ ಒಂದು ಅಣೆಕಟ್ಟೆಯನ್ನು ಕಟ್ಟುತ್ತಿದ್ದಾರೆ. ಇದನ್ನು ಆದಷ್ಟು ಶೀಘ್ರಗತಿಯಲ್ಲಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ ಇದರ ಜೊತೆಗೆ ಈ ಭಾಗದಲ್ಲಿಯೇ ಒಂದು ಲಿಫ್ಟ್ ಇರಿಗೇಷನ್ ಮಾಡಿದರೆ ಸುಮಾರು ಸಾವಿರಾರು ಎಕರೆಗಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಹಿಂದೆಯೇ ಪ್ಲಾನ್‌ಕೂಡ ಮಾಡಿರುವುದು ಇರುತ್ತದೆ. ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಕಟ್ಟೆಪುರ ಅಣೆಕಟ್ಟು ಇದೆ. ಇದರಿಂದ ಸಾವಿರಾರು ಎಕರೆ ಜಮೀನು ಸಾಗುವಳಿಯಾಗುತ್ತದೆ. ಅಲ್ಲೂ ಒಂದು ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಹೇಳುತ್ತೇನೆ. ಅಣೆಕಟ್ಟು ಇರುವ ಕಡೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ. ನೀರು ಸರಿಯಾದ ರೀತಿಯಲ್ಲಿ ಸರಬರಾಜು ಆದರೆ ಸಾವಿರಾರು ಎಕರೆ ಜಮೀನು ಸಾಗುವಳಿಯಾಗುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಚರ್ಚೆ ಪೂರ್ಣಗೊಂಡಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಅನಂತರ ಉಳಿದಂಥ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ ಮೂರೇಮೂರು ಪಾಯಿಂಟ್ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ದಯವಿಟ್ಟು ನನಗೆ ಮಾತನಾಡಲು ಅವಕಾಶಕೊಡಿ. ಹಿಂದೆ ಕುಳಿತಿರತಕ್ಕಂಥ ಸದಸ್ಯರಿಗೆ ಅವಕಾಶವೇ ಸಿಕ್ಕಿಲ್ಲ. ಹಿಂದೆ ಕುಳಿತಿರತಕ್ಕಂಥ ನಾವು ಹೊಸಬರಾದ ಕಾರಣ ನಮಗೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಆಗಬೇಕಾಗಿರುತ್ತದೆ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಿರತಕ್ಕಂಥ ಪಟ್ಟಿಯ ಪ್ರಕಾರವೇ ಎಲ್ಲ ಸದಸ್ಯರಿಗೂ ಕೂಡ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

† ಶ್ರೀ ರಾಮಕೃಷ್ಣಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಕಳೆದ ಐದು ದಿವಸಗಳಿಂದ ಸುಮಾರು ೧೪ ಗಂಟೆಗಳ ಕಾಲ ಮೂವತ್ತೊಂದು ಜನ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ಸೂಚನೆಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಕೆಲವು ರಚನಾತ್ಮಕ ಸೂಚನೆಗಳನ್ನು ಸೇರಿಸಿಕೊಟ್ಟಿದ್ದಾರೆ, ಅದಕ್ಕಾಗಿ ನಾನು ಮಾನ್ಯ ಸದಸ್ಯರುಗಳಿಗೆ ಕೃತಜ್ಞನಾಗಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗತಕ್ಕಂಥದ್ದು ಸರ್ಕಾರದ ನೀತಿಯಮೇಲೆ ಇದು ಪರಂಪರಾನುಗತವಾಗಿ ಬಂದಿರತಕ್ಕಂಥ ಪದ್ಧತಿ. ಕಳೆದ ಕೆಲವು ವರ್ಷಗಳಲ್ಲಿ ಚರ್ಚೆ ಯಾವರೀತಿ ನಡೆಯಿತು ಎಂಬುದರ ಬಗ್ಗೆ ಹೇಳಲು ನಾನು ಇಲ್ಲಿ ಇರಲಿಲ್ಲ. ಆ ಸಮಯದಲ್ಲಿ ನಾನು ಹಾಜರಿರಲಿಲ್ಲ. ಆದರೆ ಈ ಹಿಂದೆ ನಡೆದಂಥ ಚರ್ಚೆಯಲ್ಲಿ ಅನೇಕ ವಿಚಾರಗಳು ಅಂದರೆ, ನೀತಿಗೆ ಸಂಬಂಧಪಡದಂಥ ವಿಚಾರಗಳು, ಆಡಳಿತಕ್ಕೂ ಸಂಬಂಧಪಡದಂತ ವಿಚಾರಗಳು ಬಂದಿದೆ. ಇದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಚರ್ಚೆಯಲ್ಲಿ ಅದರಲ್ಲೂ ಇಂಥ ಸಂದರ್ಭದ ಚರ್ಚೆಯಲ್ಲಿ ನನ್ನ ನಮ್ರತೆ ಏನೆಂದರೆ, ಸರ್ಕಾರದ ನೀತಿ ಏನು ಎಂಬುದು ಮುಖ್ಯವಾಗಿ ಇರಬೇಕು. ಮತ್ತು ರಾಜ್ಯಪಾಲರ ಭಾಷಣವು ಕೂಡ ವರ್ಷಕ್ಕೆ ಒಂದು ಸಲ ಆಗತಕ್ಕಂಥದ್ದು ಮಾತ್ರ. ಈ ರಾಜ್ಯಪಾಲರ ಭಾಷಣ ಕೂಡ ಸರ್ಕಾರದ ನೀತಿಯನ್ನು ತೋರಿಸತಕ್ಕಂಥ ಭಾಷಣವಾಗಿ ಇರಬೇಕು. ನನ್ನ ಅಭಿಪ್ರಾಯದಲ್ಲಿ ಈ ಸಲದ ರಾಜ್ಯಪಾಲರ ಭಾಷಣ ಕೇವಲ ನೀತಿಗೆ ಸಂಬಂಧಪಟ್ಟಂತೆ ಇದೆ. ಬೇರೆ ವಿಚಾರ ಬರಲಿಲ್ಲ. ನಾನು ಕಳೆದ ಮೂರು ವರ್ಷಗಳ ರಾಜ್ಯಪಾಲರ ಭಾಷಣವನ್ನು ನೋಡಿದೆ. ಇದರಲ್ಲಿ ಒಂದೆರಡು ಉದಾಹರಣೆಯನ್ನು ನಾನು ಸ್ಪಷ್ಟೀಕರಿಸುವುದಕ್ಕೋಸ್ಕರವಾಗಿ ಕೊಡಲಿಕ್ಕೆ ಬಯಸುತ್ತೇನೆ. ಈ ಸಲದ ರಾಜ್ಯಪಾಲರ ಭಾಷಣದಲ್ಲಿ ರಾಜಕೀಯದ ಒಂದು ಶಬ್ದವೂ ಕೂಡ ಇಲ್ಲ ರಾಜಕೀಯ ಪಕ್ಷದ ಉಲ್ಲೇಖ ಕೂಡ ಇಲ್ಲ. ನಾವು ಬಯಸಿದ್ದರೆ ನಮ್ಮ ಘನತೆಗೆ ಸ್ವಲ್ಪ ಕುಂದು ತಂದುಕೊಂಡು ರಾಜಕೀಯವನ್ನು ಇದರಲ್ಲಿ ಸೇರಿಸಬಹುದಾಗಿತ್ತು. ಆದರೆ ರಾಜ್ಯಪಾಲರು ಸರ್ಕಾರ ನಡೆಸಲಿಕ್ಕೆ ಇದ್ದಾರೆಯೋ ಹೊರತು ರಾಜಕೀಯ ಮಾಡಲಿಕ್ಕೆ ಅಲ್ಲ. ಅವರು ಈ ಒಂದು ಮಟ್ಟಕ್ಕಿಂತ ಮೇಲೆ ಇರಬೇಕು. ಅವರ ಘನತೆ ಗೌರವ ಇಡೀ ರಾಜ್ಯದ ಘನತೆ ಗೌರವವಾಗಿರುತ್ತದೆ. ಅದಕ್ಕಾಗಿ ಇದರಲ್ಲಿ ನಾವು ರಾಜಕೀಯ ತರಲಿಲ್ಲ. ಇದರಲ್ಲಿ ಯಾವುದೇ ಕಾಂಟ್ರವರ್ಷಿಯಲ್ ಆಗಿರತಕ್ಕಂಥ, ಮತ ಭೇದ ಇರತಕ್ಕಂಥ ವಿಚಾರಗಳನ್ನೂ ಕೂಡ ನಾವು ತರಲಿಲ್ಲ. ಉದಾಹರಣೆಗೆ ನಾನು ಹೇಳುವುದಾದರೆ, ಈ ಸಲ ರಾಜ್ಯಪಾಲರು ಏನು ಭಾಷಣವನ್ನು ಮಾಡಿದ್ದಾರೆಂದರೆ ಚುನಾವಣೆಗಳು ನಡೆದ ನಂತರ ರಾಜ್ಯಪಾಲರ ಭಾಷಣದಲ್ಲಿ ಏನು ಉಲ್ಲೇಖನ ಇದೆ ಅದನ್ನು ನೋಡಬಹುದು.

"It is a happy augury that the elections were conducted in a fair and peaceful manner"

ಮುಗಿಯಿತು. ಅದೇ ೧೯೮೦ನೇ ಇಸವಿಯಲ್ಲಿ, ಈವತ್ತು ವಿರೋಧಪಕ್ಷದ ನಾಯಕರಾಗಿ ನನ್ನ ಎದುರಿಗೆ ಕುಳಿತಿರತಕ್ಕಂಥ ಮಾನ್ಯ ವೀರಪ್ಪಮೊಯಿಲಿಯವರು ಅಂದು ಅರ್ಥ ಮಂತ್ರಿಗಳಾಗಿದ್ದರು. ಆದಕ್ಕಾಗಿ ಇದು ಅವರ ಸರ್ಕಾರ ತಯಾರು ಮಾಡಿದಂಥ ಭಾಷಣವೆಂದು ಹೇಳಿದರೆ ತಪ್ಪಾಗಲಾರದು. ಈ ಭಾಷಣ ಶುರುಮಾಡುವಾಗ.—

"ದೇಶವನ್ನು ಚಕಿತಗೊಳಿಸುವ ಬದಲಾವಣೆಗಳು ಸಂಭವಿಸಿದ ತರುವಾಯ ನಾವು ಇಲ್ಲಿ ಸಭೆ ಸೇರಿದ್ದೇವೆ. ಜನತೆ ಮತದಾನದ ಮೂಲಕ ಎರಡನೆಯ ಬಾರಿ ಶಾಂತರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಬದಲಾಯಿಸಿರುವುದು ರಾಷ್ಟ್ರದಲ್ಲಿ ಪ್ರಜಾತಂತ್ರವು ಬೇರೂರಿರುವುದಕ್ಕೆ ನಿದರ್ಶನ. ಸುಮಾರು ೩೩ ತಿಂಗಳುಗಳಷ್ಟು ಕಾಲ ಅಧಿಕಾರದಿಂದ ಹೊರಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಈಗ ಪ್ರಚಂಡ ಬಹುಮತದಿಂದ ಕೇಂದ್ರದಲ್ಲಿ ಪುನಃ ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದಿದ್ದಾರೆ, ಲೋಕಸಭಾ ಚುನಾವಣೆಗಳ ಫಲಿತಾಂಶದಿಂದಾಗಿ ನಮ್ಮ ರಾಜ್ಯದ ಸರ್ಕಾರದಲ್ಲಿಯೂ ಬದಲಾವಣೆಯುಂಟಾಗಿ ಈಗ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದೆ."

ಎಂದು ಹೇಳಿದ್ದಾರೆ.

೪–೩೦ ಪಿ. ಎಂ.

ಇದನ್ನು ನಾನು ಮತ್ತೊಂದು ಸಲ ಓದುತ್ತೇನೆ.—

"...ಲೋಕಸಭಾ ಚುನಾವಣೆಗಳ ಫಲಿತಾಂಶದಿಂದಾಗಿ ನಮ್ಮ ರಾಜ್ಯದ ಸರ್ಕಾರದಲ್ಲಿಯೂ ಬದಲಾವಣೆಯುಂಟಾಗಿ ಈಗ ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿದೆ."

ನಾನು ತಮ್ಮ ಮುಖಾಂತರವಾಗಿ ಮಾನ್ಯ ಸದಸ್ಯರಿಗೆ ಅದರಲ್ಲಿಯೂ ಎದುರುಗಡೆ ಕುಳಿತಂಥ ಸದಸ್ಯರಿಗೆ ಹೇಳಬಯಸುತ್ತೇನೆ, ಏನೆಂದರೆ, ಮಾನ್ಯ ರಾಜ್ಯಪಾಲರ ಬಾಯಿಂದ ನಾವೇ ಬರೆದುದನ್ನು ಓದಿಸಬಹುದು. ಅದರಂತೆ ಈ ಸಲದ ರಾಜ್ಯಪಾಲರ ಭಾಷಣದಲ್ಲಿಯೂ ಇಂಥಾದ್ದನ್ನೇ ಬರೆದಿದ್ದರೂ ಸಹ ಅವರು ಓದಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಈ ಸಲ ನಡೆದ ಚುನಾವಣೆಯಲ್ಲಿ ಕ್ರಾಂತಿ ಉಂಟಾಯಿತು, ಜನತಾ ಮತ್ತು ಕ್ರಾಂತಿರಂಗದ ಪಕ್ಷಗಳು ಕೂಡಿಕೊಂಡು ಚುನಾವಣೆಯಲ್ಲಿ ಆರಿಸಿ ಬಂದವು ಎಂದು ಇನ್ನೂ ಅನೇಕ ವಿಚಾರಗಳನ್ನು ಹೇಳಬಹುದಾಗಿತ್ತು. ಆದರೆ ಇದು ಏನು ತೋರಿಸುತ್ತದೆಂದರೆ, ಕೆಲವೊಂದು ಗಂಭೀರವಾದಂಥ ಮತ್ತು ಕೆಲವೊಂದು ಮಟ್ಟವನ್ನು ನಾವು ಯಾವಾಗಲೂ ಏನು ಕಾದುಕೊಂಡು ಹೋಗಬೇಕೋ ಅದು ಇದರಿಂದ ಸಾಧ್ಯವಾಗುವುದಿಲ್ಲ. ಈ ಮಾತನ್ನು ನಾನು ಸ್ವಲ್ಪಮಟ್ಟಿಗೆ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ವಿಷಯಗಳ ಮೇಲೆ ಮಾನ್ಯ ಸದಸ್ಯರ ಭಾಷಣ ಸೀಮಿತವಾಗಿದ್ದರೆ ಬಹುಶಃ ಹೆಚ್ಚು ಉಪಯುಕ್ತವಾದಂಥ ಚರ್ಚೆಯಾಗುತ್ತಿತ್ತು ಎಂದು ನನ್ನ ಭಾವನೆ. ನನಗೆ ಎಲ್ಲಕ್ಕಿಂತ ಹೆಚ್ಚು ಆಶ್ಚರ್ಯದ ಸಂಗತಿ ಎಂದರೆ, ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡುವಂತಹ ಕಾಲದಲ್ಲಿ ಅವರು ಎಲ್ಲಿಂದ ಎಲ್ಲಿಗೆ ಹೋದರು ಎಂದರೆ, ಯಾರೋ ಒಬ್ಬ ಅಧಿಕಾರಿಯನ್ನು ವರ್ಗ ಮಾಡಿದ ಬಗ್ಗೆ ಮತ್ತು ಯಾರಿಗೋ ಪ್ರಮೋಷನ್ ಕೊಟ್ಟ ಬಗ್ಗೆ ಹಾಗೂ ೧೯೭೮–೭೯ರಲ್ಲಿ ಆದಂಥ ಅಬ್ಕಾರಿ ಹರಾಜಿನವರೆಗೂ ಹೋದರು. ಈ ವಿಚಾರಗಳು ಹಾಗೂ ಲ್ಯಾಂಡ್-ಟ್ರಿಬ್ಯುನಲ್ ವಿಚಾರಗಳು ಇದರಲ್ಲಿ ಏತಕ್ಕೆ ಬಂದವೋ ಗೊತ್ತಿಲ್ಲ. ಇವುಗಳನ್ನೆಲ್ಲಾ ಇಲ್ಲಿ ಚರ್ಚೆ ಮಾಡಬಾರದೆಂದಲ್ಲ; ಆದರೆ ಇಂತಹ ವಿಚಾರಗಳನ್ನು ಚರ್ಚೆ ಮಾಡಲು ಪ್ರತ್ಯೇಕವಾದಂಥ ಅವಕಾಶಗಳಿದ್ದರೂ ಸಹ ಈ ಒಂದು ಸಂದರ್ಭ ಉಪಯೋಗಿಸಿಕೊಂಡು ಹೇಳಿದ್ದಾರೆ. ಬಹಳ ಹಿಂದೆ ನಡೆದಂಥ ವಿಚಾರ ಈಗ ಅವರಿಗೆ ನೆನಪಾಗಿದ್ದು ನನಗೆ ಒಂದು ರೀತಿಯ ಸಂತೋಷ. ಅಬ್ಕಾರಿ ಹರಾಜಿಗೆ ಸಂಬಂಧಪಟ್ಟಂತೆ ಅವರು ಸುಪ್ರೀಂ ಕೋರ್ಟಿನ ನಿರ್ಣಯವನ್ನು ಇಲ್ಲಿ ತಂದು ಓದಿ ಹೇಳಿದರು. ಅದರ ಮೇಲೆ ನಾನು ಅನಂತರ ಹೇಳುತ್ತೇನೆ. ಆದರೆ ಈಗ ನಾನು ಹೇಳುವುದೇನೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಒಂದು ಭಾಷಣದ ಮೂಲಕ ಇತರರಿಗೆ ಒಂದು ಮೇಲ್ಪಂಕ್ತಿ ಹಾಕಿಕೊಡುತ್ತಾರೆ ಮತ್ತು ರಾಜ್ಯ

ಪಾಲರ ಭಾಷಣದ ಮೇಲಿನ ಚರ್ಚೆಯ ಯಾವ ಮಟ್ಟದಲ್ಲಿರಬೇಕೆಂಬುದನ್ನು ತೋರಿಸಿ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅದು ನಿರಾಶೆಯಾಯಿತು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇರತಕ್ಕಂಥ ಮುಖ್ಯವಾದಂಥ ಅಂಶವಾದರೂ ಏನು ? ಕಳೆದ ೩ ವರ್ಷಗಳ ರಾಜ್ಯಪಾಲರ ಭಾಷಣದ ಪಟ್ಟಿಗಳು ನನ್ನ ಹತ್ತಿರ ಇವೆ. ಇವುಗಳಲ್ಲಿ ಯಾವುದೇ ಹೊಸ ವಿಚಾರಗಳು ಇಲ್ಲ. ಹೊಸ ನೀತಿನಿರೂಪಣೆಗಳು ಇಲ್ಲ. ಯಾವುದೇ ಒಂದು ಹೊಸ ಮಾತಿಲ್ಲ. ಬೇರೆಬೇರೆ ಖಾತೆಗಳಿಗೆ ಸಂಬಂಧಪಟ್ಟಂತಹ ವಿಷಯಗಳನ್ನು ಒಳಗೊಂಡಂತಹ ಪಟ್ಟಿಗಳಾಗಿವೆ. ಪ್ರತಿವರ್ಷವೂ ವಿಧಾನಮಂಡಲದ ಅಧಿವೇಶನ ಪ್ರಾರಂಭವಾಗುವಾಗ ಎರಡೂ ಸದನಗಳ ಜಂಟೀ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಆ ಭಾಷಣದಲ್ಲಿ ಅರ್ಥವಿರಬೇಕಾಗುತ್ತದೆ ಮತ್ತು ಸತ್ವ ಇರಬೇಕಾಗುತ್ತದೆ. ಈ ಎರಡೂ ಇಲ್ಲದಂಥ ಭಾಷಣ ಅದು ಕೇವಲ ಒಂದು ಔಪಚಾರಿಕವಾದಂಥ ಶೂನ್ಯತೆಯೇ ಹೊರತು ಮತ್ತೇನೂ ಅಲ್ಲ, ಈ ಸಲದ ರಾಜ್ಯಪಾಲರ ಭಾಷಣದಲ್ಲಿ ನೀತಿಗೆ ಸಂಬಂಧಪಟ್ಟ ವಿಚಾರಗಳಿವೆ. ಮೊದಲನೆಯದಾಗಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಪ್ರಸ್ತಾಪವಿದೆ. ಈ ದೇಶದ ದುರ್ದೈವದ ಸಂಗತಿ ಎಂದರೆ, ಕಳೆದ ಅನೇಕ ವರ್ಷಗಳಿಂದ ಪಂಡಿತ್ ನೆಹರೂ ಅವರ ಹೆಸರನ್ನು ಯಾರೂ ನೆನಪು ಮಾಡುವುದಿಲ್ಲ. ಈ ದೇಶಕ್ಕೆ ಅವರ ದೇಣಿಗೆ ಏನು ಅವರ ಕನಸು ಏನಿತ್ತು ಎಂಬುದನ್ನು ಮರೆತಿದ್ದೇವೆ. ಈ ದೇಶದಲ್ಲಿ ಪ್ರಜಾಪ್ರಭುತ್ವದ ಸಬಲ ಬೇರು ಕೆಳಗೆ ಹೋಗಲು ಏನೇನು ಆಗಬೇಕು ಎಂಬುದನ್ನು ನಾವು ಮರೆತಿದ್ದೇವೆ. ಸ್ಥಾನೀಕ ಸ್ವರಾಜ್ಯಸಂಸ್ಥೆಗಳು ಏನಿವೆ, ಅವುಗಳನ್ನು ಸಶಕ್ತ ಸಂಸ್ಥೆಗಳನ್ನಾಗಿ ಮಾಡಬೇಕೆಂದು ಶ್ರೀ ನೆಹರೂ ಅವರು ಪ್ರಯತ್ನಪಟ್ಟರು ಅವರು ನಿಧನ ಹೊಂದಿದ ಎರಡೂವರೆ ಅಥವಾ ಮೂರು ವರ್ಷಗಳ ನಂತರ ಈ ಸಂಸ್ಥೆಗಳೆಲ್ಲಾ ನಿರ್ಜೀವವಾದವು. ಬೆಂಗಳೂರು ಪಟ್ಟಣದಲ್ಲಿ ಇಂದು ೩೫ ರಿಂದ ೪೦ ಲಕ್ಷದವರೆಗೆ ಜನಸಂಖ್ಯೆ ಇದೆ. ಆದಕಾರಣ ಬೆಂಗಳೂರು ನಗರಸಭೆಯ ಒಂದು ಆಡಳಿತ ಯಾವ ರೀತಿ ನಡೆಯಬೇಕು ಮತ್ತು ಜನರು ತಮ್ಮ ದೂರುಗಳನ್ನು ಹೇಳಲು ಯಾರ ಹತ್ತಿರ ಹೋಗಬೇಕು ಎಂಬುದು ಇಲ್ಲಿ ಮುಖ್ಯ. ಒಬ್ಬ ಅಧಿಕಾರಿ ಮೂಲಕ ಇದರ ಆಡಳಿತವನ್ನು ಈಗ ನಡೆಸಲಾಗುತ್ತಿದೆ. ಕನ್ನಡ ರಾಜ್ಯದ ರಾಜಧಾನಿಯಲ್ಲಿ ಕಳೆದ ೧೨ ವರ್ಷಗಳಿಂದ ಒಂದು ಪ್ರತಿನಿಧಿಕ ಸಂಸ್ಥೆ ಇಲ್ಲ, ಜನತಾ ಪ್ರತಿನಿಧಿಗಳು ಇಲ್ಲ. ಇದೇ ರೀತಿಯಲ್ಲಿ ನೂರಾರು ನಗರ ಸಭೆಗಳನ್ನು ರದ್ದು ಮಾಡಿ ಅಧಿಕಾರಿಗಳ ಮುಖಾಂತರ ಆಡಳಿತ ನಡೆಸತಕ್ಕಂಥ ಒಂದು ಪದ್ಧತಿ ಇಲ್ಲಿ ಬಂದಿದೆ. ಅದಕ್ಕಾಗಿಯೇ ಈ ವಿಚಾರಕ್ಕೆ ನಮ್ಮ ಹೊಸ ಸರ್ಕಾರ ಪ್ರಧಾನ ಸ್ಥಾನ ಕೊಟ್ಟಿದೆ. ರಾಜ್ಯಪಾಲರ ಭಾಷಣದ ಮುಖಾಂತರ ನಾವು ಈ ಬಗ್ಗೆ ಏನು ಹೇಳಿದ್ದೇವೆಂದರೆ, ತಾಲ್ಲೂಕ್ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು, ಮತ್ತು ನಗರಸಭೆಗಳಿಗೆ ಚುನಾವಣೆ ನಡೆಸಬೇಕು, ಅಷ್ಟೇ ಅಲ್ಲ. ಜಿಲ್ಲಾ ಮಟ್ಟಗಳಲ್ಲಿಯೂ ಕೂಡ ಒಂದು ಪ್ರಾತಿನಿಧಿಕ ಸಂಸ್ಥೆ ಇರಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಏಕೆಂದರೆ, ಈಗ ಇರತಕ್ಕಂಥ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಕೇವಲ ಒಂದು ಸಲಹಾ ಮಂಡಲಿಯಾಗಿದೆ. ಅಲ್ಲಿ ಏನೇ ಚರ್ಚೆಯಾಗಲಿ, ಯಾವುದೇ ತೀರ್ಮಾನವಾಗಲಿ. ಅದಕ್ಕೆ ಸ್ಯಾಂಕ್ಷನ್ ಕೊಡುವಂತಹ ಅಧಿಕಾರ ಇಲ್ಲ. ಆದ್ದರಿಂದ ಇಂದು ನಾವು ಅಧಿಕಾರ ವಿಕೇಂದ್ರೀಕರಣ ಮಾಡಲು ಹೊರಟಿದ್ದೇವೆ. ಇದರ ಜೊತೆಗೆ ಸಹಕಾರ ಸಂಸ್ಥೆಗಳ ದುರವಸ್ಥೆ ಇಂದು ಏನಾಗಿದೆ ಎಂಬುದನ್ನು ನಾನು ಹೇಳಬೇಕಾಗಿಲ್ಲ. ಬಹುಶಃ ಈ ಖಾತೆ ಮೇಲೆ ಚರ್ಚೆ ನಡೆಯುವಾಗ ಎಲ್ಲವೂ ಬೆಳಕಿಗೆ ಬರಬಹುದು. ಆ ಕಡೆಯ ಸ್ನೇಹಿತರು ಮತ್ತು ಈ ಕಡೆಯ ಸ್ನೇಹಿತರು ಎಲ್ಲವನ್ನೂ ಆ ಸಂದರ್ಭದಲ್ಲಿ ಹೇಳಬಹುದು. ಒಂದು ಕಾಲದಲ್ಲಿ ಈ ಸಹಕಾರಿ ಚಳುವಳಿ ನಮ್ಮ ರಾಜ್ಯದಲ್ಲಿ ಅತ್ಯಂತ ಬಲವಾಗಿ ಬೆಳೆಯಿತು. ಕೇವಲ ನಮ್ಮ ರಾಜ್ಯ ಮಾತ್ರವಲ್ಲ. ಗುಜರಾತ್, ಮಹಾರಾಷ್ಟ್ರ, ತಮಿಳುನಾಡು ಈ ನಾಲ್ಕೂ ರಾಜ್ಯಗಳಲ್ಲಿ ಇರುವಂತಹ ಸಹಕಾರ ಸಂಘಗಳು ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತವೆ ಎನ್ನುವ ಕೀರ್ತಿ ಒಂದು ಕಾಲದಲ್ಲಿ ಇತ್ತು. ಆದರೆ ಇವೊತ್ತು ಆ ಕೀರ್ತಿ ಇಲ್ಲ. ಇವೊತ್ತು ರೈತರು ಸಾಲ ವಾಪಸ್ ಕೊಡುವುದಕ್ಕೆ ಅಸಮರ್ಥರಾಗಿದ್ದಾರೆ. ಅದಕ್ಕೆ ಮುಖ್ಯವಾದಂಥ ಕಾರಣ ಈ ನಮ್ಮ ಸಹಕಾರ ಸಂಸ್ಥೆಗಳು ಉತ್ತಮ ರೀತಿಯಿಂದ ಕೆಲಸ ಮಾಡದಿರುವುದು. ಮಳೆ ಬರದಿದ್ದರೆ ಮತ್ತು ಬೆಳೆ ಚೆನ್ನಾಗಿ ಬರುವುದಿಲ್ಲವೆಂದು ಹೇಳಬಹುದು. ಆದರೆ ಈ ಒಂದು ಸಮಸ್ಯೆ ಕಳೆದ ನಾಲ್ಕಾರು ವರ್ಷಗಳಿಂದ ಬಂದಿಲ್ಲ. ನಮ್ಮ ಕರ್ನಾಟಕ ರಾಜ್ಯದ ದುರ್ದೈವವೋ ಏನೋ ಕಳೆದ ೨೦-೨೫ ವರ್ಷಗಳ ರಾಜ್ಯಪಾಲರ ಭಾಷಣ ಇಲ್ಲವೇ ಬಡ್ಜೆಟ್ ಭಾಷಣಗಳನ್ನು ತೆಗೆದು ನೋಡಿದ್ದೇ ಆದರೆ ಎರಡು ಪ್ಯಾರಾಗಳು ಅಭಾವ ಪರಿಸ್ಥಿತಿಯ ಬಗ್ಗೆಯೇ ಮೀಸಲಾಗಿರುವುದನ್ನು ನೋಡಬಹುದು. ಆದರೆ ಸಹಕಾರ ಸಂಸ್ಥೆಗಳು

ಚೆನ್ನಾಗಿ ಕೆಲಸ ಮಾಡದಿರಲು ಇದು ಒಂದೇ ಕಾರಣ ಎಂದು ಹೇಳುವುದಕ್ಕೆ ಬರುವುದಿಲ್ಲ ಈ ಸಹಕಾರಸಂಸ್ಥೆಗಳು ಮೊದಲಿನಿಂದಲೂ ರೈತರ ಮನೆ ಬಾಗಿಲಿಗೆ ಹೋಗಿ ಸಾಲವನ್ನು ಮುಟ್ಟಿಸುವ ವ್ಯವಸ್ಥೆ ಮಾಡಿದ್ದರೆ ಮತ್ತು ರೈತರಿಂದ ಬಂದಂಥ ಸಾಲದ ಹಣವನ್ನೂ ಜಮಾ ಮಾಡಿಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ರೈತರಿಂದ ಬಂದಂಥ ಸಾಲದ ಹಣವನ್ನು ಸಂಬಂಧಪಟ್ಟ ಅಧಿಕಾರಿಗಳು ಜಮಾ ಬರೆದುಕೊಳ್ಳದೆ ಅವರ ಸಾಲ ಹೆಚ್ಚಾಗುವ ರೀತಿಯಲ್ಲಿ ವರ್ತನೆ ಮಾಡಿದರೆ ಇವು ಯಾವ ರೀತಿ ಬೆಳೆಯಲು ಸಾಧ್ಯ ? ಇದರ ಜೊತೆಗೆ ಇವುಗಳಿಗೆ ಪಕ್ಷಪಾತತನದಿಂದ ನಾಮಕರಣ ಮಾಡುವಂತಹ ಒಂದು ಪದ್ಧತಿ ನಡೆದುಕೊಂಡು ಬಂದಿದ್ದೆ ಅದು ಹೋಗಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ.

ಇನ್ನು ಎರಡನೇ ವಿಚಾರವೆಂದರೆ, ಇದರಲ್ಲಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪ್ರತ್ಯೇಕವಾದ ಉಲ್ಲೇಖವಿದೆ. ಸಾಮಾನ್ಯವಾಗಿ ಪ್ರತ್ಯೇಕವಾದ ಉಲ್ಲೇಖವಿರತಕ್ಕದ್ದು ಅಗತ್ಯವಿಲ್ಲ. ಹಿಂದೆ ಇದ್ದ ಸರ್ಕಾರದ ರಾಜ್ಯಪಾಲರ ಭಾಷಣದಲ್ಲಿ ಇದು ಕೂಡ ಇರಲಿಲ್ಲ. ಈ ಮೊದಲು ಪತ್ರಿಕಾ ಸ್ವಾತಂತ್ರ್ಯ ಉಳಿಯುತ್ತದೆ ಎನ್ನುವ ಗ್ಯಾರಂಟಿ ಇರಲಿಲ್ಲ. ಪತ್ರಿಕಾ ಸ್ವಾತಂತ್ರ್ಯದ ಮೂಲಭೂತ ಹಕ್ಕು ಏನಿತ್ತು, ಅದು ಕಳೆದ ೨-೩ ವರ್ಷಗಳಲ್ಲಿ ನಡೆದಂತಹ ಘಟನೆಯ ಸಲುವಾಗಿ ಪತ್ರಿಕಾ ಕ್ಷೇತ್ರದಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಇದಂಥ ಒಂದು ನಂಬಿಕೆಯನ್ನು ಕಳೆದುಕೊಳ್ಳುವಂತಹ ಒಂದು ಪರಿಸ್ಥಿತಿ ಉಂಟಾಗಿದೆ. ಅದಕ್ಕಾಗಿಯೇ ನಮ್ಮ ಸರ್ಕಾರಕ್ಕೆ ಪತ್ರಿಕಾ ಸ್ವಾತಂತ್ರ್ಯದಲ್ಲಿ ಸಂಪೂರ್ಣವಾದಂತಹ ನಂಬಿಕೆ ಇದೆಯೆಂದು ಪ್ರತ್ಯೇಕವಾಗಿ ಹೇಳತಕ್ಕಂತಹ ಪ್ರಸಂಗ ಬಂತು

ಮೂರನೆಯದಾಗಿ ಮಾನ್ಯ ವಿರೋಧಪಕ್ಷದ ಸದಸ್ಯರು ಯಾವಾಗಲೂ ಅಲ್ಪಸಂಖ್ಯಾತರ ಬಗ್ಗೆ ಕಳಕಳಿಯ ಮಾತನ್ನು ಆಡಿದವರು ಮತ್ತು ಅವರ ಸಂಪೂರ್ಣವಾದಂತಹ ಬೆಂಬಲವನ್ನು ಪಡೆಯತಕ್ಕ ಸುಯೋಗ ಪಡೆದವರು ನಮ್ಮ ರಾಜ್ಯದಲ್ಲಿ ಮೈನಾರಿಟಿ ಕಮಿಷನ್ ಏತಕ್ಕೆ ಮಾಡಲಿಲ್ಲ ? ಇದನ್ನು ಕೇಳಿದರೆ ಅದಕ್ಕೆ ಅವರು ಉತ್ತರ ಕೊಡುವಹಾಗೆ ಇಲ್ಲ. ಅದಕ್ಕೆ ಕಾರಣವಿದೆ ; ಅಲ್ಪಸಂಖ್ಯಾತರ ಹಿತರಕ್ಷಣೆಯ ಬಗ್ಗೆ, ಅವರ ಹಕ್ಕು, ಅವರಿಗೆ ಸಿಗತಕ್ಕಂತಹ ಸೌಲಭ್ಯಗಳು ಮೊಟಕಾಗದಂತೆ ಅವರೂ ಕೂಡ ನಮ್ಮ ಸಮಾಜದ ಇನ್ನಿತರರಂತೆ ಇರಲು ಒಂದು ವಾತಾವರಣ ಬೆಳೆಸುವುದಕ್ಕೆ ಹೊಸ ಬಿಲ್ಲನ್ನು ನಾವು ತರುತ್ತಿದ್ದೇವೆ. ಈ ಅಧಿವೇಶನದ ಅವಧಿ ಮುಗಿಯುವುದರೊಳಗೆ ಅನೇಕ ರೀತಿಯ ಬಿಲ್‌ಗಳು ಬರುತ್ತವೆ. ಆಗ ಅವುಗಳಿಗೆಲ್ಲಾ ಉತ್ತರಿಸಬೇಕಾಗಿ ಬರುತ್ತದೆ. ಜೊತೆಗೆ ಇನ್ನೆರಡು ಬಿಲ್‌ಗಳು ಬರುತ್ತವೆ ಅವುಗಳೆಂದರೆ, ಲೋಕಾಯುಕ್ತ ಮತ್ತು ಆಂಟಿ ಡಿಫೆಕ್ಷನ್ ಬಿಲ್. ಈ ಬಿಲ್‌ಗಳು ಬಂದಾಗ ನಾನು ವಿಶಿಷ್ಟವಾಗಿ ಆ ಬಗ್ಗೆ ಹೇಳಲಿಕ್ಕೆ ಇದ್ದೇನೆ. ಈ ಬಿಲ್ಲುಗಳನ್ನು ತಯಾರು ಮಾಡಿ ನಮ್ಮ ದೇಶದ ರಾಷ್ಟ್ರಪತಿಗಳಿಗೆ ನಾವು ಕಳುಹಿಸಿ ಬಹಳ ದಿವಸಗಳಾಯಿತು, ಇನ್ನೂ ವಾಪಸ್ಸು ಬರಲಿಲ್ಲ, ಅವು ಇಷ್ಟರಲ್ಲಿ ಬರಬಹುದು. ಆ ಬಿಲ್ಲಿನಲ್ಲಿ ಮುಖ್ಯಮಂತ್ರಿಗಳನ್ನು ಸೇರಿಸಲಾಗಿದೆ ಎನ್ನುವ ಬಗ್ಗೆ ಕೆಲವು ಮಾನ್ಯ ಸದಸ್ಯರು ಸ್ವಾಗತ ಮಾಡಿದರು. ಇನ್ನೊಂದು ಮಾತನ್ನು ಈ ವಿಚಾರದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಭ್ರಷ್ಟಾಚಾರ ಎನ್ನುವುದು ಮೇಲಿನಿಂದ ಶುರುವಾದರೆ ಕೆಳಗಿನವರೆಗೆ ಹಂತಹಂತವಾಗಿ ಹಬ್ಬುತ್ತದೆ. ಶ್ರೀ ಮೊಯಿಲಿಯವರು ಹೇಳಿದ್ದಾರೆ, ಏನೆಂದರೆ ನಾನು ಶಿವಮೊಗ್ಗದಲ್ಲಿ ಶ್ರೀಮಾನ್ ಗುಂಡೂರಾಯರು ಗಂಗೋತ್ರಿ ಆಗಿದ್ದಾರೆಂದು ಹೇಳಿದೆ ಎಂದು. ಆದರೆ ನಾನು ಗುಂಡೂರಾಯರ ಹೆಸರನ್ನು ತೆಗೆದುಕೊಳ್ಳಲಿಲ್ಲ, ಈ ಬಿಲ್‌ನ ಬಗ್ಗೆ ಮಾತನಾಡುವಾಗ ಒಬ್ಬ ಮುಖ್ಯಮಂತ್ರಿಯ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಭ್ರಷ್ಟಾಚಾರ ನಮ್ಮ ದೇಶದಲ್ಲಿ ಎಲ್ಲಾ ಕಡೆಗೂ ಹಬ್ಬಿದೆ. ಕರ್ನಾಟಕದಲ್ಲಿ ಮೇಲಿನಿಂದ ಕೆಳಗಡೆವರೆಗೂ, ಅಡಿಯಿಂದ ತುದಿಯವರೆಗೂ ಭ್ರಷ್ಟಾಚಾರ ಇದೆ, ಅದನ್ನು ತೆಗೆದು ಹಾಕಬೇಕು ಹೇಗೆ ? ಯಾರು ರಾಜ್ಯದ ಮುಖ್ಯಸ್ಥರು ಇರುತ್ತಾರೆ ಅವರನ್ನು ಒಳಗೊಂಡಂತೆ ಈ ಬಿಲ್ ಇರಬೇಕೆಂದು ಆ ಒಂದು ಸಂದರ್ಭದಲ್ಲಿ ನಾನು ಹೇಳಿದ್ದೇನೆ. ರಾಜ್ಯದ ಮುಖ್ಯಮಂತ್ರಿಯೇ ಭ್ರಷ್ಟಾಚಾರದ ಗಂಗೋತ್ರಿಯಾಗಿದ್ದರೆ ಭ್ರಷ್ಟಾಚಾರ ನಿರ್ಮೂಲನ ಮಾಡುವುದು ಹೇಗೆ ಸಾಧ್ಯ ? ಈ ಮಾತಿಗೆ ಶ್ರೀ ಗುಂಡೂರಾಯರ ಹೆಸರನ್ನು ತೆಗೆದುಕೊಂಡರು. ಈಗಲೂ ತೆಗೆದುಕೊಂಡರು ; ಪತ್ರಿಕೆಗಳಲ್ಲೂ ಕೂಡ ಹಾಗೆಯೇ ಬಂದಿದೆ. ನಾನು ಸಾರ್ವಜನಿಕ ಸಭೆಗಳಲ್ಲಿ ಯಾರ ಮೇಲೂ ಆಧಾರವಿದ್ದರೂ ಕೂಡ ಇಂತಹ ಆರೋಪಗಳನ್ನು ಮಾಡುವುದಿಲ್ಲ. ಅದನ್ನು ಹೇಳತಕ್ಕಂತಹ ತಾತ್ಪರ್ಯ ಇಷ್ಟೆ ; ಇಷ್ಟು ದಿವಸ ಭ್ರಷ್ಟಾಚಾರ ನಿರ್ಮೂಲನದ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಶ್ರೀಮಾನ್ ದೇವರಾಜ್ ಅರಸ್‌ರವರು ಲೋಕಾಯುಕ್ತ ಬಿಲ್‌ನ್ನು ತಂದರು ; ಅದನ್ನು ನಂತರ ಬಂದಂತಹ

ಮುಖ್ಯಮಂತ್ರಿಗಳು ಅಗತ್ಯವಿಲ್ಲವೆಂದು ತೆಗೆದುಹಾಕಿದರು. ಇವತ್ತು ಈ ಒಂದು ಸಂಸ್ಥೆ ಅಸ್ತಿತ್ವದಲ್ಲಿರ ತಕ್ಕ ರಾಜ್ಯಗಳಲ್ಲಿ ಅಲ್ಲಿನ ಮುಖ್ಯಮಂತ್ರಿಗಳನ್ನು ಸೇರಿಸಿದ್ದು ಇಲ್ಲ. ಮುಖ್ಯಮಂತ್ರಿಯಾದವರು ಹೊರಗಡೆ ಇದ್ದುಕೊಂಡು, ತನ್ನ ಸಹೋದ್ಯೋಗಿಗಳು ಇನ್ನಿತರರು ಇದರೊಳಗಡೆ ಬರಬಹುದೆಂದು ಹೇಳುವುದಕ್ಕೆ ಯಾವ ನೈತಿಕ ಹಕ್ಕು ಇದೆ ? ಭ್ರಷ್ಟಾಚಾರದ ವಿರುದ್ಧ ಯಾವ ನೈತಿಕ ಪ್ರಭಾವವನ್ನು ಬೀರಲಿಕ್ಕೆ ಸಾಧ್ಯ ? ಎಲ್ಲಕ್ಕಿಂತ ಮೊದಲು ನನ್ನ ಕೈ ಸ್ವಚ್ಛ ಇರಬೇಕು. ಆಗ ನನ್ನ ಮಾತಿಗೆ ಬೆಲೆ ಇರುತ್ತದೆ. ಮುಖ್ಯಮಂತ್ರಿಗಳು ಹೊರಗಡೆ ಇರುವುದು ಸರಿಯಲ್ಲ. ಮುಖ್ಯಮಂತ್ರಿಗಳು ಯಾವ ಕಾಯಿದೆ ಕಾನೂನಿಗೂ ಬರುವವರಲ್ಲ ಎನ್ನುವ ಮಾತು ಒಂದು ಕಾಲದಲ್ಲಿತ್ತು. ೧೯೭೩ನೇ ಇಸವಿಯಲ್ಲಿ ಪ್ರಧಾನಮಂತ್ರಿಗಳು ಇದು ಕಾಯಿದೆಗೆ ಬಾಹಿರವೆಂದು ಅದಕ್ಕಾಗಿ ಸಂವಿಧಾನದಲ್ಲಿ ಒಂದು ತಿದ್ದುಪಡಿಯನ್ನು ಕೂಡ ತಂದರು. ಏನೋ ದೇಶದ ಸುದೈವವೆಂದು ಕಾಣುತ್ತದೆ, ಆ ತಿದ್ದುಪಡಿ ಪಾಸ್ ಆಗಲಿಲ್ಲ. ಬೇರೆ ಬೇರೆ ಘಟನೆಗಳನ್ನು ನೋಡಿದರೆ ಅದರ ತಾತ್ಪರ್ಯ ಇಷ್ಟೆ, ಯಾರು ಮುಖ್ಯಸ್ಥರಾಗಿದ್ದುಕೊಂಡು ಬೇರೆಯವರು ಕಾರ್ಯಾಚರಣೆ ಮಾಡಬೇಕೆಂದು ಹೇಳುತ್ತಾರೆ ಅವರು ಮೊದಲು ಇದನ್ನು ಮಾಡಬೇಕು. ಅದರಂತೆ ನಾನು ಇದನ್ನು ಮೊದಲು ಮಾಡಬೇಕೆಂದು ಈ ಬಿಲ್‌ನ್ನು ತಂದಿದ್ದೇನೆ. ಇದರ ಬಗ್ಗೆ ಹೆಚ್ಚು ಈಗ ಹೇಳುವುದಿಲ್ಲವೆಂದು ಹೇಳಿದ್ದೇನೆ. ಆಂಟಿ ಡಿಫೆಕ್ಷನ್ ಬಿಲ್, ಈ ಬಿಲ್‌ನ್ನು ತರತಕ್ಕಂತಹ ಸಂದರ್ಭದಲ್ಲಿ ಇದರ ಬಗ್ಗೆ ಅನೇಕ ಟೀಕೆ ಆಯಿತು ಕೆಲವು ಜನ ಹೆಸರು ಮಾಡಿದರು, ಲಘುವಾಗಿ ಕೂಡ ಮಾತನಾಡಿದರು. ನೀವು ಹೋಗುವುದರೊಳಗೆ ಬೇಗ ತೆಗೆದುಕೊಂಡು ಬನ್ನಿ ಎಂದು ಅವರೇ ಹೇಳಿದರು. ಹೋಗುವುದಿದ್ದರೆ ಹೋಗುತ್ತೇವೆ ಇರುವುದಿದ್ದರೆ ಇರುತ್ತೇವೆ. ಅವರವರ ಅಭಿಪ್ರಾಯಕ್ಕೆ ಬಿಟ್ಟಂತಹ ವಿಚಾರ. ಒಳ್ಳೆಯ ವಾತಾವರಣವನ್ನುಂಟು ಮಾಡಲಿಕ್ಕೆ ಇಂತಹ ಕಾನೂನುಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಒಳ್ಳೆಯ ವಾತಾವರಣವನ್ನು ಮತ್ತು ಅನುಕೂಲವನ್ನು ಒದಗಿಸಲಿಕ್ಕೆ ಇಂತಹ ಕಾಯಿದೆಗಳು ಬೇಕು. ಆಂಟಿ ಡಿಫೆಕ್ಷನ್ ಬಿಲ್ ತರಲಿಕ್ಕೆ ಎರಡೂ ತರಹ ತೊಂದರೆಗಳಿವೆ. ಮೊದಲು ನಮ್ಮ ಸಂವಿಧಾನದ ತಿದ್ದುಪಡಿ ಮಾಡಬೇಕು. ಸಂವಿಧಾನ ತಿದ್ದುಪಡಿ ಮಾಡತಕ್ಕಂತಹ ಅಧಿಕಾರ ನಮಗೆ ಇಲ್ಲ. ಎರಡನೆಯದಾಗಿ (ರೆಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆಕ್ಟ್) ಅದನ್ನು ತಿದ್ದುಪಡಿ ಮಾಡಿ, ಅದು ಕೂಡ ಕೇಂದ್ರ ಸರ್ಕಾರದ ಕಾಯಿದೆ, ಆದುದರಿಂದ ಅದನ್ನು ತಿದ್ದುಪಡಿ ಮಾಡತಕ್ಕಂತಹ ಅಧಿಕಾರ ನಮಗೆ ಇಲ್ಲ. ಜಮ್ಮು ಮತ್ತು ಕಾಶ್ಮೀರ ಸರ್ಕಾರಕ್ಕೆ ವಿಶೇಷ ಅಧಿಕಾರವಿದೆ. ಅದನ್ನು ಉಪಯೋಗಿಸಿಕೊಂಡು ಈ ಕಾಯಿದೆಯನ್ನು ತಂದರು, ಅಂತಹ ವಿಶೇಷವಾದ ಅಧಿಕಾರ ಕರ್ನಾಟಕ ರಾಜ್ಯಕ್ಕೆ ಇಲ್ಲ.

ಅದಕ್ಕಾಗಿ ನಾವು ನಿಧಾನ ಮಾಡಿದ್ದೇವೆ. ಇದನ್ನು ಯಾವ ರೀತಿಯಲ್ಲಿ ತರಬೇಕೆಂದು ಯೋಚನೆ ಮಾಡಿ ತರಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ನಮ್ಮ ಭಟ್ಕಳದ ಮಾನ್ಯ ಸದಸ್ಯರು ಮಾತನಾಡುವಾಗ ಕ್ರಾಂತಿರಂಗದ ಬಗ್ಗೆ ಮಾತನಾಡಿದ್ದಾರೆ. ಆದರೆ ನಾನು ಆ ವಿಷಯವನ್ನು ಆಂತರಿಕ ವಿಚಾರವೆಂದು ತಿಳಿದುಕೊಂಡಿದ್ದೇನೆ. ಆ ವಿಷಯದ ಬಗ್ಗೆ ನಾನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಈ ಸಾರಿಯ ರಾಜ್ಯಪಾಲರ ಭಾಷಣಕ್ಕೂ ೧೯೮೦ನೇ ಇಸವಿಯ ರಾಜ್ಯಪಾಲರ ಭಾಷಣಕ್ಕೂ ಇರುವಂತಹ ವ್ಯತ್ಯಾಸವೇನೆಂದರೆ, ಈ ಭಾರಿಯ ರಾಜ್ಯಪಾಲರ ಭಾಷಣದಲ್ಲಿ ಬಹಳ ಮಹತ್ವವಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಲೋಕಸಭೆಯ ಚುನಾವಣೆಯಾದಾಗ ಅಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕರ್ನಾಟಕ ರಾಜ್ಯದಲ್ಲಿ ಇದ್ದಂಥ ಸರ್ಕಾರವನ್ನು ಬದಲಾವಣೆ ಮಾಡಿ ಕಾಂಗ್ರೆಸ್ (ಐ) ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಹಕ್ಕು ಇತ್ತೇ ಎನ್ನುವ ವಿಚಾರವನ್ನು ನಾನು ಮಾನ್ಯ ವಿರೋಧಪಕ್ಷದ ನಾಯಕರನ್ನು ಕೇಳುತ್ತೇನೆ ? ಆಗ ಕಾಂಗ್ರೆಸ್ (ಐ) ಪಕ್ಷ ಜನರ ಬೆಂಬಲವನ್ನು ಪಡೆದು ಅಧಿಕಾರಕ್ಕೆ ಬಂದಿತ್ತೆ ? ತಾವು ಆಗ ಯಾವ ಕಾಯ್ದೆ ಪ್ರಕಾರ ಅಧಿಕಾರಕ್ಕೆ ಬಂದಿದ್ದೀರಿ. ಲೋಕಸಭಾ ಚುನಾವಣೆಯಾದರೆ ಕರ್ನಾಟಕ ರಾಜ್ಯದ ಆಡಳಿತವನ್ನು ಬದಲಾವಣೆ ಮಾಡುವುದು ಪ್ರಜಾಪ್ರಭುತ್ವದ ಯಾವ ತಂತ್ರವೆಂದು ನಾವು ಕೇಳಬೇಕಾಗುತ್ತದೆ. ಆದರೆ ನಮ್ಮ ಸರ್ಕಾರ ಜನರ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿರುವ ಸರ್ಕಾರ, ಆದ್ದರಿಂದ ನಾವು ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಅಳವಡಿಸಿದ್ದೇವೆ. ಆಂಟಿ-ಡಿಫೆಕ್ಷನ್ ಬಿಲ್ ತಂದಿರುವ ಉದ್ದೇಶವೇನೆಂದರೆ, ಎಲ್ಲಾ ಶಾಸಕರನ್ನು ನಮ್ಮ ಪಕ್ಷದಲ್ಲಿಯೇ ಉಳಿಸಿಕೊಳ್ಳಬೇಕೆಂಬ ಆಸೆ ಏನೂ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ರೀತಿ ಡಿಫೆಕ್ಷನ್ ಆಗುವುದು ಒಂದು ರೀತಿಯ ಮಹಾ ರೋಗವಿದ್ದಂತೆ. ಈ ಒಂದು ಮಹಾ ರೋಗವಿದ್ದರೆ ಯಾವ ಒಂದು ದೇಶದಲ್ಲಿಯೂ ಕೂಡ ಪ್ರಜಾಪ್ರಭುತ್ವ ಬೇರು ಬಿಡುವುದಕ್ಕೆ ಸಾಧ್ಯವಿಲ್ಲ ಇದರಿಂದ ಜನತೆಗೆ ನಮ್ಮ ಮೇಲೆ ಯಾವ ರೀತಿಯ

ಪ್ರೀತಿ ಇರುತ್ತದೆ. ಜನತೆಗೂ ನಮಗೂ ಯಾವ ರೀತಿಯ ಸಂಬಂಧವಿರುತ್ತದೆ ? ಶ್ರೀ ಬಜನ್‌ಲಾಲ್‌ರವರು ಜನತಾ ಪಕ್ಷದಿಂದ ಗೆದ್ದು ಬಂದು, ಕಾಂಗ್ರೆಸ್ ಪಕ್ಷಕ್ಕೆ ಬಂದಾಗ ಅವರು ಯಾವ ಟೋಪಿ ಹಾಕಿಕೊಂಡು ಬಂದರು. ಅವರು ಬಣ್ಣ ಬದಲಾಯಿಸಿದರೇ ಅಥವಾ ಶರಟು ಬದಲಾವಣೆ ಮಾಡಿ ಕೊಂಡು ಬಂದರೋ ನನಗಂತೂ ಗೊತ್ತಿಲ್ಲ. ಆಗ ತಾವು ಏನು ಮಾಡುತ್ತಿದ್ದೀರಿ. ಆಗ ತಾವು ಅದಕ್ಕೆ ಯಾವ ಬಣ್ಣವನ್ನು ಕೊಟ್ಟಿದ್ದೀರಿ ? ಅವರು ಸಫ್ದರ್‌ಜಂಗ್ ರೋಡಿನಲ್ಲಿರುವ ಪ್ರಧಾನಮಂತ್ರಿಯವರ ಮನೆಗೆ ಬಂದು ಹೊಸ ಜನ್ಮ ಪಡೆದರೆಂದು ಕಾಣುತ್ತದೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾನು ಇದುವರೆಗೂ ತಾಳ್ಮೆಯಿಂದ ಕೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ತಾವು ತಾಳ್ಮೆಯನ್ನು ಕಳೆ ುಕೊಂಡಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದನ್ನು ನೋಡಿದರೆ......

ಉಪಾಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ತಾವು ಮಾತನಾಡ ಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ ಆಡಳಿತ ಪಕ್ಷದ ಸದಸ್ಯರು ಅನೇಕ ಬಾರಿ ಮಧ್ಯೆ ಮಧ್ಯೆ ಪ್ರವೇಶ ಮಾಡಿ, ಮಾತನಾಡಿದ್ದಾರೆ. ಆದರೆ ತಾವು ಈಗ ಸಮಯವನ್ನು ಅಳತೆಗೋಲು ಹಾಕಿ ಮಾತನಾಡುವುದಾದರೆ ಬಹಳ ಕಷ್ಟವಾಗುತ್ತದೆ. ತಾವು ಮಾನ್ಯ ಮುಖ್ಯಮಂತ್ರಿಗಳಿಗೊಂದು ರೀತಿ, ವಿರೋಧಪಕ್ಷದವರಿಗೆ ಒಂದು ರೀತಿ ಅಳತೆಗೋಲು ಹಾಕಿದರೆ ಹೇಗೆ? ತಮ್ಮ ಮಾತನ್ನು ಉಲ್ಲಂಘನೆ ಮಾಡುವ ಇಚ್ಛೆ ನನಗೆ ಇಲ್ಲ. ಆದರೂ ಕೂಡ ನಾನು ಈಗ ಕುಳಿತು ಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿರೋಧಪಕ್ಷದ ನಾಯಕರು ಏನಾದರೂ ಸಲಹೆ ಕೊಡುವು ದಾದರೆ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರ ಭಾಷಣವನ್ನು ಅಳತೆ ಮಾಡುವಂಥ ಕೆಲಸ ಮಾಡಿದ ಪುಣ್ಯಾತ್ಮರು ಶ್ರೀ ಭಜನ್‌ಲಾಲ್‌ರವರ ಮುಖ್ಯ ಮಂತ್ರಿತ್ವದ ಬಗ್ಗೆ ಇಲ್ಲಿ ಪ್ರತಿಪಾದನೆ ಮಾಡುವುದು ಸರಿಯಲ್ಲ. ವಿರೋಧಪಕ್ಷದ ನಾಯಕರ ಭಾಷಣ ವನ್ನು ಇಷ್ಟು ಹೀನಾಯಮಾನವಾಗಿ ವರ್ಣಿಸುವುದು ಮುಖ್ಯಮಂತ್ರಿಗಳಿಗೆ ತಕ್ಕುದ್ದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇದುವರೆಗೂ ಹೇಳಿದ್ದರಲ್ಲಿ ಯಾವುದೂ ಹೀನಾಯಮಾನವಾಗಿ ಬೈದದ್ದು ಇಲ್ಲ. ನನಗೆ ಆ ರೀತಿ ಮಾತನಾಡುವುದು ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ವಿರೋಧಪಕ್ಷದ ನಾಯಕರ ಭಾಷಣಕ್ಕೆ ಹೀನಾಯಮಾನ ವಾಗಿ ಬೈದು, ಅವರ ಭಾಷಣವನ್ನು ಅಳತೆ ಮಾಡಿ, ಈಗ ಅದಕ್ಕೆ ಬಣ್ಣ ಕಟ್ಟುವುದು ಸರಿಯಲ್ಲ. ಇದನ್ನು ಜನ ಮೆಚ್ಚುವುದಿಲ್ಲ. ತಮ್ಮ ಚರಿತ್ರೆ ಕೂಡ ನನಗೆ ಗೊತ್ತಿದೆ. ತಾವು ಈ ರೀತಿ ಬಣ್ಣ ಕಟ್ಟಿ ಮಾತನಾಡಿ ಅದನ್ನು ಮತ್ತೆ ಜಸ್ಟಿಫೈ ಮಾಡುವುದಕ್ಕೆ ಹೋದರೆ ಅದನ್ನು ಯಾರೂ ನಂಬುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಚರಿತ್ರೆ ಪ್ರಪಂಚಕ್ಕೇ ಗೊತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಗಳ ಚರಿತ್ರೆ ತಮಗೇನು ಗೊತ್ತಿದೆ. ದಯವಿಟ್ಟು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರಿಗೆ ನನ್ನ ಚರಿತ್ರೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದರು. ಅವರು ಹೇಗಿದ್ದರೂ ಲೇಖಕರು, ಆದ್ದರಿಂದ ನನ್ನ ಚರಿತ್ರೆ ಬರೆಯ ಬೇಕಾದಂಥ ಸಂದರ್ಭದಲ್ಲಿ ನಾನು ಅವರಿಗೆ ಆ ಕೆಲಸ ಕೊಡುತ್ತೇನೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಎಂಬುದು ಬೆಳೆಯಬೇಕಾದರೆ ಆಂಟಿ ಡಿಫೆಕ್ಷನ್ ಬಿಲ್ ತರಬೇಕಾಗುತ್ತದೆ. ಇಲ್ಲದಿದ್ದರೆ ಈ ಮಹಾ ರೋಗ ಮುಂದುವರಿಯುತ್ತಲೇ ಇರುತ್ತವೆ. ಕೆಲವರು ಮಾನ್ಯ ಸದಸ್ಯರು ನಮ್ಮ ಸರ್ಕಾರ ಉರುಳಿ ಹೋಗುತ್ತದೆ ಎನ್ನುವ ಭಯದಿಂದ ನಾವು ಈ ಬಿಲ್ ತರುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರು. ಆದರೆ ನಾನು ಅನೇಕ ಬಾರಿ ನಾವು ಬರುವಾಗ ಕುರ್ಚಿಯನ್ನು ಅಂಟಿಸಿಕೊಂಡು ಬಂದಿಲ್ಲ ಎಂದು

ಹೇಳಿದ್ದೇನೆ. ನಾವು ಯಾವತ್ತೂ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತೇವೆಯೋ ಆ ದಿವಸ ಅಧಿಕಾರದಿಂದ ದೂರವಿರುತ್ತೇವೆ. ಆ ಜನರ ವಿಶ್ವಾಸವಿರುವ ತನಕ ನಾವು ಸರ್ಕಾರದಲ್ಲಿ ಮುಂದುವರಿಯುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಈ ರಾಜ್ಯದ ಜನತೆ ನಮ್ಮ ಮಾಲೀಕರು. ಅವರ ಪೂತಿಗೆ ನಾವು ನೀವು ಎಲ್ಲರೂ ಬೆಲೆ ಕೊಡಬೇಕಾಗುತ್ತದೆ. ನಾವು ಯಾವತ್ತು ಅಧಿಕಾರದಿಂದ ಕೆಳಗಿಳಿಯುತ್ತೇವೆಯೋ ಅಲ್ಲಿಯತನಕ ನಾವು ಜನರ ಸೇವೆಯನ್ನು ಮಾಡುತ್ತೇವೆ. ಮತ್ತೇ ನಾವು ಜನರ ಮುಂದೆ ಹೋಗಿ ನಮ್ಮ ತಪ್ಪನ್ನು ಅವರ ಮುಂದೆ ಇಟ್ಟು ಅವರ ವಿಶ್ವಾಸವನ್ನು ಗಳಿಸಿ ಬರುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ "ಥಿಂಕ್‌ಟ್ಯಾಂಕ್" ಬಗ್ಗೆ ಹೇಳಿದರು. ಅವರು "ಸ್ಟಿಂಕ್ ಟ್ಯಾಂಕ್" ಎಂದು ಹೇಳಿದರು. ಆದರೆ ಅವರು ಯಾವ ಭಾಷೆಯಲ್ಲಿ ಬೇಕಾದರೂ ಅದನ್ನು ಕರೆಯಲಿ ಪರವಾಗಿಲ್ಲ, ನಾನು ಅಂತಹ ಜನರಿಗೆ ಹೇಳುವುದಾದರೂ ಏನೆಂದರೆ, ಗುಲಾಬಿ ಹೂವಿನ ವಾಸನೆಗಿಂತ ಒಣ ಮೀನಿನ ದುರ್ಗಂಧವೇ ಅವರಿಗೆ ಹೆಚ್ಚು ರಮ್ಯವಾಗಿರುವುದಾದರೆ ಅದಕ್ಕೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಹೇಳಿದರು, ಗುಲಾಬಿ ಹೂವಿನ ವಾಸನೆಗಿಂತ ಒಣ ಮೀನಿನ ದುರ್ಗಂಧವೇ ಚೆನ್ನಾಗಿರುತ್ತದೆ ಎಂದು. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಅದರ ಪರಿಚಯ ಹೇಗಾಯಿತು ? ಅದನ್ನು ತಾವು ದುರ್ಗಂಧವೆಂದು ಹೇಗೆ ಹೇಳಿದಿರಿ ?

ಶ್ರೀ ರಾಮಕೃಷ್ಣ ಹೆಗಡೆ.—ಮೀನು ತಿನ್ನುವುದು ಒಳ್ಳೆಯದು. ತಿನ್ನಬಾರದೆಂದು ಯಾರು ಹೇಳಿದ್ದಾರೆ.

5-00 ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಏಕೆಂದರೆ ಹಸಿ ಮೀನು, ಒಣ ಮೀನು ಇವೆರಡರ ಪರಿಚಯ ಇರತಕ್ಕಂಥ ಜನ ನಾವು. ನಾನು ಮೀನಿನ ವಾಸನೆ ಒಳ್ಳೆಯ ಸುಗಂಧವೆಂದು ಹೇಳುತ್ತೇನೆ. ಇದರಲ್ಲಿ ತಪ್ಪೇನು ?

ಶ್ರೀ ರಾಮಕೃಷ್ಣ ಹೆಗಡೆ.—ಯಾರು ಮೀನನ್ನು ಪ್ರತಿದಿವಸ ತಿನ್ನುತ್ತಾರೆ ? ಅಂತಹವರಿಗೂ ಕೂಡ ಒಣಮೀನು ಹಿಡಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮೀನು ದುರ್ಗಂಧ ಅಂತ ಹೇಳಬೇಡಿ ಅಂತ ನಾನು ತಮಗೆ ಹೇಳಿದ್ದು.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು Extra Constitutional Authority ಎಂದು ಹೇಳಿದರು. ಅದು ಹೇಗೆ ಇರುತ್ತದೆ, ಯಾವ ರೀತಿ ಕೆಲಸಗಳನ್ನು ಮಾಡುತ್ತದೆ ಎಂಬ ಬಗ್ಗೆ ಸಂಪೂರ್ಣವಾದ ಅನುಭವ ಶ್ರೀ ಮೊಯಿಲ್ಲಿಯವರಿಗೆ ಇದ್ದೇ ಇದೆ. ಈ ಥಿಂಕ್ ಟ್ಯಾಂಕ್‌ಗೆ ನಾನು ಅಧ್ಯಕ್ಷ. ಹಿಂದೆ ಇಲ್ಲಿ ಮುಖ್ಯ ಕಾರ್ಯದರ್ಶಿಯವರಾಗಿ ಇದ್ದಂತಹವರೂ, ಕೇಂದ್ರದ ವ್ಯವಸಾಯ ಖಾತೆಗೆ ಮುಖ್ಯಸ್ಥರಾಗಿದ್ದವರೂ ಮತ್ತು ಯೋಜನಾ ಆಯೋಗದಲ್ಲಿ ಸದಸ್ಯರಾದಂತಹವರೂ ಮತ್ತು ಇವತ್ತೂ ಕೂಡ ಯು.ಎನ್.ಓ. ನಲ್ಲಿ ಪುನಃ ಪುನಃ ಒಂದು ತಿಂಗಳಿಗೆ ಎರಡು ತಿಂಗಳಿಗೊಮ್ಮೆ ಸಭೆಗಳಲ್ಲಿ ಭಾಗವಹಿಸುವವರೂ ಆದವರನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದೇವೆ. ಕನ್ನಡಿಗರು ಯಾರೂ ಸಿಗಲಲ್ಲವೆ ಎಂದು ಕೇಳಿದ್ದಾರೆ. ಕನ್ನಡಿಗರಿಗೆ ಇದರಿಂದ ಏನು ಅಪಮಾನವಾಯಿತು? ಇದರಲ್ಲಿ ಇರತಕ್ಕಂಥ ನಾಲ್ಕು ಜನರನ್ನು ಬಿಟ್ಟರೆ ಬಾಕಿ ಎಲ್ಲರೂ ಕನ್ನಡಿಗರು. ಹಿಂದೆ ರಿಸರ್ವ್ ಬ್ಯಾಂಕ್ ಕಮಿಷನರ್ ಆಗಿದ್ದವರೂ, ಕೇಂದ್ರ ಸರ್ಕಾರದಲ್ಲಿ ಅರ್ಥಖಾತೆಯ ಕಾರ್ಯದರ್ಶಿಯಾಗಿದ್ದಂಥವರೂ ಆಗಿದ್ದ ಶ್ರೀ ಐ. ಜಿ. ಪಟೇಲ್ ಅವರು ಈ ನಾಲ್ಕು ಜನರಲ್ಲಿ ಒಬ್ಬರು. ಅವರ ನಂತರ ಡಾಕ್ಟರ್ ರಾಜೀವ್ ಕೊಠಾರಿ ಅವರು ಪ್ರತಿ ತಿಂಗಳೂ ಜಪಾನ್‌ಗೆ ಹೋಗಬೇಕಾಗುತ್ತದೆ. ಜಪಾನ್ ಸರ್ಕಾರದವರು ಇವರನ್ನು ಕರೆಸಿಕೊಳ್ಳುತ್ತಾರೆ. ನಂತರ ಶ್ರೀ ಎಲ್.ಸಿ. ಜೈನ್. ಅವರು ಗಾಂಧಿವಾದಿಗಳು ಅದರಲ್ಲೂ ರೂರಲ್ ಡೆವಲಪ್

ಮೆಂಟ್‌ನಲ್ಲಿ He is considered as an authority. ಇವತ್ತಿಗೂ ಕೂಡ ಯೋಜನಾ ಆಯೋಗದ ಎರಡು ಮೂರು ಬೇರೆ ಬೇರೆ ಉಪಸಮಿತಿಗಳಾದ ವಿಲೇಜ್ ಇಂಡಸ್ಟ್ರೀಸ್ ಮತ್ತು ರೂರಲ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟ ಉಪಸಮಿತಿಗಳಿಗೆ ಶ್ರೀ ಜೈನ್‌ರವರು ಸದಸ್ಯರಾಗಿದ್ದಾರೆ. ನಂತರ ಶ್ರೀ ಚಾರ್ಲ್ಸ್ ಕೊರಿಯಸ್ ಅವರು ಮತ್ತೊಬ್ಬ ಸದಸ್ಯರು.

ಇನ್ನು ಕಾಫಿಬೋರ್ಡ್ ಎದುರುಗಡೆ ಎಲ್.ಐ.ಸಿ. ಅವರು ಗಗನಚುಂಬಿ ಕಟ್ಟಡ ಕಟ್ಟಿಸಿದ ಬಗ್ಗೆ ನಾನು ಅಂತಹ ಕಟ್ಟಡಗಳನ್ನು ಕಟ್ಟುವುದನ್ನು ಬ್ಯಾನ್ ಮಾಡುತ್ತೇವೆಂದು ಹೇಳಲಿಲ್ಲ. ಆದರೆ ಇಡೀ ವಾತಾವರಣವೇ ಕೆಟ್ಟು ಹೋಗುವ ಹಾಗೆ, ವಾತಾವರಣದ ಚಂದ ಕೆಡಲು ಕಾರಣವಾಗುವ ಬಹು ಅಂತಸ್ತಿನ ಕಟ್ಟಡಗಳಿಗೆ ಯಾವ ಕಾರಣದಿಂದಲೂ ನಾವು ಅನುಮತಿ ಕೊಡುವುದಿಲ್ಲ. ಶ್ರೀಮಾನ್ ಮೊಯಿಲಿಯವರಿಗೆ ಗೊತ್ತಿರಬಹುದು, ಏನೆಂದರೆ ಈ ಮೊದಲು ೧೦-೧೫-೨೦ ಅಂತಸ್ತಿನ ಕಟ್ಟಡಗಳಿಗೆ ಪರವಾನಗಿಯನ್ನು ಕೊಟ್ಟಿದ್ದಾರೆ. ಇನ್ನು ಮುಂದೆ ಇಂತಹ ಕಟ್ಟಡಗಳಿಗೆ ನಾವು ಪರವಾನಗಿಯನ್ನು ಕೊಡುವುದಿಲ್ಲ. ಇನ್ನು ಮುಂದೆ ಎತ್ತರದ ಕಟ್ಟಡಗಳು ಎಲ್ಲಿ ಬರಬೇಕು ಎನ್ನುವುದರ ಬಗ್ಗೆ, ಸರ್ವೆ ಮಾಡದೆ, ಪರೀಕ್ಷಿಸದೆ ಅನುಮತಿ ಕೊಡುವುದಿಲ್ಲ. ಹೊಸದಾಗಿ ನಿರ್ಮಾಣವಾಗುವ ಬಡಾವಣೆಗಳಲ್ಲಿ ಎತ್ತರದ ಕಟ್ಟಡಗಳನ್ನು ಕಟ್ಟಬಹುದು. ಆದರೆ ಕಟ್ಟಡಗಳ ಅಂತರದಲ್ಲಿ ಹತ್ತು ಅಡಿ ಜಾಗ ಕೂಡ ಇರುವುದಿಲ್ಲ. ವಾಹನಗಳನ್ನು ನಿಲ್ಲಿಸಲು ಜಾಗ ಇರುವುದಿಲ್ಲ. ಅಂತಹ ಪ್ರದೇಶದಲ್ಲಿ ಹತ್ತಿಪ್ಪತ್ತು ಮಹಡಿಗಳ ಕಟ್ಟಡಗಳಿಗೆ ಪರವಾನಗಿ ಕೊಟ್ಟರೆ ಏನಾಗಬೇಕು? ಆದ್ದರಿಂದ ನಮ್ಮ ದೇಶದಲ್ಲಿ ಅಷ್ಟೇ ಅಲ್ಲ ಹೊರಗಡೆ ಕೂಡ ಟೌನ್ ಪ್ಲಾನಿಂಗ್‌ನಲ್ಲಿ ಅತ್ಯಂತ ಹೆಸರಾದಂತಹ ವ್ಯಕ್ತಿಯೊಬ್ಬರು ಈ ಸಮಿತಿಯಲ್ಲಿ ಇರುವುದಕ್ಕೆ ಯೋಗ್ಯತೆ ಇಲ್ಲವೆಂದು ಹೇಳಿದರೆ ಆ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಶ್ರೀ ಬಂಗಾರಪ್ಪನವರು ವೆಂಕಟಗಿರಿಗೌಡ ಅವರ ಹೆಸರು ಹೇಳಿದರು. ನನಗೆ ಅವರ ಪರಿಚಯ ಇದೆ, ಅವರೊಡನೆ ಮಾತನಾಡಿದ್ದೇನೆ. ಅವರಿಗೆ ಪಾಂಡಿತ್ಯ ಇದೆ. ಆದರೆ ಅದು ಒಂದು ಕ್ಷೇತ್ರದಲ್ಲಿ ಮಾತ್ರ. ಆದ್ದರಿಂದ ನಾವೇನಾದರೂ ಯೋಚನೆ ಮಾಡಿದರೆ ಅದರಿಂದ ಜನರಿಗೆ ಹೇಗೆ ಲಾಭವಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದೇವೆ ಹೊರತು ಬೇರೇನೂ ಅಲ್ಲ. ನಾನು ಕೆ. ಎಲ್. ರಾಜ್ ಅವರನ್ನು ಕೇಳಿದೆ. ನನ್ನ ಆರೋಗ್ಯ ಚೆನ್ನಾಗಿಲ್ಲ. ಬರಲಿಕ್ಕೆ ಆಗುವುದಿಲ್ಲ ನಂತರ ತಿಳಿಸುತ್ತೇನೆ ಎಂದು ಹೇಳಿದರು. ಇಂತಹವರುಗಳುಒಮ್ಮೆ ಬಂದರೆ ಹತ್ತು ಸಾವಿರ ರೂಪಾಯಿ ಕೊಡುತ್ತಾರೆ. ಆದರೆ ಅವರು ಬರುವಂತಹವರು ಅಲ್ಲ. ಒಂದು ವ್ಯಕ್ತಿಗತವಾದಂತಹ ಸಂಬಂಧ, ಪರಿಚಯ ಮತ್ತು ವಿಶ್ವಾಸ ಇದ್ದ ಕಾರಣ ಇವರುಗಳು ಒಪ್ಪಿಕೊಂಡಿದ್ದಾರೆ ಇದನ್ನೆಲ್ಲಾ ಮಾಡಿರುವುದು ಕರ್ನಾಟಕ ರಾಜ್ಯಕ್ಕೆ ಇಂತಹ ನಿಷ್ಣಾಂರ ಜ್ಞಾನದ ಲಾಭ ಸಿಗಬೇಕು, ಅವರ ಅನುಭವದ ಪ್ರಯೋಜನ ಸಿಗಬೇಕು ಎಂಬ ಉದ್ದೇಶದಿಂದ. ಅವರಿಗೆ ಕೊಡುವ ಖರ್ಚಾದರೂ ಎಷ್ಟು ಎಂದರೆ, ಮೀಟಿಂಗ್‌ಗೆ ಬಂದರೆ ಇನ್ನೂರೈವತ್ತು ರೂಪಾಯಿಗಳನ್ನು ಒಂದು ದಿನಸಕ್ಕೆ ಕೊಡುತ್ತೇವೆ. ಮತ್ತು ಹೋಗಿ ಬರತಕ್ಕಂಥ ಖರ್ಚು ಅಷ್ಟೆ, ಅವರು ಯಾರಿಗೂ ಹದಿನೈದು ಇಪ್ಪತ್ತು ಸಾವಿರ ಕೊಡುವುದಿಲ್ಲ. ಅವರು ಯಾರೂ ಹತ್ತು ಇಪ್ಪತ್ತು ಸಾವಿರ ರೂಪಾಯಿ ಕೊಟ್ಟರೂ ಹೋಗುವವರಲ್ಲ. ಅವರು ಒಪ್ಪಿರತಕ್ಕಂಥಾದ್ದು ನನ್ನ ಮೇಲೆ ವೈಯಕ್ತಿಕವಾಗಿ ಗೌರವ ಇದ್ದುದರಿಂದಾಗಿ. ಶ್ರೀ ಮೊಯಿಲಿಯವರಿಗೆ ಇದು ಸ್ಟಿಂಕ್ ಟ್ಯಾಂಕ್ ತರಹ ಕಾಣುತ್ತದೆ. ಆದರೆ ಕೇಂದ್ರದಲ್ಲಿ ಪ್ರಧಾನಮಂತ್ರಿಯವರು ಮಾಡಿದ್ದಾರಲ್ಲ ಥಿಂಕ್ ಟ್ಯಾಂಕ್ ಅದು ಯಾವ ರೀತಿ ಕಾಣುತ್ತದೆ? ಅದರ ಬಗ್ಗೆ ಏಕೆ ಹೇಳಲಿಲ್ಲ? ಮಾನ್ಯ ಮೊಯಿಲಿಯವರಿಗೆ ಹೇಳುವುದಕ್ಕೆ ಬಯಸುತ್ತೇನೆ, ಏನೆಂದರೆ ನಾನು ಹಿಂದಿನ ಸಲ ಡೆಲ್ಲಿಗೆ ಹೋಗಿದ್ದಾಗ ಶ್ರೀ ಪ್ರಣಬ್ ಮುಖರ್ಜಿಯವರನ್ನು ಭೇಟಿಯಾಗಿ ಹಣಕಾಸಿನ ವಿಚಾರದಲ್ಲಿ ನಾವು ಚರ್ಚೆ ಮಾಡುತ್ತಿದ್ದಾಗ ನಾನು ಕೇಳಿದೆ, ಈಗ ನೀವು ಕೂಡ ಆರ್ಥಿಕ ವಿಷಯಗಳ ಬಗ್ಗೆ ಏಕಾನಾಮಿ ಪೆಂಪಕ್ಸ್ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೀರಲ್ಲ? ಎಂದು, ಅವಾಗ ಅವರು You are the pace setter. ಎಂದು ಹೇಳಿದರು. ಆದರೆ ಮಾನ್ಯ ಮೊಯಿಲಿಯವರೇ ಇದು ನಿಮಗೆ ಸ್ಟಿಂಕ್ ಆಗಿ ಕಾಣುತ್ತಿದೆ. ಅವರು ಮಾತನಾಡುತ್ತಾ ಇದರಿಂದ ಒಂದು ವರ್ಷಕ್ಕೆ ಒಂದು ಲಕ್ಷ ಎರಡು ಲಕ್ಷ ರೂಪಾಯಿ ಖರ್ಚಾಗಬಹುದು ಎಂದು ಹೇಳಿದರು. ನಿಮ್ಮ ತಿಳುವಳಿಕೆಗಾಗಿ ಹೇಳುತ್ತಿದ್ದೇನೆ, ಏನೆಂದರೆ ಇದರ ಒಂದು ಸಭೆ ಹಿಂದಿನ ಮುಖ್ಯಮಂತ್ರಿಗಳ ಹೋಮ್ ಆಫೀಸ್ ಅಂತ ಇತ್ತಲ್ಲ.

ಅದಕ್ಕೆ ಆವಾಗ ತಾವು ಈ ರಾಜ್ಯದ ಅರ್ಥಮಂತ್ರಿಗಳಾಗಿ ಎಷ್ಟು ಖರ್ಚುಮಾಡಿದ್ದೀರಿ ಎಂಬುದಾಗಿ ನಾನು ಕೇಳುತ್ತೇನೆ. ಇದು ಬಹಳ ಖರ್ಚು ಎಂಬುದಾಗಿ ತಾವು ತಿಳಿದುಕೊಂಡಿದ್ದೀರಾ, ಆದರೆ ಆಗ ೨೫-೩೦ ಲಕ್ಷ ರೂಪಾಯಿಗಳನ್ನು ನೀವು ಅರ್ಥಮಂತ್ರಿಗಳಾಗಿ ಖರ್ಚು ಮಾಡಿದ್ದೀರಲ್ಲಾ, ಅದು ಅನಾವಶ್ಯಕ ಖರ್ಚು ಎಂಬುದಾಗಿ ತಮಗೆ ಗೊತ್ತಿರಲಿಲ್ಲವೇ? ಅದು ಜನೋಪಯೋಗಿ ಕ್ರಮ ಏನು? ಇದಕ್ಕೆ ಒಂದು ವರ್ಷಕ್ಕೆ ಆಗುವ ಒಂದು ಲಕ್ಷ ಅಥವಾ ಒಂದೂವರೆ ಲಕ್ಷ ರೂಪಾಯಿಗಳ ಖರ್ಚಿಗೆ ತಾವು ಕಣ್ಣು ಬಿಡುತ್ತೀರಾ. ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದಿರಲ್ಲ ಆ ಕಟ್ಟಡಕ್ಕೆ ಅಲ್ಲಿಗೆ ನಿಮ್ಮನ್ನೂ ಕರೆದುಕೊಂಡು ಹೋಗುತ್ತೇನೆ. ಅದನ್ನು ನೀವು ನೋಡಬೇಕು ಅಲ್ಲಿರತಕ್ಕಂತಹ ಹೋಂ ಆಫೀಸ್ ಅಮೇರಿಕದ ಅಧ್ಯಕ್ಷರ ಹೋಂ ಆಫೀಸ್ ಕೂಡ ಈ ರೀತಿ ಇರಲಿಕ್ಕಿಲ್ಲ. ಅದು ಒಂದು ಪ್ರವಾಸಿ ಕೇಂದ್ರ, ಆ ಹೋಂ ಆಫೀಸ್.

ಶ್ರೀ ಬಿ.ಎಸ್. ಯಡಿಯೂರಪ್ಪ—ಆ ರೀತಿ ಹೇಳಿ ನಮ್ಮ ಬಾಯಲ್ಲಿ ನೀರು ಬರುವಹಾಗೆ ಮಾಡಿದರಲ್ಲ. ವಿವರಣೆಯನ್ನು ದಯಮಾಡಿ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಒಂದು ಪ್ರವಾಸಿಗರ ಆಕರ್ಷಣೀಯ ಕೇಂದ್ರ.

ಶ್ರೀ ಎಂ. ರಘುಪತಿ.—ಅದನ್ನು ನನಗೆ ಕೊಟ್ಟುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಕೊಡಬಹುದು. ಆದರೆ ಅದನ್ನು ಯಾವ ರೀತಿ ಉಪಯೋಗ ಮಾಡಬಹುದೆಂಬುದು ನಿಮಗೆ ಗೊತ್ತಿಲ್ಲವಲ್ಲ. ೨೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಹೋಂ ಆಫೀಸ್ ಆಯಿತು. ಪ್ರಥಮದಲ್ಲಿ ಇಡೀ ನಮ್ಮ ಭಾರತದಲ್ಲಿ ಹೆಸರಾದಂತಹ ಜನರನ್ನು ಸೇರಿಸಿ ಒಂದು ಮೀಟಿಂಗ್‌ನ್ನು ಮಾಡಿವೆ. ಅದಕ್ಕೆ ಆಗತಕ್ಕಂತಹ ಖರ್ಚು ಒಂದು ಲಕ್ಷವಾಗಬಹುದು. ಅಥವಾ ಒಂದೂವರೆ ಲಕ್ಷ ರೂಪಾಯಿಗಳಾಗಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ಬಜೆಟ್ಟಿನಲ್ಲಿ ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಇರಬಹುದು. ಅಧ್ಯಯನಕ್ಕಾಗಿ ಹಾಗೂ ವಿಶೇಷ ಅಧ್ಯಯನಕ್ಕಾಗಿ ಅಷ್ಟನ್ನು ಇಟ್ಟಿದ್ದೇವೆ. ಆದರೆ ಈ ಒಂದು ಹೋಂ ಆಫೀಸಿಗೆ ನೀವು ಅರ್ಥಮಂತ್ರಿಗಳಾಗಿ ಮಂಜೂರಾತಿ ಕೊಟ್ಟಿದ್ದಿರೋ ಅಥವಾ ನಿಮ್ಮ ಮಂಜೂರಾತಿ ಇಲ್ಲದೇ ಹಣ ಖರ್ಚಾಯಿತೋ ? ಆದ್ದರಿಂದ ನಾನು ಹೇಳುತ್ತೇನೆ, ಸರ್ಕಾರ ತಪ್ಪು ಮಾಡಿದರೆ ನೀವು ಸರಿಯಾಗಿ ಬಡಿಯಿರಿ. ನಾನು ಅದರ ಬಗ್ಗೆ ವಿರೋಧ ಮಾಡುವುದಿಲ್ಲ. ಆದರೆ ತಪ್ಪು ಮಾಡಲಿಕ್ಕೂ ಅವಕಾಶ ಕೊಡದೆ, ತಪ್ಪು ಮಾಡುವುದಕ್ಕಿಂತ ಮೊದಲೇ ಬಡಿಯುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ಅದಕ್ಕಾಗಿ ನಾನು ವಿರೋಧ ಮಾಡುತ್ತಿದ್ದೇನೆ. ಯೋಗ್ಯವಾದ ಟೀಕೆಯನ್ನು ಮಾಡಿ. ಅದು ನಿಮ್ಮ ಧರ್ಮ. ನಿಮ್ಮ ಕರ್ತವ್ಯ. ಆ ಕೆಲಸವನ್ನು ನೀವು ಮಾಡಿ. ಆಗ ನಿಮ್ಮನ್ನು ಗೌರವಿಸುತ್ತೇನೆ. ಇದರಲ್ಲಿ ಒಂದು ಮೀಟಿಂಗ್‌ನ ಖರ್ಚು, ಹಿಂದಿನ ಮುಖ್ಯ ಮಂತ್ರಿಗಳು ಇಲ್ಲಿಂದ ರಾಮನಗರಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಿ ಬಂದು ಮಾಡುತ್ತಿದ್ದರಲ್ಲ, ಅಷ್ಟೂ ಆಗುವುದಿಲ್ಲ. ಆನೇಕಲ್ಲಿನಲ್ಲಿ ಒಂದು ಕಾರ್ಯಕ್ರಮ ಇದ್ದರೆ ಇಲ್ಲಿಂದ ಆನೇಕಲ್ಲಿಗೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಬೇಕು ಪೆಟ್ರೋಲ್ ಖರ್ಚು ಇರಲಿ. ಹೆಲಿಕ್ಯಾಪ್ಟರ್ ಜೊತೆಗೆ ಕಾರೂ ಹೋಗಬೇಕು. ಅದೂ ೯ ಲಕ್ಷ ರೂಪಾಯಿ ಕಾರು. ಏಕೆಂದರೆ ಅಲ್ಲಿ ಓಡಾಡುವುದಕ್ಕೆ. ಅಲ್ಲಿ ಬೇರೆ ಕಾರಿನಲ್ಲಿ ಓಡಾಡುವುದಕ್ಕಾಗುವುದಿಲ್ಲ. ಸರ್ಕಾರದ ವೆಚ್ಚದ ಬಗ್ಗೆ ಇವತ್ತು ನಿಮಗೆ ಅಷ್ಟೊಂದು ಚಿಂತೆಯಾಗುತ್ತಿದೆ. ಅದು ಯಾವ ಹೊತ್ತಿನಲ್ಲಿ ಆಗಬೇಕಾಗಿತ್ತೋ ಆ ಹೊತ್ತಿನಲ್ಲಿ ಆಗಲಿಲ್ಲ. ಅದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ಸಿಟ್ಟುಮಾಡಿಕೊಳ್ಳಬೇಡಿ. ಹೇಳುವಂತಹ ಪ್ರಸಂಗ ಬಂತು ಅದಕ್ಕೆ ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ —ತಿಂಕ್ ಟ್ಯಾಂಕ್ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದೆ. It is a question of propriety. ಏಕೆಂದರೆ ಆ ಒಂದು ವಿಚಾರ ಇಲ್ಲಿ ಸ್ಟಿಂಕಿಂಗ್ ಟ್ಯಾಂಕ್ ಏನೋ ಎಂದು ಆ ಒಂದು ವಿಚಾರ ಇಲ್ಲಿ ಪ್ರಸ್ತಾಪವಾಯಿತು. Stinking Tank, there is no positive statement as such ಏಕೆಂದರೆ ನಾನು ಮಾತನಾಡುವಾಗ ಆ ಒಂದು ಅಭಿಪ್ರಾಯವನ್ನು ಕೊಟ್ಟಿದ್ದೇನೆಂದು ತಾವು ಹೇಳುತ್ತಿದ್ದೀರಿ, ಆದರೆ ಅದರ ವ್ಯಕ್ತಿಗಳ ಬಗ್ಗೆಯಾಗಲೀ, ಮತ್ತೆ

ಅದರ ಬೇಸಿಕ್ ಇನ್ವಾಲ್‌ವ್‌ಮೆಂಟ್ ಬಗ್ಗೆಯಾಗಲೀ ನಾನು ಹೇಳಲಿಲ್ಲ. ಬೇಕಾದರೆ ರೆಕಾರ್ಡನ್ನು ತೆಗೆಸಿ ನೋಡಿ. no doubt. It was mentioned here as think tank. ಇದಕ್ಕೆ ಕೆಲವೇ ವ್ಯಕ್ತಿಗಳನ್ನು ಉಪಯೋಗ ಮಾಡಿಕೊಂಡಿದ್ದಕ್ಕಾಗಿ ಮತ್ತು ಅದಕ್ಕೆ ಪ್ರತ್ಯೇಕ ಸಚಿವಾಲಯವನ್ನು ಮಾಡಿದ ಬಗ್ಗೆ ಈ ವಿಚಾರ ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಅದರಲ್ಲಿ ಅಭಿಪ್ರಾಯವನ್ನು ಕೊಡ ತಕ್ಕಂತಹ ಜನರ ಬಗ್ಗೆ ಯಾಗಲೀ, ಆ ವ್ಯಕ್ತಿಗಳ ಬಗ್ಗೆಯಾಗಲೀ ಹೆಚ್ಚು ಅಂದರೆ ಶ್ರೀ ಕೊರಿಯನ್ ಮತ್ತೆ ಶ್ರೀ ಎಲ್. ಸಿ. ಜೈನ್ ರವರುಗಳನ್ನು ಬಿಟ್ಟರೆ ಬಾಕಿಯವರ ವ್ಯಕ್ತಿತ್ವದ ಬಗ್ಗೆ ಪ್ರಶ್ನೆ ಮಾಡಿಲ್ಲ. ಅವರ ಯೋಗ್ಯತೆಯ ಬಗ್ಗೆ ಪ್ರಶ್ನೆ ಮಾಡಿಲ್ಲ. ದಯಮಾಡಿ ರೆಕಾರ್ಡನ್ನು ತಾವು ತೆಗೆಸಿ ನೋಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣ ಕೊಟ್ಟಿದ್ದಾರೆ ಸಂತೋಷ. ಸ್ಟಿಂಕ್ ಟ್ಯಾಂಕ್ ಐಡಿಯ ಎಂಬ ಬಗ್ಗೆ ಪುನರಾವರ್ತನೆ ಮಾಡಿದ್ದೀರಿ. ಆ ಸ್ಪಷ್ಟೀಕರಣ ವನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಪ್ರತ್ಯೇಕವಾದ ಸಚಿವಾಲಯವನ್ನು ಮಾಡಿಲ್ಲ. ಅದರ ಕಾರ್ಯದರ್ಶಿ ಯಾರು ಗೊತ್ತಾ ? ಅದರ ಸದಸ್ಯ ಕಾರ್ಯದರ್ಶಿ ನಮ್ಮ ಸಚಿವಾಲಯದಲ್ಲಿರತಕ್ಕಂತಹ ಹೆಚ್ಚಿನ ಮುಖ್ಯ ಕಾರ್ಯದರ್ಶಿ. Member Secretary is our Additional Chief Secretary, who is also in charge of Planning Dept. ಒಬ್ಬ ಸಿಪಾಯಿಯನ್ನು ಕೂಡ ಇದಕ್ಕೆ ಪ್ರತ್ಯೇಕ ವಾಗಿ ಅಪಾಯಿಂಟ್‌ಮೆಂಟ್ ಮಾಡಿಲ್ಲ. ಅದರ ಮೀಟಿಂಗ್ ಎಲ್ಲಿ ಮಾಡುವುದು ಅಂದರೆ ನಮ್ಮ ಸಚಿ ವಾಲಯದಲ್ಲಿರತಕ್ಕಂತಹ ಕಮಿಟಿ ರೂಮಿನಲ್ಲಿ. ಆದ್ದರಿಂದ ಇದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಬೇರೆ ಇಲ್ಲ. ಎಲ್ಲ. ನಮ್ಮ ಸಚಿವಾಲಯದಲ್ಲಿರತಕ್ಕಂತಹ ಅಧಿಕಾರಿಗಳೇ ನೋಡಿಕೊಳ್ಳುತ್ತಾರೆ. ಆದ್ದರಿಂದ ಇದರ ಬಗ್ಗೆ ಯಾರೂ ಆ ರೀತಿ ಸಂಶಯ ಪಡಲು ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಷ್ಟು ಭರವಸೆಯನ್ನು ಕೊಟ್ಟರೆ ಸರಿ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಅಂತ ಹೇಳಿದ್ದೇನೆ. ತಾವು ಕುಳಿತುಕೊಳ್ಳಿ. ಮಧ್ಯೆ ಮಧ್ಯೆ ನಿಂತರೆ ಕಷ್ಟವಾಗುತ್ತದೆ. ಯಾರೋ ಒಬ್ಬ ಬುಚ್ ಅನ್ನು ಕರೆದುಕೊಂಡು ಬರುತ್ತಾರೆಂದು ಹೇಳಿದ್ದೀರಿ. ಹೌದು. ಅವರು ಯಾರು ಎಂಬುದು ಗೊತ್ತಾ ? ಬಹಳ ಸೀನಿಯರ್ ಐ. ಎ. ಎಸ್. ಆಫೀಸರ್ ಇದ್ದಾರೆ. ಅವರು ದೆಹಲಿ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ವೈಸ್ ಛೇರ್ಮನ್ ಆಗಿದ್ದರು. ಕೇಂದ್ರ ಸರ್ಕಾರದವರೇ ನೇಮಕ ಮಾಡಿದ್ದಾರೆ. ಅವರು ಆ ಅಧಿಕಾರದಲ್ಲಿದ್ದಾಗ ಅತ್ಯಂತ ಉತ್ತಮವಾದಂತಹ ಕೆಲಸ ಮಾಡಿದವರು ಎಂಬ ಹೆಸರನ್ನು ತೆಗೆದುಕೊಂಡಿದ್ದಾರೆ. ಅವರು ಐ.ಎ.ಎಸ್. ಆಫೀಸರ್ ಆಗಿರ ಬಹುದು. ಅರ್ಬನ್ ಡೆವಲಪ್‌ಮೆಂಟ್‌ನಲ್ಲಿ ವಿಶೇಷ ಪಾಂಡಿತ್ಯವನ್ನು ಹೊಂದಿ ದವರಾಗಿದ್ದಾರೆ. He has specialised....ಇವತ್ತು ಅವರು ಸೆಂಟ್ರಲ್ ಅರ್ಬನ್ ಡೆವಲಪ್‌ಮೆಂಟ್ ಇನ್ಸಿಟಿಟ್ಯೂಟ್‌ನ ಡೈರೆಕ್ಟರ್ ಆಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮಲ್ಲಿ ಅಂತಹವರು ಯಾರೂ ಇರಲಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇರಬಹುದು ಅರ್ಬನ್ ಡೆವಲಪ್‌ಮೆಂಟ್‌ನಲ್ಲಿ ಈ ರೀತಿಯ ಅನು ಭವ ಇದ್ದಂತಹವರು ನನಗೆ ಯಾರೂ ಸಿಗಲಿಲ್ಲ. ನೀವು ಬೇಕಾದರೆ ಸೂಚನೆ ಮಾಡಿ. ಇವರನ್ನೇನೂ ಪರ್ಮನೆಂಟ್ ಆಗಿ ತೆಗೆದುಕೊಂಡಿಲ್ಲ. ಹಿಂದೆ ದೆಹಲಿಗೆ ಹೋಗಿದ್ದಾಗ ನಾನು ಅವರನ್ನು ಕರೆಸಿದ್ದೆ. ೪-೫ ದಿವಸಗಳ ಮಟ್ಟಿಗೆ ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವೇ ಎಂಬುದಾಗಿ ಕೇಳಿದೆ. ಅದಕ್ಕವರು ಒಪ್ಪಿ ೪-೫ ದಿವಸಗಳ ಮಟ್ಟಿಗೆ ಬೆಂಗಳೂರಿಗೆ ಬಂದಿದ್ದರು. ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದ ಛೇರ್ಮನ್‌ರವರನ್ನು ಮತ್ತು ಬೆಂಗಳೂರು ನಗರದ ಎಂ.ಎಲ್.ಎ. ಗಳನ್ನು ಭೇಟಿಯಾಗಿದ್ದರು. ಆಮೇಲೆ ಬೀದಿಯ ಸಮಸ್ಯೆಯನ್ನು ನೋಡಿದರು. ೪-೫ ದಿವಸಗಳಾದ ಮೇಲೆ ವಾಪಸ್ಸು ಹೋಗುತ್ತಾರೆ. ಅದು ತಪ್ಪೇ ? ಅವರಿಗೆ ದುಡ್ಡು ಎಷ್ಟು ಕೊಟ್ಟಿದ್ದೇವೆ ಗೊತ್ತಾ, ಹೋಗಿ ಬರುವ ಖರ್ಚು ಅಷ್ಟೆ. ಬೇರೆ ಒಂದು ಕಾಸೂ ಅವರಿಗೆ ಕೊಟ್ಟಿಲ್ಲ. ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಬಂದು ಹೋಗುವ ಖರ್ಚು, ಅವರು ಇಲ್ಲಿಗೆ ಬಂದಾಗ ಸ್ಟೇಟ್ ಗೆಸ್ಟ್ ಎಂಬುದಾಗಿ ತೀರ್ಮಾನ ಮಾಡಿದ್ದೇವೆ. ಅವರಿಗೆ ದಿವಸಕ್ಕೆ ೨೦೦ ರೂಪಾಯಿಗಳನ್ನೂ ಕೊಟ್ಟಿಲ್ಲ. ಒಂದು ರೂಪಾಯಿಯನ್ನೂ ಹೆಚ್ಚು ಕೊಟ್ಟಿಲ್ಲ. ನಾವು ಕೇಳಿದ್ದಕ್ಕೆ ಅವರೇ ಮುಂದೆ ಬಂದು ಮಾಡುತ್ತೇನೆಂದು ಹೇಳಿದಾಗ ಅದನ್ನು ಉಪಯೋಗ ಮಾಡಿಕೊಳ್ಳು ವುದು ತಪ್ಪೇ ಅಂತ ನಾನು ಕೇಳುತ್ತೇನೆ.

ಈ ಸಂದರ್ಭದಲ್ಲಿ ನಾನು ಈ ಒಂದು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಅಲ್ಲೇ ಇರತಕ್ಕಂಥಾ ಇತರೇ ಮಾನ್ಯ ಸ್ನೇಹಿತರುಗಳಿಗೆ ಹೇಳಬಯಸುತ್ತೇನೆ. ಹಿಂದುಳಿದವರ ಬಗ್ಗೆ ಭಾಷಣ ಮಾಡುವಾಗ ಬಹಳವಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ಯಾವರೀತಿ ಮಾತನಾಡುತ್ತಿದ್ದರು ಎಂದರೆ ಹಿಂದುಳಿದ ವರ್ಗದವರ ಉದ್ಧಾರ ಅದು ತಮಗೇ ಸೇರಿದಂಥಾ ಒಂದು ದೊಡ್ಡ ಜವಾಬ್ದಾರಿ ಅನ್ನುವ ರೀತಿಯಲ್ಲಿ ಮಾತನಾಡುತ್ತಿದ್ದರು. ಆದರೆ ಇಷ್ಟು ದಿವಸದವರೆಗೆ ಅವರ ಸುಧಾರಣೆ ಎಷ್ಟು ಪ್ರಮಾಣದಲ್ಲಿ ಆಗಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಆಗಿಲ್ಲ ಅನ್ನುವ ಮಾತನ್ನು ಹೇಳುತ್ತೇನೆ. ನಾನು ಕಳೆದ ಮೂರು ವರ್ಷಗಳ ಭಾಷಣಗಳನ್ನೂ ಸಹ ತೆಗೆದು ನೋಡಿದ್ದೇನೆ. ಮಂಡಲ್ ಕಮೀಷನ್ ಅಪಾಯಿಂಟ್ ಆದುದ್ದು ಕೇಂದ್ರ ಸರ್ಕಾರದಲ್ಲಿ ಜನತಾ ಸರ್ಕಾರ ಇದ್ದಾಗ. ಹಿಂದುಳಿದವರ ಬಗ್ಗೆ ಇವರಿಗೆ ಎಷ್ಟು ಕಳಕಳಿ ಇತ್ತು ಅನ್ನುವುದನ್ನು ಈಗ ತಮಗೆ ನಾನೇನೂ ಹೇಳಬೇಕಾಗಿಲ್ಲ. ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಒಂದುವೇಳೆ ನನ್ನದೂ ಕೂಡ ಒಂದು ತಪ್ಪು ತಿಳುವಳಿಕೆ ಆಗಿರಬಹುದು. ಒಂದುವೇಳೆ ಅವರ ಬಗ್ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಕಳಕಳಿ ಇದ್ದಿದ್ದರೆ ನಿಮ್ಮ ಹಿಂದಿನ ಭಾಷಣದಲ್ಲಿ ನಿಮ್ಮ ಸರ್ಕಾರ ಇದ್ದಾಗಲೇ ಈ ಮಂಡಲ್ ಕಮೀಷನ್‌ನವರು ಏನು ಶಿಫಾರಸ್ಸು ಮಾಡಿದ್ದರೋ ಆ ಶಿಫಾರಸ್ಸನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಳ್ಳಬೇಕು ಎನ್ನುವ ಮಾತನ್ನು ನೀವೇಕೆ ಹೇಳಲಿಲ್ಲಾ ಅನ್ನುವ ಮಾತನ್ನು ನಾನು ಕೇಳುತ್ತೇನೆ ? ಆ ಮಾತಿಗೆ ನಿಮಗೆ ಬರ ಬಂತೇನೋ. ಅನೇಕ ರೀತಿಯಲ್ಲಿ ಆವಾಗ ಇವರ ಬಗ್ಗೆ ತಾವು ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಏನು ಪ್ರಯೋಜನವಾಯಿತು ? ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಒಪ್ಪಿಸಬೇಕಾಗಿತ್ತು ಆದರೆ ಆ ಕೆಲಸ ಮಾಡಲಿಲ್ಲ ಈಗ ಹೇಳಬೇಕಾದಂಥಾ ಕಾಲ ಬಂದಿದೆ. ಆ ಬಗ್ಗೆ ಈ ಸರ್ಕಾರ ಮುತುವರ್ಜಿವಹಿಸಿ ಕೆಲಸ ಮಾಡುತ್ತದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಲ್ಯಾಂಡ್ ಆರ್ಮಿ ವಿಷಯ. ಮಾನ್ಯ ಸದಸ್ಯರಿಗೆಲ್ಲಾ ಈ ವಿಷಯ ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಅದು ಏನೆಂದರೆ, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥಾ ನಿರುದ್ಯೋಗವನ್ನು ನಿವಾರಣೆ ಮಾಡತಕ್ಕಂಥಾ ಕೆಲಸ ಈ ಲ್ಯಾಂಡ್ ಆರ್ಮಿಯ ಜವಾಬ್ದಾರಿ. ಪ್ರತಿ ಜಿಲ್ಲೆಯಲ್ಲೂ ಇದರ ಒಂದು ಯೂನಿಟ್ ಇರುತ್ತದೆ. ಇನ್ನು ಮುಂದೆ ಎನ್.ಆರ್.ಇ.ಪಿ. ಕಾರ್ಯಕ್ರಮವಾಗಲಿ ಅಥವಾ ಐ.ಆರ್.ಡಿ.ಪಿ. ಪ್ರೋಗ್ರಾಂನ ಒಂದು ಕಾರ್ಯಕ್ರಮವಾಗಲಿ ಈ ಲ್ಯಾಂಡ್ ಆರ್ಮಿ ಮೂಲಕ ನಡೆಯಬೇಕು. ಮೊದಲು ಈ ಪ್ರೋಗ್ರಾಂನಲ್ಲಿ ಇಲಾಖೆಗಳ ಮುಖಾಂತರ ಏನು ಕೆಲಸ ನಡೆಯುತ್ತಿತ್ತೋ ಈ ಬಾಬಿನಲ್ಲಿ ಹೇರಳವಾಗಿ ಏನು ಹಣ ಖರ್ಚು ಮಾಡುತ್ತಿದ್ದರೋ ಅದು ಯಾರ ಜೇಬಿಗೆ ಹೋಗುತ್ತಿತ್ತೋ ಗೊತ್ತಿಲ್ಲ ತಮಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ, ನಾರ್ತ್ ಕೆನರಾ ಜಿಲ್ಲೆಯಲ್ಲಿ ಈ ಬಗ್ಗೆ ಒಂದು ಕೋಟಿ ರೂಪಾಯಿ ಖರ್ಚಾಗಿದೆ, ಆದರೆ ಅಲ್ಲಿ ಆ ಕೆಲಸ ಅರ್ಧಮರ್ಧವಾಗಿದೆಯೇ ವಿನಾ ಪೂರ್ಣವಾಗಿಲ್ಲ. ಆ ಕೆಲಸವನ್ನು ಪೂರ್ಣಮಾಡಬೇಕಾದರೆ ಇನ್ನೂ ಒಂದು ಕೋಟಿ ರೂಪಾಯಿ ಬೇಕಾಗಿದೆ. ಒಂದು ಸಣ್ಣ ರಸ್ತೆ ಕೆಲಸವಾಗಲಿ. ಒಂದು ಕಾಲುವೆ ಕೆಲಸವಾಗಲಿ ಒಂದು ಕೆರೆ ಹೂಳು ತೆಗೆಸುವ ಕೆಲಸವಾಗಲಿ, ನಮ್ಮ ಸರ್ಕಾರದ ನೀತಿ ಏನು ಇದೆ ಎಂದರೆ, ಅದು ಎಕನಾಮಿಕೇ ಆಗಿರಲಿ ಅನ್ ಎಕನಾಮಿಕೇ ಆಗಿರಲಿ ಕೆರೆಯಲ್ಲಿರುವ ಹೂಳನ್ನು ತೆಗೆಸುತ್ತೇವೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಈ ಲ್ಯಾಂಡ್ ಆರ್ಮಿಗೆ ಮತ್ತೆ ಪುನಃಚ್ಛೇತನ ಕೊಟ್ಟಿದ್ದೀರಿ. ಹಿಂದೆ ಇದು ಎಷ್ಟೋ ಸಾರಿ ಫೈಲ್ಯೂರ್ ಆಗಿದೆ. ಆದುದರಿಂದ ನಾನು ಹೇಳುವುದೇನೆಂದರೆ, ಈ ಲ್ಯಾಂಡ್ ಆರ್ಮಿ ಬಿಟ್ಟು ಇದಕ್ಕಾಗಿ ರೆಗ್ಯುಲರೈಸ್ ಆದಂಥ ಡಿಪಾರ್ಟ್‌ಮೆಂಟ್ಸ್ ಏನು ಇವೆ, ಅದಕ್ಕೆ ಮತ್ತಷ್ಟು ಹೆಚ್ಚು ಹಣವನ್ನು ಕೊಟ್ಟು ಮಾಡಿಸಿದರೆ ಉತ್ತಮವಲ್ಲವೇ, ಇದನ್ನು ಪುನರ್ ಪರಿಶೀಲಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಎರಡು ವಿಷಯ ಇದೆ, ಒಂದನೇದು, ಏನೆಂದರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ನಿರುದ್ಯೋಗಿಗಳು ಏನು ಇದ್ದಾರೆ, ಅವರು ತಮ್ಮ ಶಿಕ್ಷಣವನ್ನು ಮುಗಿಸಿರಬಹುದು ಇಲ್ಲವೇ ಮೆಟ್ರಿಕ್ಯುಲೇಷನ್‌ನಲ್ಲಿ ಫೇಲ್ ಆಗಿರಬಹುದು, ಇಂಥಾವರು ಉದ್ಯೋಗ ಇಲ್ಲದೇ ಏನು ಇದ್ದಾರೆ ಅವರು ಇದರಲ್ಲಿ ಕೆಲಸ ಮಾಡಲಿಕ್ಕೆ ಸಿದ್ಧ ಇದ್ದರೆ ಅವರು ತಮ್ಮ ಹೆಸರನ್ನು ಅಲ್ಲಿ

ನೋಂದಾಯಿಸಬಹುದು. ಈ ತರಹ ಒಂದು ವ್ಯವಸ್ಥೆ ಮಾಡಿದರೆ ಇದರಿಂದ ಏನಾಗುತ್ತದೆ ಎಂದರೆ, ಸಣ್ಣಪುಟ್ಟ ಕೆಲಸಗಳು ಏನು ಇವೆ ಅಂದರೆ ಈ ಅಫರ್‌ಸ್ಟೇಷನ್ ತರಹ ಕೆಲಸಗಳು ಏನಿವೆ, ಇವುಗಳನ್ನು ಕಂಟ್ರಾಕ್ಟ್‌ದಾರರಿಗೆ ಕೊಡುವುದು ತಪ್ಪುತ್ತದೆ ಇಲ್ಲದೇ ಹೋದರೆ ಆ ಕಂಟ್ರಾಕ್ಟ್‌ದಾರರಿಗೆ ದುಡ್ಡು ಹೆಚ್ಚು ಖರ್ಚಾಗುತ್ತದೇ ವಿನಾ ಯಾವ ಜನರಿಗೆ ಹಣ ಮುಟ್ಟಬೇಕೋ ಆ ಜನರಿಗೆ ಮುಟ್ಟುವುದಿಲ್ಲ. ಆದುದರಿಂದ ನಾವು ಈ ಕಂಟ್ರಾಕ್ಟ್‌ದಾರನ್ನು ತೆಗೆಯಬೇಕು ಎನ್ನುವ ಉದ್ದೇಶವಿಟ್ಟುಕೊಂಡೆ ಕೆಲಸಗಳನ್ನು ಸರ್ಕಾರದ ಖರ್ಚಿನಲ್ಲಿಯೋ ಲ್ಯಾಂಡ್ ಆರ್ಮಿ ಮುಖಾಂತರ ಮಾಡಿದರೆ ೧೦೦ಕ್ಕೆ ೯೦ ರಷ್ಟು ಭಾಗದಷ್ಟು ಹಣ ನೇರವಾಗಿ ಆ ಜನರಿಗೆ ಮುಟ್ಟುತ್ತದೆ ಅನ್ನುವ ಉದ್ದೇಶ ಇಟ್ಟುಕೊಂಡು ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ೧೯೫೨ನೇ ಇಸವಿಯಲ್ಲೇ ಸೋಷಿಯಲಿಸ್ಟ್ ಮ್ಯಾನಿಫೆಸ್ಟೋನಲ್ಲಿ ಈ ಲ್ಯಾಂಡ್ ಆರ್ಮಿ ಅಸ್ತಿತ್ವಕ್ಕೆ ಬಂತು. ಅದನ್ನು ಆವಾಗ ಏತಕ್ಕೆ ಅಳವಡಿಸಲಿಲ್ಲ ಎಂದರೆ ಅಷ್ಟರಲ್ಲೇ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅನ್ನುವುದು ಅಸ್ತಿತ್ವಕ್ಕೆ ಬಂದಿದ್ದುದರಿಂದ ಇದನ್ನು ಅಳವಡಿಸುವ ಪರಿಸ್ಥಿತಿ ಬರಲಿಲ್ಲ. ಇದಾಗಿ ೧೫ ವರ್ಷ ಉರುಳಿತ? ಇದನ್ನು ಆಗಲೇ ಅಳವಡಿಸಿದ್ದರೆ, ಈ ಐಡಿಯಾವನ್ನು ಆಗಲೇ ಕನ್ಸೀವ್ ಆಗಿ ಮಾಡಿಬಿಟ್ಟಿದ್ದರೆ ಇದುವರೆಗೆ ಎಷ್ಟೋ ಮ್ಯಾನ್‌ಪವರ್ ಅನ್ನು ಉಳಿಸಬಹುದಾಗಿತ್ತು. ಆವಾಗ ಇದನ್ನು ಏತಕ್ಕೆ ಮಾಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ನಾನು ಮಾನ್ಯ ಕೆ. ಎಚ್. ರಂಗನಾಥ್‌ರವರಿಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಆಗಲೇ ಇದಕ್ಕೆ ಅವಕಾಶ ಕೊಟ್ಟು ಜಾರಿಗೆ ತಂದಿದ್ದರೆ ಚೆನ್ನಾಗಿತ್ತು. ಅಷ್ಟರಲ್ಲೇ ಚುನಾವಣೆ ಬಂತು...

ಶ್ರೀ ಕೆ.ಹೆಚ್. ರಂಗನಾಥ್.—೧೯೭೧ರಲ್ಲಿ ಬಜೆಟ್ ಭಾಷಣವನ್ನು ತಾವೇ ಮಾಡಿದಿರಿ. ಅದರಲ್ಲಿ ಅಕ್ಷಾಯಿಯನ್ನು ತೆಗೆಯುತ್ತೇವೆ ಅಂತ ಹೇಳಿದಿರಿ. ಆವಾಗ ಲ್ಯಾಂಡ್ ಆರ್ಮಿಯೂ ಕೂಡ ಅಸ್ತಿತ್ವಕ್ಕೆ ಬಂತು. ಆವಾಗಲೇ ಮೋಹನ್‌ಕುಮಾರ ಮಂಗಳಂ ಅವರನ್ನು ಡೈರಕ್ಟರ್ ಆಗಿ ಮಾಡಿದಿರಿ. ಇದನ್ನು ಆಗಲೇ ಜಾರಿಗೆ ತಂದಿದ್ದರೆ ಚೆನ್ನಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಆವಾಗಲೇ ಈ ಐಡಿಯಾವನ್ನು ಕನ್ಸೀವ್ ಮಾಡಿದ್ದರೆ ಚೆನ್ನಾಗಿತ್ತು ಸರಿ. ಆದರೆ ಇದನ್ನು ಕನ್ಸೀವ್ ಮಾಡುವವರು ಬೇರೆ ಇದ್ದರಲ್ಲಾ. ೧೯೭೧ರಲ್ಲಿ ಬಜೆಟ್ ಭಾಷಣದಲ್ಲಿ ನಾವು ಇದನ್ನು ಮಂಡಿಸಿದ್ದರೂ ಕೂಡ ಆ ಬಜೆಟ್ ಮಂಡನೆ ಆದ ೮ನೇ ದಿವಸದಲ್ಲೇ ನಾವು ರಾಜೀನಾಮೆ ಕೊಟ್ಟಿರುವುದು ತಮಗೆ ಗೊತ್ತುಂಟಲ್ಲಾ. ಆವಾಗಲೇ ಇದನ್ನು ಮುಂದುವರೆಸಿಕೊಂಡು ಹೋಗಿದ್ದರೆ ಚೆನ್ನಾಗಿತ್ತು ಆಗಲಿಲ್ಲ. ನಾವು ಆಗ ಈ ಐಡಿಯಾ ಮಾಡಿದ ಮೇಲೆ ಪ್ಲಾನಿಂಗ್ ಕಮೀಷನ್ನಿನವರು ಇಲ್ಲಿಗೆ ಒಂದು ಟೀಮ್ ಕಳುಹಿಸಿದರು. ಆಮೇಲೆ ಮಹಾರಾಷ್ಟ್ರದವರು ಇಲ್ಲಿಗೆ ಬಂದು ೧೦-೧೧ ದಿವಸ ಇದ್ದು ಇದರ ಕಾಪಿಯನ್ನು ಮಾಡಿಕೊಂಡು ಹೋದರು. ಆಮೇಲೆ ಇದು ಕಾರ್ಯಗತವಾಗಲಿಲ್ಲಾ. ಅದು ಏನೇ ಇರಲಿ. ನಮ್ಮ ಈ ರಾಜ್ಯಪಾಲರ ಭಾಷಣದಲ್ಲಿ ಒಂದು ಹೊಸ ನೀತಿಯನ್ನು ರೈತರ ಬಗ್ಗೆ ಪ್ರಸ್ತಾವನೆ ಮಾಡಿದ್ದೇವೆ. ತಮಗೆ ಹೇಳಬೇಕಾದರೆ ರೈತರ ಬಗ್ಗೆ ೧೯೮೧ರ ರಾಜ್ಯಪಾಲರ ಭಾಷಣದಲ್ಲಿ ತಾವು ಏನು ಮಾಡಿದ್ದೀರಿ ಅನ್ನುವುದನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದು ಈ ರೀತಿ ಇದೆ.

> "The problems which the Government had to face were not susceptible of immediat solutions as they had accumulated over several decades. My Government reacted in a quick and decisive manner and issued orders meeting the just demands of the farmers.

ಅದಾದಮೇಲೆ ಒಂದು ಪೀಸ್ ಆಫ್ ಅಡ್ವೈಸ್ ಕೊಟ್ಟರು. ಅದೇನೆಂದರೆ

> "Farmer as well as other sections of the community should realise that they are all segments of the society and that in a democracy, violent agitations have no place" ಎಂದು

ಇದನ್ನು ನಮ್ಮ ಕರ್ನಾಟಕದ ರೈತರು ಓದಿಲ್ಲ. ಓದಿದ್ದರೆ ನಿಜವಾಗಲೂ ಕೂಡ ಅವರು ವಯಲೆಂಟ್ ಆಗುತ್ತಿದ್ದರು.

ಒಬ್ಬ ಸದಸ್ಯರು.—ಅವರಿಗೆ ಇಂಗ್ಲೀಷ್ ಬರೋದಿಲ್ಲವಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಅವರು ಅದನ್ನು ಮುಟ್ಟಲಿಲ್ಲಾ ನಮ್ಮ ಸರ್ಕಾರ ಬಂದಮೇಲೆ ನಾವು ರೈತರ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅನ್ನುವುದನ್ನು ಹೇಳುತ್ತೇನೆ. ಈಗಾಗಲೇ ನಾವು ರೈತರ ಜೊತೆಯಲ್ಲಿ ಅವರ ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸಿದ್ದೇವೆ. ಅವರ ಸಮಸ್ಯೆ ಬಗ್ಗೆ ಎಷ್ಟೋ ವಿಷಯಗಳನ್ನು ನಾವು ತಿಳಿಯಲಿಕ್ಕೆ ಪ್ರಯತ್ನ ಮಾಡಿದ್ದೇವೆ, ಅವರ ಸಮಸ್ಯೆ ಬಗ್ಗೆ ಆದಷ್ಟು ಬೇಗ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

೫-೩೦ ಪಿ.ಎಂ.

ಇನ್ನು ವಿಶ್ವಕನ್ನಡ ಸಮ್ಮೇಳನವನ್ನು ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ಸುಮಾರು ೮-೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಒಂದು ದೊಡ್ಡ ನಿರ್ಣಯವನ್ನು ತೆಗೆದುಕೊಂಡಿದೆ. ನಾನು ಮಾತು ಮಾತಿಗೂ ಹಿಂದಿನ ಅರ್ಥ ಮಂತ್ರಿಗಳನ್ನು ಟೀಕೆ ಮಾಡುತ್ತೇನೆಂದು ಯಾರೂ ಅನ್ಯಥಾ ಭಾವಿಸಕೂಡದು. ಆದರೆ ಈ ರೀತಿಯಾಗಿ ಆಂಧ್ರದವರು ಮಾಡಿರಬಹುದು, ತಮಿಳುನಾಡಿನವರು, ಮಾಡಿರಬಹುದು ; ಆಂಧ್ರದವರಂತೂ ತೆಲುಗು ಸಮ್ಮೇಳನವನ್ನು ವಿದೇಶದಲ್ಲಿಯೇ ಮಾಡಿದರು ಎಲ್ಲಾ ಎಂ.ಎಲ್.ಎ ಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಸಮ್ಮೇಳನವನ್ನು ಮಾಡಿದರು. ನಾವು ನಮ್ಮ ಹಾಸಿಗೆ ಎಷ್ಟು ಉದ್ದ ಇದೆ ಅಷ್ಟು ಉದ್ದ ಕಾಲು ಚಾಚಬೇಕು. ವಿಶ್ವಕನ್ನಡ ಸಮ್ಮೇಳನವನ್ನು ಮಾಡಲು ನಾನು ವಿರೋಧ ಮಾಡುವುದಿಲ್ಲ. ಮಾಡಬೇಕು ಆದರೆ ಅತಿಯಾದ ಆಡಂಬರ, ವೈಭವ ಸರಿಯಲ್ಲ, ಅನಾವಶ್ಯಕವಾದ ಖರ್ಚು ಎಂದು ನಾನು ತಿಳಿಯುತ್ತೇನೆ. ಇದು ಅನಗತ್ಯವಾದುದು.

೧೯೮೧ನೇ ಇಸವಿಯಲ್ಲಿ ಲೋಕಸಭೆಯ ಚುನಾವಣೆಯ ಫಲಿತಾಂಶದ ಪರಿಣಾಮವಾಗಿ ಇವರ ಕೈಯಲ್ಲಿ ಅಧಿಕಾರ ಬಂತು. ೧೯೮೦ರಲ್ಲಿ ರಾಜ್ಯಪಾಲರು ಮಾಡಿದಂಥ ಭಾಷಣದಲ್ಲಿ 'ಆಡಳಿತ ಹಾಗೂ ಜನತೆಯ ನಡುವೆ ಇನ್ನಷ್ಟು ನಿಕಟ ಹಾಗೂ ಮಧುರ ಬಾಂಧವ್ಯವನ್ನು ''ಏರ್ಪಡಿಸುವ ಸಲುವಾಗಿ ಸರ್ಕಾರದ ಎಲ್ಲ ಮಟ್ಟಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ'' ಎಂದು ಹೇಳಿದ್ದಾರೆ. ಎಲ್ಲಿದೆ ಕನ್ನಡ ಭಾಷೆಯ ಜಾರಿ ? ಅದಕ್ಕಾಗಿ ನಾನು ಹೇಳಿದ್ದು ಕ್ವಾಲಿಟಿಯನ್ನು ನೋಡಬೇಕು ಎಂದು. ನಾವು ಈ ದಿಕ್ಕಿನಲ್ಲಿ ಕ್ರಮತೆಗೆದುಕೊಂಡಿದ್ದುದರಿಂದ ಫೆಬ್ರವರಿ ೧೫ ನೇ ತಾರೀಖಿನಿಂದ ಕನ್ನಡ ಆಡಳಿತ ಭಾಷೆಯಾಗಿ ಜಾರಿಯಲ್ಲಿ ಬಂದಿದೆ ಎಂದು ನಾನು ಹೇಳುತ್ತೇನೆ. ಇವತ್ತು ಮಲೆಯಾಳಿ ಮಾತೃಭಾಷೆಯಿರತಕ್ಕವರು ತಮಿಳು ಮಾತೃಭಾಷೆ ಇರತಕ್ಕವರು ಐಎಎಸ್ ಆಫೀಸರ್ಸ್‌ಯಾರಿದ್ದಾರೆ, ಅವರೂ ಸಹ ಕನ್ನಡದಲ್ಲಿ ಕಷ್ಟಪಟ್ಟು ನೋಟು ಬರೆಯುತ್ತಿದ್ದಾರೆ. ಅವರು ಸಹಿ ಕೂಡ ಕನ್ನಡದಲ್ಲಿ ಮಾಡುತ್ತಿದ್ದಾರೆ. ಅವರು ನಮ್ಮ ಈ ಒಂದು ಪ್ರಯತ್ನಕ್ಕೆ ಹೊಂದಿಕೊಂಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಪ್ರಿಷಿಯೇಟ್ ಮಾಡಬೇಕಾಗಿದೆ. ಕನ್ನಡದಲ್ಲಿ ಸರಿಯಾದ ಶಬ್ದಗಳು ದೊರೆಯದೇ ಇದ್ದಾಗ ಇಂಗ್ಲೀಷಿನಲ್ಲಿಯೂ ಬರೆಯಲು ಅವಕಾಶ ಇದೆ. ಇದು ನಾವು ಸ್ವಿಚ್ ಹಾಕಿದ ಹಾಗೆ ಅಲ್ಲ ಅನ್ನುವುದನ್ನು ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕನ್ನಡ ಆಡಳಿತ ಭಾಷೆಯಾಗಿ ಘೋಷಣೆ ಏನೋ ಆಗಿದೆ, ಆದರೆ ಕಾರ್ಯಗತ ಏನು ಮಾಡಿದ್ದೀರಿ ಎಂದು ನೋಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಘೋಷಣೆ ಮಾಡಿದಂತೆ ಕನ್ನಡ ಆಡಳಿತ ಭಾಷೆಯಾಗಿ ಜಾರಿಯಲ್ಲಿ ಬಂದಿದೆ. ಘೋಷಣೆ ಮಾಡಿ, ಕಾರ್ಯಗತ ಮಾಡದಿದ್ದರೆ ಜನ ನಗುತ್ತಾರೆ. ನಾವು ಹೇಳಿದ ಹಾಗೆ ಕನ್ನಡ ಇಂದು ಆಡಳಿತ ಭಾಷೆಯಾಗಿ ಜಾರಿಯಲ್ಲಿ ಬಂದಿದೆ. ಫೆಬ್ರವರಿ ೧೫ ರಿಂದ ಜಾರಿಯಲ್ಲಿ ಬಂದಿದೆ, ಇಲ್ಲದೇ ಹೋದರೆ ಜನರು ನಮಗೆ ಬುದ್ಧಿಯಿಲ್ಲ. ಸರ್ಕಾರದಲ್ಲಿ ಏನು ನಡೆಯುತ್ತಿದೆ ಎನ್ನುವುದು ನಮಗೆ ಗೊತ್ತಾಗುವುದಿಲ್ಲ ಎಂದು ಅವರು ಚಳುವಳಿ ಮಾಡುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಜನ ನಗಲಿಲ್ಲ ಎಂದು ನಿಮಗೆ ಹೇಗೆ ಗೊತ್ತಾಯಿತು ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ನೀವು ನಗಲಿಲ್ಲ ಅದರಿಂದ ಗೊತ್ತಾಯಿತು. ಮಾನ್ಯ ಅಧ್ಯಕ್ಷರೇ, ಇದು ಸ್ವಿಚ್ ಹಾಕಿದ ಹಾಗೆ ಅಲ್ಲ. ನಾವು ಇದರ ಬಗ್ಗೆ ಒಂದು ದಿಟ್ಟ ಹೆಜ್ಜೆಯನ್ನು ಹಾಕಲೇಬೇಕು. ಈರೀತಿಯಾಗಿ ನಾವು ಹೆಜ್ಜೆಯನ್ನು ಹಾಕುವಾಗ ಸ್ವಲ್ಪ ತಪ್ಪುಗಳನ್ನು ಬೇರೆಯವರು ಬರೆಯಬಹುದು. ನಾನು ಇಂದು ಮೇಲ್ಮನೆಯಲ್ಲಿಯೂ ಇದೇ ಮಾತನ್ನು ಹೇಳಿದ್ದೇನೆ. ಪ್ರತಿಯೊಂದನ್ನೂ ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳಲಿಕ್ಕೆ ಸಧ್ಯದಲ್ಲಿ ಸಾಧ್ಯವಿಲ್ಲ. ಮಂತ್ರಿಗಳಿಗೂ ಸಾಧ್ಯವಿಲ್ಲ. ಅಧಿಕಾರಿಗಳಿಗೂ ಸಾಧ್ಯವಿಲ್ಲ. ತರ್ಜುಮೆ ಮಾಡುವಾಗ ಎಷ್ಟೋ ಕನ್ನಡ ಶಬ್ದಗಳು ತಕ್ಷಣ ಸಿಕ್ಕುವುದಿಲ್ಲ. ನಾವು ಹೀಗೆ ಮಾಡಿಕೊಂಡು, ಮಾಡಿಕೊಂಡು ಕನ್ನಡ ಬಳಕೆಯನ್ನು ಸುಧಾರಿಸಬೇಕಾಗಿದೆ. ಹೀಗೆ ಅಭ್ಯಾಸ ಮಾಡಿಕೊಂಡು ಒಂದೆರಡು ವರ್ಷಗಳಲ್ಲಿ ಸುಂದರವಾದಂಥ ಹಾಗೂ ಸ್ವಚ್ಛವಾದಂಥ ಕನ್ನಡ ಪ್ರತಿಯೊಂದು ಇಲಾಖೆಯಲ್ಲಿಯೂ ಬಳಕೆಗೆ ಬರುತ್ತದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಅದರದ್ದೇ ಆದ ಭಾಷೆ ಇದೆ. ಇದು ಹೀಗೆ ನಡೆದುಕೊಂಡು ಹೋಗಬೇಕಾಗಿದೆ. ಆದ್ದರಿಂದ ನಾವು ಹಿಂದಿನ ಸರ್ಕಾರ ಇದನ್ನು ಜಾರಿಗೆ ತಂದ ಹಾಗೆ ತಂದಿಲ್ಲ, ಅವರು ಮಾಡಿದ ಹಾಗೆ ಮಾಡಿದ್ದರೆ ಆ ಮಾತು ಬೇರೆ ಆಗಿತ್ತು.

ಶ್ರೀ ಎಸ್. ಬಂಗಾರಪ್ಪ.—ಇಂಗ್ಲೀಷ್ ಪದಗಳನ್ನು ತರ್ಜುಮೆ ಮಾಡಬೇಕಾದರೆ ಬಹಳ ಕಷ್ಟ ವಾಗುತ್ತದೆ. ಇಂಗ್ಲೀಷ್ ಭಾಷೆ ಜನಜೀವನದಲ್ಲಿ ಹಾಸುಹೊಕ್ಕಾಗಿದೆ, ಉದಾಹರಣೆಗೆ ಹೇಳುವುದಾದರೆ, 'ಕೋಟ್' ಎನ್ನುವುದು ಇಂಗ್ಲೀಷ್ ಪದ, ಆದರೆ ನಾವೆಲ್ಲರೂ ಕೋಟ್ ಎಂದು ಉಪಯೋಗಿಸು ತ್ತೇವೆಯೇ ಹೊರತು ಮೇಲು ಅಂಗಿಯನ್ನು ಕೊಡಿ ಎಂದು ಯಾರೂ ಹೇಳುವುದಿಲ್ಲ. ಹಾಗೆಯೇ ಸೂಪರೆಂಟೆಂಡಿಂಗ್ ಇಂಜನಿಯರ್, ಎಕ್ಸಿಕುಟೀವ್ ಇಂಜಿನಿಯರ್, ಪೋಲೀಸ್ ಸ್ಟೇಷನ್, ಪೋಲೀಸ್ ಎನ್ನುವ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬಳಸುವಾಗ ಎಷ್ಟೋ ಸಂದರ್ಭಗಳಲ್ಲಿ ನಾವು ಅಪ ಹಾಸ್ಯಕ್ಕೆ ಗುರಿಯಾಗುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ನಾನು ಹೇಳಿದೆ, ಪ್ರತಿಯೊಂದು ಕನ್ನಡ ಶಬ್ದವನ್ನು ತರ್ಜುಮೆ ಮಾಡಿ ಬಳಸಬೇಕು ಎಂದರೆ ಕಷ್ಟವಾಗುತ್ತದೆಂದು. ಅಕಸ್ಮಾತ್ತಾಗಿ ಕನ್ನಡದಲ್ಲಿ ತಕ್ಷಣ ಸರಿ ಯಾದ ಶಬ್ದಗಳು ದೊರೆಯದೆ ಇದ್ದು ಇಂಗ್ಲೀಷ್ ಪದಗಳನ್ನು ಉಪಯೋಗ ಮಾಡಿದರೆ ಅದು ಅಪರಾಧ ವೇನೂ ಅಲ್ಲ. ಈಗಿನಿಂದಲೇ ಕನ್ನಡವನ್ನು ಆಡಳಿತ ಭಾಷೆಯಾಗಿ ಉಪಯೋಗ ಮಾಡಬೇಕು ಎಂದು ತಾವು ತೀರ್ಮಾನ ಮಾಡಿ ಎಲ್ಲಾ ಹಂತದಲ್ಲಿಯೂ ಎಲ್ಲಾ ಖಾತೆಗಳಲ್ಲಿಯೂ ಇದನ್ನು ಜಾರಿಯಲ್ಲಿ ತರು ವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಜಾರಿಯಲ್ಲಿ ತರುವುದನ್ನು ನಾವು ಎಣ್ಣೆ ಹಾಕಿಕೊಂಡು ನೋಡು ವುದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದನ್ನು ನಾನು ಮೊದಲು ಹೇಳುವುದನ್ನು ಮರೆತೆ, ಕನ್ನಡದ ಅಭಿವೃದ್ಧಿಯ ಬಗ್ಗೆ ನಾವು ತೀರಾ ಮಡಿವಂತಿಕೆ ಯಿಂದಲೂ ಇರಕೂಡದು. ಸಾಮಾನ್ಯ ಮನುಷ್ಯ ಕನ್ನಡವನ್ನು ಬಳಸಬೇಕಾದರೆ ಯಾವಾಗಲೂ ಡಿಕ್ಷನರಿಯನ್ನು ಜೇಬಿನಲ್ಲಿಟ್ಟುಕೊಂಡು ಹೋಗಲಿಕ್ಕೆ ಸಾಧ್ಯವಲ್ಲ. ಕನ್ನಡದ ಶಬ್ದ ಕೇಳಿಬಂದರೆ ಸರಳ ರೀತಿಯಲ್ಲಿ ಅದನ್ನು ಉಪಯೋಗ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರ ಹೇಳುತ್ತೇನೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಭ್ರಷ್ಟಾಚಾರ ಇದೆ. ಅನೇಕ ಕಡೆ ನಿರುದ್ಯೋಗಿ ಪದವೀಧರರು ತಮ್ಮ ಹೆಸರನ್ನು ನೋಂದಾಯಿಸಲು ಗಂಟೆಕಟ್ಟಲೆ ಕ್ಯೂ ನಿಲ್ಲಬೇಕಾಗುತ್ತದೆ. ಹೀಗೆ ಅನಾವಶ್ಯಕವಾಗಿ ನಿಲ್ಲಬೇಕಾದಾಗ ಅವರು ನಮ್ಮೆಲ್ಲರನ್ನೂ ಬೈಯುತ್ತಾರೆ. ಅವರು ಅನೇಕ ವೇಳೆ ಶಾಪ ಹಾಕಿರುವುದನ್ನು ನಾನು ತಿಳಿದಿದ್ದೇನೆ. ಆದ್ದರಿಂದ ನಾವು ಈ ಎಂಪ್ಲಾಯ್‌ಮೆಂಟ್‌ಎಕ್ಸ್‌ಚೇಂಜ್‌ನ್ನು ಕಂಪ್ಯೂಟರೈಸ್ ಮಾಡಬೇಕು ಎಂದು ಇದ್ದೇವೆ. ಅಷ್ಟೇ ಅಲ್ಲ, ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳು ಬರೀ ಹೆಸರನ್ನು ನೋಂದಾಯಿಸತಕ್ಕ ಜಾಗಗಳು ಆಗಬಾರದು, ಸ್ವಲ್ಪಮಟ್ಟಿಗೆ ನಿರುದ್ಯೋಗಿ ಪಧವೀಧರರಿಗೆ ಗೈಡೆನ್ಸ್ ಕೂಡ ಕೊಡಬೇಕು. ಈ ರೀತಿಯಾಗಿ ನಾವು ಇದನ್ನು ಪುನರ್ ರೂಪಿಸಬೇಕಾಗಿದೆ ಎನ್ನುವ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೇವೆ.

ಆಮೇಲೆ ಇದರಲ್ಲಿ ಮತ್ತೊಂದು ಹೊಸ ನೀತಿ ಎಂದರೆ, ಅಂತ್ಯೋದಯ ಕಾರ್ಯಕ್ರಮ.

ಈ ಅಂತ್ಯೋದಯ ಕಾರ್ಯಕ್ರಮದ ಬಗ್ಗೆ ನಾನು ಇಲ್ಲಿ ಬಹಳ ವಿಸ್ತಾರವಾಗಿ ಹೇಳುವುದಕ್ಕೆ ಬಯಸುವುದಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಒಂದು ವರ್ಷಕ್ಕೆ ೫ ಕಡು ಬಡ ಕುಟುಂಬಗಳನ್ನು ಹೆಕ್ಕಿ ಅವರನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತಬೇಕು, ಅವರಿಗೆ ಎಲ್ಲ ರೀತಿಯ ಸಾಧನಸಲಕರಣೆಗಳನ್ನು ಕೊಡಬೇಕೆಂಬುದೇ ಇದರ ಉದ್ದೇಶ. ಹಾಗಾದರೆ ೨೦ ಪಾಯಿಂಟ್ ಪ್ರೋಗ್ರಾಂನ್ನು ಕೈಬಿಡುತ್ತೀರಾ ಎಂದು ಕೇಳಬಹುದು. ಅದನ್ನೂ ನಾವು ಕೈಬಿಡುವುದಿಲ್ಲ. ಈ ಮಾತನ್ನು ನಾನು ಹಿಂದೆಯೂ ಕೂಡ ಹೇಳಿದ್ದೇನೆ, ಇವತ್ತೂ ಅದನ್ನೇ ಸ್ಪಷ್ಟಪಡಿಸುತ್ತಿದ್ದೇನೆ. ಸಾಮಾನ್ಯ ಜನತೆಗೆ ಅದರಲ್ಲೂ ಮುಖ್ಯವಾಗಿ ಬಡಬಗ್ಗರಿಗೆ, ಹಿಂದುಳಿದವರಿಗೆ, ಹರಿಜನಗಿರಿಜನರಿಗೆ ಮತ್ತು ನಿರುದ್ಯೋಗಿಗಳಿಗೆ ಇರತಕ್ಕಂಥ ಯಾವುದೇ ಕಾರ್ಯಕ್ರಮವನ್ನು ಅದು ಹಿಂದಿನ ಸರ್ಕಾರದ್ದೇ ಇರಲಿ ಅಥವಾ ಕೇಂದ್ರ ಸರ್ಕಾರದ್ದೇ ಇರಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದು ನಮ್ಮ ಕಾರ್ಯಕ್ರಮವಲ್ಲ, ಬೇರೆಯವರ ಕಾರ್ಯಕ್ರಮವೆಂದು ತಿಳಿದುಕೊಂಡು ಅದನ್ನು ತಳ್ಳಿಹಾಕುವುದಕ್ಕೆ ನಾವು ಹೋಗುವುದಿಲ್ಲ. ಈ ಅಂತ್ಯೋದಯ ಕಾರ್ಯಕ್ರಮವನ್ನು ಜನತಾ ಸರ್ಕಾರ ಜಾರಿ ಮಾಡಿದ್ದು ಎಂದು ಹೇಳಿ ಹಿಂದಿನ ಸರ್ಕಾರದವರು ಅದನ್ನು ಬದಲು ಮಾಡಿದ್ದರು, ಆ ತರಹ ನಾವು ಮಾಡುವುದಿಲ್ಲ ಅಂತಹ ಸಂಕುಚಿತ ಮನೋಭಾವ ನಮ್ಮದಲ್ಲ. ಅಂತಹ ಕಾರ್ಯಕ್ರಮಗಳಿಂದ ಜನತೆಯ ಕಲ್ಯಾಣ ಆಗುವುದಾದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಮತ್ತು ಅದನ್ನು ಜಾರಿಗೂ ಕೂಡ ತರುತ್ತೇವೆ. ಈ ಲ್ಯಾಂಡ್ ರಿಫಾರಂಸ್ ಬಗ್ಗೆ ಒಂದು ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ. ಅದರಲ್ಲಿ 'Land Reforms has become reality' ಎಂದು ಇದೆ. ಅದು ಇನ್ನೂ ರಿಯಾಲಿಟಿಗೆ ಬಂದಿಲ್ಲ. ಅದೇ ಇವತ್ತು ಹೈಕೋರ್ಟಿನಲ್ಲಿ ೩೮ ಸಾವಿರ ರಿಟ್ ಪಿಟಿಷನ್ಸ್ ಇವೆ, ಈ ಲಿಟಿಗೇಷನ್ಸ್ ಬಗ್ಗೆ ನಮಗೆ ದೊಡ್ಡ ಆತಂಕವಾಗಿದೆ, ಈ ವಿಚಾರದಲ್ಲಿ ನಾನು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿದ್ದೇನೆ. ಈ ಬಗ್ಗೆ ಕಾಯಿದೆ ತಜ್ಞರ ಸಲಹೆಯನ್ನೂ ಕೂಡ ತೆಗೆದುಕೊಂಡಿದ್ದೇನೆ. ತಾಲೂಕು ಲೆವೆಲ್‌ನಲ್ಲಿ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಆದಷ್ಟು ಬೇಗ ಇದನ್ನೆಲ್ಲಾ ತೀರ್ಮಾನ ಮಾಡಿಸಬೇಕು ಎಂದು ನಾವು ಮಂತ್ರಿಮಂಡಲದ ಸಭೆಯಲ್ಲಿ ಯೋಚನೆ ಮಾಡಿದೆವು. ಇದರಲ್ಲಿ ಏನಾಗುತ್ತಗೆ ಎಂದರೆ, ಆಯಾ ರಿಟ್‌ಪಿಟಿಷನ್‌ಗಳನ್ನು ಆಯಾ ಡಿಸ್ಟ್ರಿಕ್ಟ್‌ಗೆ ವರ್ಗಾಯಿಸಬೇಕಾಗುತ್ತದೆ, ಇದಕ್ಕೆ ೬–೭ ತಿಂಗಳು ಆಗುತ್ತದೆ. ನಾನು ಮುಖ್ಯ ನ್ಯಾಯಾಧೀಶರ ಜೊತೆಗೆ ಈ ಬಗ್ಗೆ ಮಾತನಾಡಿದಂತಹ ಕಾಲದಲ್ಲಿ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ೪ ವಿಶೇಷ ಬೆಂಚ್‌ಗಳನ್ನು ಸ್ಥಾಪನೆ ಮಾಡಿ, ಹೈಕೋರ್ಟಿನ ರಿಟೈರ್ಡ್ ಜಡ್ಜಸ್ ಆದರೂ ಪರವಾಗಿಲ್ಲ–ಅಂತಹವರನ್ನು ಅಲ್ಲಿ ನೇಮಿಸಿ ಸುಮಾರು ೪೦ ಸಾವಿರ ರಿಟ್‌ಪಿಟಿಷನ್‌ಗಳನ್ನು ಬಗೆಹರಿಸಿ ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಂಡೆ. ಅದಕ್ಕೆ ಅವರು 'ಆಗಬಹುದು' ಎಂದು ಹೇಳಿದ್ದಾರೆ. ಈ ರೀತಿಯಲ್ಲಿ ನಾವು ಈ ಲ್ಯಾಂಡ್ ರಿಫಾರಂಸನ್ನು ರಿಯಾಲಿಟಿಗೆ ತರಬೇಕು ಎಂದು ಯೋಚನೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ಲ್ಯಾಂಡ್ ರಿಫಾರಂಸ್ ರಿಯಾಲಿಟಿಗೆ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ನಾನು ಒಂದು ವಿಚಾರವನ್ನು ಹೇಳುತ್ತೇನೆ ೮ ಲಕ್ಷ ೧೬ ಸಾವಿರ ಅಪ್ಲಿಕೇಷನ್‌ಗಳಲ್ಲಿ ಕೇವಲ ಈಗಿರತಕ್ಕಂಥಾದ್ದು ೩೮ ಸಾವಿರ ರಿಟ್‌ಪಿಟಿಷನ್‌ಗಳು ಮಾತ್ರ, ಅದು ಲ್ಯಾಂಡ್‌ಲಾರ್ಡ್ಸದೇ ಆಗಿರಬಹುದು, ಅಥವಾ ಟೆನೆಂಟ್ಸ್‌ದೇ ಆಗಿರಬಹುದು, ಅವೆಲ್ಲಾ ಈಗ ಹೈಕೋರ್ಟಿನಲ್ಲಿ ಇದ್ದರೆ ಈ ಬಗ್ಗೆ ಈಗ ನಿರ್ಣಯ ತೆಗೆದುಕೊಳ್ಳುವುದಕ್ಕೆ ಟ್ರಿಬ್ಯುನಲ್‌ಗಳಿಗೆ ಅಧಿಕಾರವಿಲ್ಲ. ನಾವು ನಮ್ಮ ಕಾಲದಲ್ಲಿ ೮ ಲಕ್ಷ ಕೇಸ್‌ಗಳನ್ನು ಡಿಸ್‌ಪೋಸ್ ಮಾಡಿದ್ದೇವೆ ಮತ್ತು ಲಕ್ಷಾಂತರ ಜನಕ್ಕೆ ಆಕ್ಯುಪೆನ್ಸಿ ರೈಟ್ಸ್ ಕೊಟ್ಟಿದ್ದೇವೆ. ಹೀಗೆ ಲಕ್ಷಾಂತರ ಜನಕ್ಕೆ ಆಕ್ಯುಪೆನ್ಸಿ ರೈಟ್ಸನ್ನು ಕೊಟ್ಟದ್ದು ರಿಯಾಲಿಟಿ ಆಗಲಿಲ್ಲವೇ ? ಸುಮ್ಮನೆ ಈ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ. ೮ ಲಕ್ಷ ೧೬ ಸಾವಿರ ಕೇಸ್‌ನಲ್ಲಿ ೪ ಲಕ್ಷ ೧೬ ಸಾವಿರ ಕೇಸ್‌ಗಳು ಟೆನೆಂಟ್ ಪರವಾಗಿಯೇ ತೀರ್ಮಾನ ಆಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹೇಳಿದಿರಿ ೮ ಲಕ್ಷ ಕೇಸ್‌ಗಳಲ್ಲಿ ೪ ಲಕ್ಷ ಕೇಸ್‌ಗಳು ಟೆನೆಂಟ್ಸ್ ಪರವಾಗಿಯೇ ತೀರ್ಮಾನ ಆಗಿದೆ ಎಂದು. ಅದು ಹಾಗಲ್ಲ, ಆ ಲಕ್ಷ ಕೇಸ್‌ಗಳೆಲ್ಲಾ ಲ್ಯಾಂಡ್‌ಲಾರ್ಡ್ಸ್ ಪರವಾಗಿಯೇ ತೀರ್ಮಾನ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಇದ್ದಾಗ ಆ ತರಹ ಆಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಅದನ್ನೆಲ್ಲಾ ಬಗೆಹರಿಸೋಣ. ಮಾನ್ಯ ಅಧ್ಯಕ್ಷರೇ, ಈ ಆಕ್ಯುಪೆನ್ಸಿ ರೈಟ್ಸ್ ಎಷ್ಟು ಜನಕ್ಕೆ ಸಿಕ್ಕಿದೆ ಎಂಬುದು ಬಹಳ ಮಹತ್ವದ ವಿಚಾರ. ಅದರ ಬಗ್ಗೆ ಅಂಕಿಸಂಖ್ಯೆಗಳನ್ನು ಈ ಸಭೆಯ ಮುಂದಿಡುವುದಕ್ಕೆ ಬರುತ್ತದೆ. ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಂಡು ಅದನ್ನೆಲ್ಲಾ ತರಿಸಿ ಈ ಸಭೆಯ ಮುಂದೆ ಇಡಿಸುತ್ತೇನೆ. ಪ್ರತಿಸಲ ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಬೆಲೆ ಏರಿಕೆಯ ಬಗ್ಗೆ ಪ್ರಸ್ತಾಪ ಇದ್ದೇ ಇರುತ್ತದೆ. ಈ ಸಲ ನಾವು ಹೊಸ ನೀತಿ ನಿರೂಪಣೆಯ ದೃಷ್ಟಿಯಿಂದ ಅದನ್ನು ಪ್ರಸ್ತಾಪ ಮಾಡಿದ್ದೇವೆ. ಅದನ್ನು ಜಾರಿಗೆ ಕೂಡ ತಂದಿದ್ದೇವೆ. ಈ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿರತಕ್ಕಂಥ ಪ್ರತಿಯೊಂದು ಪಾಯಿಂಟ್‌ನಲ್ಲಿ ಅಕ್ಕಿಯ ಬೆಲೆ ಕಡಿಮೆಯಾಗಿದೆ. ಅದರ ಬೆಲೆ ಕ್ರಮವಾಗಿ ೧ ರೂ. ೯೫ ಪೈಸೆ, ೨ ರೂ. ಮತ್ತು ೨ ರೂ. ೧೦ ಪೈಸೆಯಷ್ಟು ಇದೆ. ಈ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ವಿಚಾರದಲ್ಲಿ ಒಂದು ಮಾತು ಇದೆ. ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕಮೀಷನ್‌ನವರು ಪ್ರತಿವರ್ಷ ಏನೊಂದು ವರದಿಯನ್ನು ಕೊಡುತ್ತಾರೆ, ಅದರಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಈ ವರ್ಗದವರ ಮೇಲೆ ಆಗತಕ್ಕಂಥ ಅನ್ಯಾಯ, ವಂಚನೆ ಮತ್ತು ಅವರಿಗೆ ದೊರಕತಕ್ಕಂಥ ಅನುಕೂಲತೆಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪವಿರುತ್ತದೆ. ಹಿಂದೆ ಯಾವುದೇ ಸಂದರ್ಭದಲ್ಲಿ ಕೂಡ ಹಿಂದಿನ ಸರ್ಕಾರ ಅಂದರೆ ಶ್ರೀಮಾನ್ ಮೊಯಿಲಿಯವರ ಸರ್ಕಾರ ಎಂದೂ ಕೂಡ ನಾವು ಹೇಳಬಹುದು, ಆ ಸರ್ಕಾರ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕಮಿಷನ್‌ನ ವರದಿಯನ್ನು ಚಾಚೂ ತಪ್ಪದೇ ಕಟ್ಟುನಿಟ್ಟಾಗಿ ಜಾರಿಗೆ ತರುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಆದರೆ ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಆ ಒಂದು ಮಾತನ್ನು ಹೇಳಿದ್ದಾರೆ. ಅದೇ ರೀತಿ ಸಿವಿಲ್ ರೈಟ್ಸ್ ಪ್ರೊಟೆಕ್ಷನ್ ಆಕ್ಟ್‌ನ ಅನುಬಂಧಗಳನ್ನು ಜಾರಿಗೆ ತರುತ್ತೇವೆ ಎಂದು ಕೂಡ ಇವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಪ್ರತ್ಯೇಕ ಸಿಬ್ಬಂದಿ ಕೂಡ ಇದೆ. ಹಿಂದಿನ ಸರ್ಕಾರದವರು ಅದನ್ನು ಜಾರಿಗೆ ತರತಕ್ಕಂಥ ಗಂಭೀರವಾದ ಪ್ರಯತ್ನವನ್ನು ಮಾಡಲಿಲ್ಲ. ಅದನ್ನು ನಾವು ಈಗ ಮಾಡುತ್ತಿದ್ದೇವೆ. ಇನ್ನು ಕೊನೆಯದಾಗಿ ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಇನ್ನು ಕೆಲವು ಮಾನ್ಯ ಸದಸ್ಯರುಗಳು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸದೇ ಇರತಕ್ಕಂಥ ಹಲವಾರು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಆ ಎಲ್ಲಾ ವಿಚಾರಗಳ ಬಗ್ಗೆ ಇವತ್ತು ಇಲ್ಲಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತು ನಮ್ಮ ಮುಂದಿರತಕ್ಕಂಥ ವಿಷಯಕ್ಕೆ ಅದು ಏನೇನು ಸಂಬಂಧವಿಲ್ಲ. ಇನ್ನೊಂದು ಸಂದರ್ಭದಲ್ಲಿ ನಾನು ಆ ವಿಚಾರವನ್ನು ತೆಗೆದುಕೊಂಡು ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಎಕ್ಸೈಜ್ ಆಕ್ಷನ್ ಬಗ್ಗೆ ಒಂದು ವಿಚಾರವನ್ನು ಹೇಳಿದ್ದಾರೆ. ನಿಜಕ್ಕೂ ಅದು ನನಗೆ ವಿನೋದವಾಗಿ ಕಂಡಿತು. ೧೯೭೮-೭೯ನೇ ಇಸವಿಯಲ್ಲಿ ಆದಂತಹ ಒಂದು ಘಟನೆಯ ಬಗ್ಗೆ ಅವರಿಗೆ ಪರಿಚಯ ಇದ್ದಿದ್ದರೆ ಆ ಒಂದೇ ವಿಷಯವನ್ನೂ ಕೂಡ ಅವರು ತರುತ್ತಿದ್ದರೋ ಏನೋ, ಅವರು ಮಾತನಾಡತಕ್ಕಂಥ ಕಾಲದಲ್ಲಿ ಒಂದೇ ದಿವಸದಲ್ಲಿ ೧೬೦೦ ಅಂಗಡಿಗಳಿಗೆ ಪರ್ಮಿಷನ್ ಹೇಗೆ ಸಿಕ್ಕಿತು ಎಂದು ಕೇಳಿದರು. ಅವರ ಸರ್ಕಾರವೇ ಇದ್ದಾಗ ಈ ಎಕ್ಸೈಜ್ ಖಾತೆ ಮಾನ್ಯ ಗುಂಡೂರಾಯರ ಕೈಯಲ್ಲೇ ಇತ್ತು. ಯಾವ ದಿವಸ ಸುಪ್ರೀಂ ಕೋರ್ಟ್‌ನವರು ಸ್ಟೇ ಆರ್ಡರ್ ಕೊಟ್ಟರೋ ಅದೇ ದಿವಸ ೧೬೦೦ ಅಂಗಡಿಗಳಿಗೆ ಪರ್ಮಿಷನ್ ಕೊಟ್ಟರು. ಈ ವಿಷಯ ಮಾನ್ಯ ಮೊಯಿಲಿಯವರಿಗೆ ಗೊತ್ತಿದ್ದರೆ ಅವರು ಈ ಮಾತನ್ನು ಹೇಳುತ್ತಾ ಇರಲಿಲ್ಲ, ಕೊನೆಯಲ್ಲಿ ಅವರು ನಮ್ಮ ಈಗಿನ ಸಂಪುಟದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಇನ್ನೊಂದು ವಿಚಾರ ಏನು ಹೇಳಿದ್ದಾರೆ ಎಂದರೆ ಶ್ರೀ ಎಸ್. ಬಿ. ಭಟ್, ಜಾಯಿಂಟ್ ಡೈರೆಕ್ಟರ್ ಅವರಿಗೆ ಪ್ರಮೋಷನ್ ಹೇಗೆ ಕೊಟ್ಟಿರಿ ಎಂದು ಕೇಳಿದ್ದಾರೆ. ನಾನು ಹೇಳುತ್ತೇನೆ, ನಿಮಗೆ ಯಾರಾದರೂ ಸುದ್ದಿ ಕೊಟ್ಟರೆ ಅದನ್ನು ತಕ್ಷಣ ನಂಬಬೇಡಿ.

ನಮ್ಮ ಅಧಿಕಾರಿಗಳಲ್ಲಿ ಯಾರಾದರೂ ನಿಮಗೆ ಹಳೆಯ ಸಂಬಂಧವಿದ್ದವರು ನಿಮಗೆ ಇನ್‌ಫರ್ಮೇಷನ್ ಕೊಡಬಹುದು, ಆದರೆ ಅದನ್ನು ತಕ್ಷಣ ನಂಬಬೇಡಿ. ಎಸ್.ಜಿ. ಭಟ್ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಇವತ್ತಿಗೂ ಅವರೂ ಹಾಗೇ ಇದ್ದಾರೆ. ಡೈರೆಕ್ಟರ್ ಜನರಲ್ಲಾಗಿ ಹಾಗೇ ಇದ್ದಾರೆ, ನೀವಿದ್ದಾಗಲೇ ಅವರು ಡೈರೆಕ್ಟರ್ ಜನರಲ್ ಆದರು. ಇನ್ನು ಕೊನೆಗೆ ಬರುತ್ತೇನೆ. ಪೋಲೀಸ್ ಖಾತೆ ಬಗ್ಗೆ ಹೇಳಬೇಕಾಗಿದೆ. ನಿಜ, ನಾವು ಪೋಲೀಸ್ ಖಾತೆಯಲ್ಲಿ ಬದಲಾವಣೆ ಮಾಡಿದ್ದೇವೆ. ಮೊದಲನೇ ಕಾರಣ,

ಪೋಲೀಸ್ ಖಾತೆಯನ್ನು ಒಬ್ಬರಿಂದಲೇ ನಿರ್ವಹಿಸುವುದು ಸಾಧ್ಯವಾಗದಂತೆ ದೊಡ್ಡ ಗಾತ್ರದಲ್ಲಿ ಬೆಳೆದಿದೆ. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಕೇರಳದಲ್ಲಿ ೪ ಜನ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇದ್ದಾರೆ, ತಮಿಳುನಾಡಿನಲ್ಲಿ ೪ ಜನ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಇದ್ದಾರೆ. ಮೊದಲು ಅಂದರೆ ಶ್ರೀಮಾನ್ ಗುಂಡೂರಾಯರು ಬರುವುದಕ್ಕಿಂತ ಮೊದಲು ೩ ಜನ ಇನ್ಸ್‌ಪೆಕ್ಟರ್ ಜನರಲ್ ಇದ್ದರು. ಶ್ರೀ ಗುಂಡೂರಾಯರ ಕಾಲದಲ್ಲಿ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಎಂದು ಒಬ್ಬರನ್ನು ನೇಮಕ ಮಾಡಿದ್ದಾರೆ. ಈ ಎಲ್ಲಾ ಜವಾಬ್ದಾರಿಯನ್ನು ಒಬ್ಬನ ಕೊರಳಿಗೆ ಕಟ್ಟತಕ್ಕಂಥಾದ್ದು ಸಾಧ್ಯವಿಲ್ಲ ವೆಂದು ನನಗನ್ನಿಸಿತು. ಬಳ್ಳಾರಿಗೆ ನಾನು ಸ್ವತಃ ಹೋಗಿ ನೋಡಿದ್ದೇನೆ, ಮಾನ್ಯ ಬೊಮ್ಮಾಯಿಯವರೂ ಅಲ್ಲಿಗೆ ಬಂದಿದ್ದರು. ಮಾನ್ಯ ನಜೀರ್‌ಸಾಬ್ ಅವರೂ, ಮಾನ್ಯ ಪ್ರಕಾಶ್ ಅವರೂ, ಮಾನ್ಯ ಅಜೀಜ್ ಸೇಠ್ ಅವರೂ ಅಲ್ಲಿಗೆ ಹೋಗಿದ್ದರು. ಮತ್ತು ನಾನು ಬಿಜಾಪುರಕ್ಕೆ ಹೋಗಿ ನೋಡಿದ್ದೇನೆ. ನಮ್ಮ ಪೋಲೀಸ್ ಖಾತೆ ಎಷ್ಟು ಬೆಳೆದಿದೆಯೆಂದರೆ ಅಷ್ಟು ದೊಡ್ಡದಾಗಿ ಬೆಳೆದಿದೆ. ಅಷ್ಟನ್ನೂ ಒಬ್ಬರಿಂದ ನೋಡಲಿಕ್ಕೆ ಆಗುವುದಿಲ್ಲ. ಸಿ.ಒ.ಡಿ. ಇದೆ, ಸಿವಿಲ್ ಡಿಫೆನ್ಸ್ ಇದೆ, ರೈಲ್ವೆ ಪೋಲೀಸ್ ಇದೆ, ರಿಸರ್ವ್ ಪೋಲೀಸ್ ಇದೆ. ಹೋಂಗಾರ್ಡ್ಸ್ ಇದೆ, ಫೈರ್ ಸೆಕ್ಷನ್ ಇದೆ, ಇದರ ಜೊತೆಗೆ ರೆಗ್ಯುಲರ್ ಅಡ್ಮಿನಿಸ್ಟ್ರೇಷನ್ ಇದೆ. ಹೀಗೆ ಒಂದೆರಡಲ್ಲ, ಅನೇಕ ಭಾಗಗಳಿವೆ. ಈ ಪ್ರತಿಯೊಂದು ಕ್ಷೇತ್ರವೂ ಬೆಳೆಯುತ್ತಾ ಹೋಗುತ್ತಿದೆ. ನಾನು ಇದರ ಬಗ್ಗೆ ಯೋಚನೆ ಮಾಡಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಪಕ್ಷದ ಸದಸ್ಯರಲ್ಲೂ ಸ್ವಲ್ಪಮಟ್ಟಿಗೆ ಅಸಮಾಧಾನವಿದೆ. ಏನೆಂದರೆ ಎರಡು ತಿಂಗಳಾದರೂ ಕೂಡ ಅಧಿಕಾರಿಗಳ ಮನೋವರ್ತನೆಯಲ್ಲಿ ಬದಲಾವಣೆಯಾಗಿಲ್ಲ ಎಂದು. ಏಕೆಂದರೆ ಈ ಇಲಾಖೆ ಹಿಂದೆ ಹೇಗೆ ನಡೆದುಕೊಂಡು ಬಂದಿತ್ತೋ ಹಾಗೆಯೇ ಇನ್ನೂ ಕೂಡ ಕೆಳಹಂತದಲ್ಲಿ ಲಂಚ ನಡೆಯುತ್ತಾ ಇದೆ, ಮತ್ತು ಅಸಡ್ಡೆಯಿಂದ ನಡೆಯುತ್ತಾ ಇದೆಯೆಂದು ಹೇಳುತ್ತಾ ಇರುವುದು ನನಗೆ ಗೊತ್ತುಂಟು. ಆದರೂ ಉದ್ದೇಶ ಪೂರ್ವಕವಾಗಿ ಇವತ್ತಿನವರೆಗೂ ಮಂತ್ರಿಮಂಡಲದಲ್ಲಿ ಈ ವಿಷಯವನ್ನು ತೆಗೆದುಕೊಂಡಿಲ್ಲ. ಏಕೆಂದರೆ, ಅವರಿಗೆ ಅವಕಾಶ ಕೊಡಬೇಕು, ಹೊಸ ಸರ್ಕಾರ ಬಂತು' ಇದ್ದವರನ್ನೆಲ್ಲಾ ಕಿತ್ತುಹಾಕಿ ಬೇರೆಯವರನ್ನು ತಂದರು ಎನ್ನುವ ಭಾವನೆ ಬರಕೂಡದು, ಅಧಿಕಾರಿಗಳ ಮನಸ್ಸಿನಲ್ಲೂ ಕೂಡ ಒಂದು ರೀತಿಯಾದ ತಪ್ಪು ತಿಳುವಳಿಕೆ ಆಗಬಹುದು, ಅವರ ಮನಸ್ಸಿನಲ್ಲೂ ಕೂಡ ನಾವೇನು ಮಾಡುತ್ತೇವೋ ಎಂಬ ಒಂದು ರೀತಿಯಾದ ಅಳುಕು ಆಗಬಹುದು, ಆ ಮೊರೇಲನ್ನು ಮುಖ್ಯಮಂತ್ರಿಯಾಗಲೀ ಯಾರೇ ಆಗಲಿ, ಭಂಗಪಡಿಸುವುದು ಒಳ್ಳೆಯದಲ್ಲ ಎಂದು ಎರಡು ತಿಂಗಳ ಅವಕಾಶವನ್ನು ನಾವು ಕೊಟ್ಟಿದ್ದೇವೆ. ಅಲ್ಲದೆ ಈ ಸದನದ ಮುಖಾಂತರ ನಾನು ಅವರಿಗೆ ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ. ಈ ಸರ್ಕಾರದಲ್ಲಿ ಯಾವ ಅಧಿಕಾರಿ ತಾನು ಜನರ ಸೇವಕ ಎಂದು ತಿಳಿದುಕೊಂಡು ಆ ಭಾವನೆಯಿಂದ ಕೆಲಸ ಮಾಡುವುದಿಲ್ಲವೋ ಈ ಸರ್ಕಾರದಲ್ಲಿ ಅಂತಹವರಿಗೆ ಸ್ಥಾನವಿಲ್ಲ. ನಾವು ಒಂದೇ ಒಂದು ಕಮಿಟ್‌ಮೆಂಟ್ ಕೇಳುತ್ತೇವೆ. ಮಂತ್ರಿಗಳಿಗಲ್ಲ. ಪಕ್ಷಕ್ಕೆ ಅಲ್ಲ ಅವರಲ್ಲಿ ಒಂದೇ ಒಂದು ಕಮಿಟ್‌ಮೆಂಟ್ ಇರಬೇಕು. ಜನತೆಯ ಸೇವಕನಾಗಿ ಇರಬೇಕು, ಜನರಿಗೋಸ್ಕರ ಕಮಿಟ್‌ಮೆಂಟ್ ಇರಬೇಕು, ಆ ಒಂದು ಭಾವನೆಯಿಂದ ಕೆಲಸ ಮಾಡಿದರೆ ಸರಿ. ಇದಕ್ಕೆ ಎರಡು ತಿಂಗಳು ಅವಕಾಶ ಕೊಟ್ಟಿದ್ದೇನೆ. ಇನ್ನು ಪೋಲೀಸ್ ಖಾತೆ ಬಗ್ಗೆ ಹೇಳುವಾಗ ನಾವು ಈ ರೀತಿಯಾಗಿ ಮೂರು ಭಾಗಗಳನ್ನು ಮಾಡತಕ್ಕಂಥಾದ್ದು ನಮ್ಮ ಆಡಳಿತದ ದಕ್ಷತೆ ದೃಷ್ಟಿಯಿಂದ ಮತ್ತು, ಸುವ್ಯವಸ್ಥೆ ದೃಷ್ಟಿಯಿಂದ ಅಗತ್ಯವೆಂದು ಮಾನವರಿಕೆಯಾದದ್ದರಿಂದ ಮಾಡಿದೆ. ಇದರಲ್ಲಿ ಕೆಲವರು ಟೀಕೆ ಮಾಡಿದ್ದಾರೆ. ಇದರ ಬಗ್ಗೆ ಕೆಲವರು ಹೇಳಿದರು, ಕೆಲವರು ಹೇಳಲಿಲ್ಲ. ಇದರಲ್ಲಿ ಯಾವುದೇ ಒಂದು ಉದ್ದೇಶವಿಲ್ಲ. ಯಾವಾಗ ಈ ಸರ್ಕಾರದ ಪರವಾಗಿ ಜನತೆಯ ಆಸ್ತಿ ಪಾಸ್ತಿ ಮತ್ತು ಜೀವ–ಇವುಗಳ ರಕ್ಷಣೆ ನಮ್ಮ ಮೇಲೆ ಬಿದ್ದಿತೋ ಅದರೊಳಗೆ ಪೋಲೀಸ್ ಇಲಾಖೆಯ ದಕ್ಷತೆ, ಕಾರ್ಯದಕ್ಷತೆ ನಮ್ಮ ಜವಾಬ್ದಾರಿಯಾಗುತ್ತದೆ. ಆ ದೃಷ್ಟಿಯಿಂದ ಬದಲಾವಣೆ ಮಾಡಿದೆನೇ ಹೊರತು, ಯಾರೋ ಒಬ್ಬರನ್ನು ಮೇಲೆ ತರಬೇಕು, ಮತ್ತೊಬ್ಬರನ್ನು ಕೆಳಗೆ ಇಳಿಸಬೇಕು ಎನ್ನುವ ಉದ್ದೇಶದಿಂದ ಮಾಡಿಲ್ಲ, ಈಗ ಯಾರನ್ನೂ ಕೆಳಗೆ ಹಾಕಿಲ್ಲ. ಮತ್ತು ಯಾರಿಗೂ ಅನ್ಯಾಯವಾಗಿಲ್ಲ. ಕುದೂರು ಕಮಿಷನ್‌ನಲ್ಲಿ ಇವರ ಮೇಲೆ ಇಂಡಿಕ್ಟ್‌ಮೆಂಟ್ ಆಗಿದೆಯೇ? ಇಂಟಿಗ್ರಿಟಿ ಬಗ್ಗೆ ಅಥವಾ ಹಾನೆಸ್ಟಿ ಬಗ್ಗೆ ಇಂಡಿಕ್ಟ್‌ಮೆಂಟ್ ಆಗಿದೆಯೇ? ಪೋಲೀಸ್ ಕಛೇರಿ ಹತ್ತಿರದಲ್ಲಿ ಆ ಜಾಗ ಇದ್ದರೂ ಕೂಡ ಸ್ವತಃ ಹೋಗಿ ನೋಡಬೇಕಾಗಿತ್ತು, ನೋಡಲಿಲ್ಲ ನಿಜ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಕೇಳುತ್ತೇನೆ. ನಿಮಗೆ ಸಾಧಾರಣವಾಗಿ ನೆನಪಿನ ಶಕ್ತಿ ಇದ್ದರೆ ಜ್ಞಾಪಿಸಿಕೊಳ್ಳಿ. ಎಷ್ಟು ಜನ ಆಫೀಸರಿಗೆ ತಮ್ಮ ಕಾಲದಲ್ಲಿ ವಿಜಿಲೆನ್ಸ್ ಕಮಿಷನ್‌ನಿಂದ ಎನ್‌ಕ್ವೈರಿಯಾಗಿ,

ಸಸ್ಪೆಂಡ್ ಆದವರಿಗೆ ಪ್ರಮೋಷನ್ ಕೊಟ್ಟಿಲ್ಲ ನಾನು ಪಟ್ಟಿ ಕೊಡಲೇ ? ಈ ಬಗ್ಗೆ ನಮ್ಮ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸುತ್ತಿದ್ದೇನೆ. ಯಾವನೇ ಒಬ್ಬ ಅಧಿಕಾರಿಗೆ ನಮ್ಮ ಕೆಲಸಕ್ಕೆ ಸಂಬಂಧಪಟ್ಟಿದ್ದರಲ್ಲಿ ಇಂಟೆಗ್ರಿಟಿಯಲ್ಲಿ ದಕ್ಷತೆಯಲ್ಲಿ, ಮತ್ತೊಂದರಲ್ಲಿ ಏನಾದರೂ ಕೊರತೆ ಇದ್ದರೆ, ಆರೋಪ ಬಂದರೆ, ಆಪಾದನೆ ಇದ್ದರೆ ಅವರ ಮೇಲೆ ನಿಷ್ಠೂರವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅಂತಹ ಯಾವ ಒಂದು ಆರೋಪ ಕೂಡ ಈ ಅಧಿಕಾರಿ ಮೇಲೆ ಇರಲಿಲ್ಲ. ಅದಕ್ಕಾಗಿ ಪ್ರಮೋಷನ್ ಕೊಡಲಿಕ್ಕೆ ತೊಂದರೆ ಕಾಣಿಸಲಿಲ್ಲ, ಅದರಲ್ಲಿ ತಪ್ಪೇನೂ ಇಲ್ಲ. ಕೂಡೂರು ಕಮಿಷನ್‌ನವರು ಮಾಡಿರುವ ಆರೋಪ ಗುರುತರ ವಾದ ಆರೋಪವಲ್ಲ. ಆದ್ದರಿಂದ ನಾನು ಈ ರೀತಿ ನಿರ್ಣಯವನ್ನು ತೆಗೆದುಕೊಳ್ಳುವುದು ತಪ್ಪು ಎಂದು ನನಗೆ ಕಾಣಿಸಲಿಲ್ಲ. ಮಾನ್ಯ ಅಧ್ಯಕ್ಷರೆ ನಾನು ನನ್ನ ಸಮಯವನ್ನು ಮೀರಿ ನನ್ನ ಭಾಷಣವನ್ನು ಮುಂದುವರಿಸಿದೆ. ಅದಕ್ಕಾಗಿ ತಾವು ಕ್ಷಮಿಸಬೇಕು, ಇಷ್ಟೇ ಸಾಕು ಎಂದು ಕಾಣುತ್ತದೆ. ಮಾನ್ಯ ಸದಸ್ಯರು ಅನೇಕ ಜನ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ, ಅನೇಕ ಜನ ಟೀಕೆಗಳನ್ನು ಮಾಡಿದ್ದಾರೆ. ನನ್ನ ವಿಷಾದ ಏನೆಂದರೆ, ಅವರೆಲ್ಲರ ಸೂಚನೆಗಳಿಗೆ ಮತ್ತು ಅವರೆಲ್ಲರ ಟೀಕೆಗಳಿಗೆ ಇವತ್ತು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಯಾವ ದೃಷ್ಟಿಯಿಂದ ಅಂದರೆ. ರಾಜ್ಯಪಾಲರ ಭಾಷಣ ನೀತಿಯ ಒಂದು ಡಾಕ್ಯುಮೆಂಟ್, ಒಂದು ಪಾಲಿಸಿ ಡಾಕ್ಯುಮೆಂಟ್. ಆ ಒಂದು ದೃಷ್ಟಿಯಿಂದ ನಾವು ಅದನ್ನು ನೋಡಬೇಕು, ಆ ದೃಷ್ಟಿಯಿಂದ ನಾವು ಚರ್ಚೆ ಮಾಡಬೇಕು. ಆ ದೃಷ್ಟಿಯಿಂದ ಚರ್ಚೆ ಯಾಗದೇ ಇದ್ದರೂ ಸಹ ಆ ದೃಷ್ಟಿಯಿಂದ ನಾನು ಉತ್ತರ ಕೊಟ್ಟಿದ್ದೇನೆ.

ಒಬ್ಬ ಸದಸ್ಯರು.—ಸ್ಕೇರ್ಸಿಟಿ ವಿಷಯ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಸ್ಕೇರ್ಸಿಟಿ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀಮಾನ್ ನಜೀರ್ ಸಾಬ್ ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ನಾಳೆ ಬಡ್ಜೆಟ್ ಪ್ರೆಸೆಂಟೇಷನ್ ಇದೆ, ಆದ್ದರಿಂದ ನಾಡಿದ್ದು ಆಗಬಹುದು. ನನ್ನ ಸೂಚನೆ ಏನೆಂದರೆ, ಸಾಕಷ್ಟು ಸಮಯವಿಲ್ಲದೇ ಇರುವುದರಿಂದ, ಅವರು ಏನು ಒಂದು ಹೇಳಿಕೆಯನ್ನು ಕೊಡುತ್ತಾರೋ ಆ ಹೇಳಿಕೆಯನ್ನು ಮಾನ್ಯ ಸದಸ್ಯರು ಗಮನ ದಲ್ಲಿಟ್ಟುಕೊಂಡು ಬಡ್ಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆಯಾಗಲಿ ಎನ್ನುವುದು.

೬-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಕ್ಷಾಮದ ವಿಷಯದ ಬಗ್ಗೆ ಇಲ್ಲಿ ಯಾವತ್ತು ಚರ್ಚೆಯಾಗಬೇಕು ಎನ್ನುವ ಬಗ್ಗೆ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಅದರ ಪ್ರಕಾರವೇ ಹೋಗೋಣ.

ಶ್ರೀ ಭೀಮಣ್ಣ ಖಂಡ್ರೆ —ಕುಡಿಯುವ ನೀರಿನ ಸಮಸ್ಯೆ ಬಹಳ ಕಠಿಣವಾಗಿದೆ, ಅದರ ಬಗ್ಗೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಕೆಲವು ಪ್ರಶ್ನೆಗಳು ಸನ್ಮಾನ್ಯ ಮುಖ್ಯ ಮಂತ್ರಿಯವರ ಉತ್ತರದಿಂದ ಉದ್ಭವವಾಗಿವೆ. ಇದರಲ್ಲಿ ಒಂದು ವಿಚಾರವಿದೆ. ಕಳೆದ ೩ ವರ್ಷಗಳಲ್ಲಿ ರಾಜ್ಯಪಾಲರು ಯಾವುದೇ ನೀತಿಯ ಬಗ್ಗೆ ಪ್ರಸ್ತಾಪ ಮಾಡಿರಲಿಲ್ಲವೆಂದು ಅದರಲ್ಲಿ ರಾಜಕಾರಣ ಬೆರೆಸಿ ದ್ದಾರೆಂದು ಹೇಳಿದರು ಆದರೆ ಈ ಸಲದ ರಾಜ್ಯಪಾಲರ ಭಾಷಣ ಮಾತ್ರ ಸಂಸದೀಯವಾಗಿದೆ ಮತ್ತು ಇದರಲ್ಲಿ ರಾಜಕಾರಣವನ್ನೇ ಬೆರೆಸಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ್ದಾರೆ. ರಾಜಕಾರಣ ಬೆರೆಸುವುದಕ್ಕೆ ಇವರಿಗೆ ಸಾಧ್ಯವೇ ಇಲ್ಲ, ಏತಕ್ಕೆಂದರೆ ಜನ ನಿಮಗೆ ಸರ್ಕಾರ ನಡೆಸಿ ಎಂದು ಹೇಳಿಲ್ಲ. ಆದುದರಿಂದ ಯಾವ ಧೈರ್ಯದಿಂದ ನೀವು ಹೇಳಿಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—೧೯೮೦ನೇ ಇಸವಿಯಲ್ಲಿ ತಮಗೆ ಆಶೀರ್ವಾದ ಮಾಡಿ ಕಳುಹಿಸಿದ್ದರೋ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದುದರಿಂದ ಮಾನ್ಯ ಮುಖ್ಯಮಂತ್ರಿಗಳವರು ನಿಜವಾಗಿ ವಾಸ್ತವಾಂಶವನ್ನೇ ಹೇಳಿದ್ದಾರೆ. ಯಾವಾಗ ರಾಜಕೀಯ ಇಚ್ಛಾಶಕ್ತಿ ಇಲ್ಲವೋ ನಿರ್ವೀರ್ಯರಾಗಿದ್ದಾರೋ ಆಗ ಈ ಪ್ರಶ್ನೆಯೇ ಉದ್ಭವವಾಗುವುದಿಲ್ಲ

ಶ್ರೀ ಎಸ್.ಆರ್. ಬೊಮ್ಮಾಯಿ.—ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ರಾಜಕೀಯ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸುವುದಕ್ಕೆ ನಿಮಗೆ ಆಗಿಲ್ಲವೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ಆ ಜಾಗದಲ್ಲಿ ಕೂತು ತಂಬಾ ಕೆಲಸ ಮಾಡಬೇಕಾಗಿರುತ್ತದೆ. ತಾವೇ ಈ ಕಡೆಗೆ ಶೀಘ್ರವಾಗಿ ಬಂದು ಕೂತುಕೊಳ್ಳಲೂ ಬಹುದು. ಅದರ ಬಗ್ಗೆ ನಾವು ಏನೂ ಕಾಳಜಿ ವಹಿಸುತ್ತಿಲ್ಲ. ಆದುದರಿಂದ ನನಗೆ ಗೊತ್ತಿದ್ದ ಹಾಗೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ದೇವೇಗೌಡರವರಿಂದ ಈ ಮಾತು ಬರಬಾರದು ...

ಶ್ರೀ ಎಚ್.ಡಿ. ದೇವೇಗೌಡ.—ಆದುದರಿಂದ ಈಗ ಪುನಃ ವಿರೋಧ ಪಕ್ಷದ ನಾಯಕರಿಗೆ ಭಾಷಣ ಮಾಡಲಿಕ್ಕೆ ಅವಕಾಶವಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗಲೂ ಸಹ ಸರ್ಕಾರದ ತತ್ವವನ್ನು ಕಟುವಾಗಿ ಟೀಕೆ ಮಾಡಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೂ ಮಾತನಾಡಿದ್ದೇನೆ. ಆದರೆ ಸರ್ಕಾರ ಉತ್ತರವನ್ನು ಕೊಟ್ಟಾದ ಮೇಲೆ ಈ ರೀತಿ ಭಾಷಣ ಮಾಡಲಿಕ್ಕೆ ಅವಕಾಶವಿಲ್ಲ, ಒಂದೆರಡು ಕ್ಲಾರಿಫಿಕೇಷನ್ ಮಾತ್ರ ಕೇಳಬಹುದು. ಆದುದರಿಂದ ಈಗ ತಾವು ಹೊಸದಾಗಿ ಒಂದು ಸತ್‌ಸಂಪ್ರದಾಯವನ್ನು ಹಾಕಿದ ಹಾಗಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ನೀತಿಯ ವಿಚಾರ ಪ್ರಸ್ತಾಪಕ್ಕೆ ಬಂತು. ಆದುದರಿಂದ ನಾನು ಆ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ. ಈ ಸಾರಿ ಏನು ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಅದರಲ್ಲಿ ಹೊಸದಾಗಿ ನೀತಿಯ ಪ್ರಶ್ನೆ ಏನೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತಿಗೆ ಈ ಸಭೆ ಮುಕ್ತಾಯವಾದ ಮೇಲೆ ನಮಗೂ ನಿಮಗೂ ಇವತ್ತಿಗೇ ಸಂಬಂಧ ಕಡಿದು ಹೋಗುತ್ತದೆಯೋ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಮುಖ್ಯಮಂತ್ರಿಗಳವರು ಐ.ಆರ್.ಡಿ.ಪಿ ಯಲ್ಲಿ ಹಣ ಹೇರಳವಾಗಿ ಖರ್ಚಾಯಿತು, ಆ ಹಣ ಎಲ್ಲಿಗೆ ಹೋಯಿತು ಎಂದು ಪ್ರಶ್ನೆ ಹಾಕಿದರು. ಈಗ ಮಾನ್ಯ ಮುಖ್ಯಮಂತ್ರಿಗಳವರೇ ಅಧಿಕಾರ ವಹಿಸಿಕೊಂಡ ಮೇಲೆ ನಮಗೆ ಈ ರೀತಿಯಾಗಿ ಪ್ರಶ್ನೆ ಹಾಕಬಾರದಾಗಿತ್ತು. ಅದಕ್ಕೆ ಬೇಕಾದ ಅಂಕಿಅಂಶಗಳನ್ನು ಸಂಗ್ರಹಿಸಲಿ. ಅದರ ಮೇಲೆ ನಾವು ಸಹ ಮಾತನಾಡುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾಡಿದ ಭಾಷಣದ ಮೇಲೆ ಮರು ಭಾಷಣ ಆಗಬಾರದು. ಅದು ಏನೇ ಇರಲಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ಹೇಳಿಕೆಯನ್ನು ಪುಷ್ಟೀಕರಿಸುವುದಾದರೆ... ಆ ಹಣ ಎಲ್ಲಿ ಹೋಯಿತು ಎಂದು ತಾವು ಹೇಳಿಕೆಯನ್ನು ಕೊಡಬೇಕಾಗಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಸರಿ ಕೊಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಡಳಿತ ಭಾಷೆಯಾದ ಕನ್ನಡದ ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳವರು ಈಗ ಜಾರಿ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಇದನ್ನು ನಾವು ಕೂಡ ಜಾರಿ ಮಾಡಿದ್ದೆವು....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಇಲ್ಲಿ ಎದ್ದು ನಿಂತು ಮಾತನಾಡುತ್ತಿರುವಾಗ ಹೀಗೆ ಅಡ್ಡಿಪಡಿಸಿದರೆ ಹೇಗೆ ? ಸನ್ಮಾನ್ಯ ಮುಖ್ಯಮಂತ್ರಿಗಳವರು ಮಾತನಾಡುವಾಗ ನಾವು ಯಾರೂ ಅಡ್ಡಿಪಡಿಸಲಿಲ್ಲ. ನನ್ನ ಪ್ರಶ್ನೆ ಏನೆಂದರೆ, ಇವತ್ತು ಕನ್ನಡ ಆಡಳಿತ ಭಾಷೆಯಾಗಬೇಕು ಎಲ್ಲಾ ಹಂತದಲ್ಲಿಯೂ, ಆಡಳಿತ ಮಟ್ಟದಲ್ಲಿಯೂ, ನ್ಯಾಯಾಂಗ ಮಟ್ಟದಲ್ಲಿಯೂ ಮತ್ತು ಜಿಲ್ಲಾ ಮಟ್ಟದಲ್ಲಿಯೂ ಕನ್ನಡ ಭಾಷೆ ಕಾರ್ಯಗತವಾಗುತ್ತದೆಂದು ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಹೇಳಿಕೆ ಮುಖಾಂತರವಾಗಿ ಸರ್ಕಾರದ ಇಚ್ಛೆಯನ್ನು ಏನು ವ್ಯಕ್ತಪಡಿಸಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತನ್ನಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಅಧ್ಯಕ್ಷರೇ, ಎಕ್ಸೈಜ್ ಆಕ್ಷನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಇದಕ್ಕೆ ಸಂಬಂಧಪಟ್ಟಿದೆಯೋ ? ನೋಟೀಸ್ ಕಳುಹಿಸಿ ಕೊಡಿ, ಪುನಃ ಬೇಕಾದರೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಂ. ರಘುಪತಿ.—ಸ್ವಾಮಿ, ನನದೊಂದು ಕ್ರಿಯಾಲೋಪ. ಏನೆಂದರೆ, ಈಗ ಏನು ವಿಷಯ ಪ್ರಸ್ತಾಪವಾಗುತ್ತಿದೆ ಇದನ್ನು ಮೊದಲು ಮಂಡಿಸಿ ಮಾತನಾಡಿದವರು ಶ್ರೀ ಕೆ.ಜಿ. ಮಹೇಶ್ವರಪ್ಪನವರು. ಈಗ ಅದರ ಬಗ್ಗೆ ಎಲ್ಲಾ ಸದಸ್ಯರು, ವಿರೋಧ ಪಕ್ಷದ ನಾಯಕರವರು ಮಾತನಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳವರು ಉತ್ತರ ನೀಡಿದ್ದಾರೆ. ಇದಾದ ಮೇಲೆ ಪುನಃ ಮಾನ್ಯ ವಿರೋಧ ಪಕ್ಷದ ನಾಯಕರವರಿಗೆ ಭಾಷಣ ಮಾಡುವುದಕ್ಕೆ ಅವಕಾಶವಿದೆಯೇ ? ಎಂದೆಂದಿಗೂ ಇಲ್ಲವೆಂಬುದು ಹಿಂದಿನ ನಡವಳಿಕೆಗಳನ್ನು ತೆಗೆದು ನೋಡಿದರೆ ಸಂಪೂರ್ಣವಾಗಿ ಗೊತ್ತಾಗುತ್ತದೆ. ಈ ಹಿಂದೆ ಶ್ರೀ ವೀರಪ್ಪ ಮೊಯ್ಲಿಯುವರು ಮಂತ್ರಿಯಾಗಿದ್ದವರು, ಅವರಿಗೆ ಇದೆಲ್ಲಾ ಮರೆತುಹೋಯಿತೇ ? ಯಾರ ಮೇಲೆಯೇ ಆಗಲೀ ಒಂದು ಆಪಾದನೆ ಮಾಡಬೇಕಾಗಿದ್ದರೆ ಅದಕ್ಕೆ ಒಂದು ಕ್ರಮವಿದೆ, ಅದರ ಪ್ರಕಾರವಾಗಿ ನೋಟೀಸ್ ಕಳುಹಿಸಿ ಕೊಡಬೇಕಾಗಿರುತ್ತದೆ. ಈಗ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಮುಖ್ಯಮಂತ್ರಿಗಳವರು ಉತ್ತರ ಕೊಟ್ಟಿದ್ದು ಆಗಿದೆ, ಈಗ ಬೇರೆ ವಿಷಯವನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್.- ತಮಗೆ ಕೋಪ ಏತಕ್ಕೆ ?

ಶ್ರೀ ಎಂ. ರಘುಪತಿ.—ಇದಕ್ಕೆ ಅವಕಾಶವಿಲ್ಲವಾದ್ದರಿಂದ ಹೊಸ ಪದ್ಧತಿಯನ್ನು ಹಾಕಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮ್ಯಾನ್ಯ ಶ್ರೀ ಕೆ. ಎಚ್. ರಂಗನಾಥ್‌ರವರು ಪ್ರಿಸೈಡಿಂಗ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ, ಅವರ ಪಕ್ಕದಲ್ಲಿ ಕುಳಿತಿರತಕ್ಕಂಥ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾನು ೮ ವರ್ಷಗಳ ಕಾಲ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ ಅನುಭವದಲ್ಲಿ ಯಾವುದೇ ಸನ್ನಿವೇಶದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಮುಖ್ಯ ಮಂತ್ರಿಗಳವರು ಉತ್ತರ ಕೊಟ್ಟಾದ ಮೇಲೆ ಮರು ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿರ ತಕ್ಕಂಥದ್ದು ಇಲ್ಲ.

ಮೊನ್ನೆ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿ ವಿರೋಧ ಪಕ್ಷದ ನಾಯಕರಿಗೆ ಸ್ವಲ್ಪ ಸಮಾಧಾನದಿಂದ ಇರಿ, ಹೊಸ ಸರ್ಕಾರಕ್ಕೆ ಆರು ತಿಂಗಳಾದರೂ ಅವಕಾಶ ಕೊಡಿ ಎಂದು ಹೇಳಿದ್ದೆ. ಆ ಜಾಗದಲ್ಲಿ ಕುಳಿತು ಕೆಲಸ ಮಾಡುವಾಗ ಸರ್ಕಾರದ ಎಲ್ಲ ಕೆಲಸಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಇವರು ಮುಖ್ಯ ಮಂತ್ರಿಗಳಾಗಿ ೨ ತಿಂಗಳಾಗಿದೆ. ಆಗಲೇ ಏನೋ ಆಗಿದೆ ಎಂದು ತೋಳ-ಕುರಿಮರಿ ಕಥೆ ಹೇಳಿದ ಹಾಗೆ ಹೇಳಿದರೆ ಹೇಗೆ ? ರಾಜ್ಯಪಾಲರ ಭಾಷಣಕ್ಕೂ ಗರ್ವನರ ಕಥೆಗೂ ಏನು ಸಂಬಂಧ? ಬಹುಶಃ ಇದು ನಿಮ್ಮ ಕಾರ್ಯವ್ಯಾಪ್ತಿಗೆ ಅತ್ಯಂತ ಹೆಚ್ಚು ಶಕ್ತಿ ತರುತ್ತದೆಂದು ತಿಳಿದುಕೊಂಡಿದ್ದರೆ ನನ್ನ ಅಡ್ಡಿಯಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಉತ್ತರ ನೀಡಿದ ಮೇಲೆ ಮತ್ತೆ ಚರ್ಚೆ ಮಾಡುವುದಕ್ಕೆ ಕಾಲ ಇಲ್ಲ ಎನ್ನುವ ಪ್ರಶ್ನೆ ಇಲ್ಲ. ನಾಳೆ ಆಯವ್ಯಯವನ್ನು ಮಂಡನೆ ಮಾಡುತ್ತಾರೆ, ಆಗ ಅದರ ಮೇಲಿನ ಚರ್ಚೆಯನ್ನು ತಾವೇ ಮೊದಲಿಗೆ ಪ್ರಾರಂಭಿಸಬೇಕಾಗುತ್ತದೆ. ಆಗ ಏನಿದ್ದರೂ ಹೇಳಬಹುದು. ಆದರೆ ಹೇಳಿದ ವಿಷಯವನ್ನೇ ಮತ್ತೆ ಮತ್ತೆ ಪ್ರಸ್ತಾಪ ಮಾಡುವ ಔಚಿತ್ಯವೇನೆಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯ ಮಂತ್ರಿಯವರು ಉತ್ತರ ಕೊಟ್ಟಮೇಲೆ ಕ್ಲಾರಿಫಿ-ಕೇಷನ್ ಕೇಳುವುದೇನು ಹೊಸದಲ್ಲ. ಒಂದು ವೇಳೆ ಕೇಳದೆ ಇದ್ದರೆ ಹೊಸ ಸಂಪ್ರದಾಯವನ್ನು ಹಾಕಿದಂತಾಗುತ್ತದೆ. ಹಿಂದೆ ತಾವೂ ಕೂಡ ಕೇಳಿದ್ದೀರಿ, ತಾವು ಯಾವ ದಾಟಿಯಲ್ಲಿ ಮಾತನಾಡುತ್ತಿದ್ದೀರಿ ಎಂಬುದು ನನಗೆ ಗೊತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಕ್ಷಮಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಏತಕ್ಕೆ ಅಡ್ಡ ಬರುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಅಡ್ಡ ಬರುತ್ತಿಲ್ಲ, ಇದಕ್ಕೆ ಭಯಪಟ್ಟಿಲ್ಲ. You are setting a bad precedent. I am sorry for that. I never did like this.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಆ ಸ್ಥಾನಕ್ಕೆ ಬಂದು ಎರಡು ತಿಂಗಳಾಗಿದೆ. ಆದ್ದರಿಂದ ದಾರಿ ನೋಡಿಕೊಂಡು ನಡೆಯಿರಿ ಎಂದು ಎಚ್ಚರಿಕೆ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಆ ಒಂದು ಮಾರ್ಗದರ್ಶನವನ್ನು ತಮ್ಮಿಂದ ತೆಗೆದುಕೊಳ್ಳಬೇಕಾಗಿಲ್ಲ

ಶ್ರೀ ಎಂ. ರಘುಪತಿ.—ಸಿ.ಒ.ಡಿ. ವರದಿ ಬಗ್ಗೆ ಹೇಳಿರುವುದನ್ನಾದರೂ ತಾವು ಒಪ್ಪಿಕೊಳ್ಳುತ್ತೀರಾ? ಮುಖ್ಯವಾಗಿ ಅಧ್ಯಕ್ಷರು ನನ್ನ ಕ್ರಿಯಾಲೋಪಕ್ಕೆ ರೂಲಿಂಗ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಈ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ನೀವು ಆ ರೀತಿ ಉತ್ತರ ಕೊಡುವುದು ಇದ್ದರೆ... ..

ಶ್ರೀ ಪಿ. ರಾಮದೇವ್.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ದಯವಿಟ್ಟು ತಾವು ರೂಲ್ ೨೩ನ್ನು ಓದಿ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಒಂದು ಕ್ರಿಯಾಲೋಪ ಇರುವಾಗ ಹೊಸ ಕ್ರಿಯಾಲೋಪ ಬರುವುದಿಲ್ಲ.

ಶ್ರೀ ಪಿ. ರಾಮದೇವ್.—ಆ ಕ್ರಿಯಾಲೋಪಕ್ಕೆ ಬೆಂಬಲ ಕೊಡತಕ್ಕದ್ದು ಈ ರೂಲ್ ೨೩. ರೂಲ್ ೨೩ರ ಈ ರೀತಿ ಹೇಳುತ್ತದೆ:

> "The Chief Minister or any other Minister whether he has previously taken part in the discussion or not, shall on behalf of the Government have a general right of explaining the position of the Government at the end of the discu-sion and the Speaker may enquire how much time will be required for the speech so that he may fix the hour by which the discussion shall conclude."

ಇದಾದಮೇಲೆ, ಕ್ಲಾರಿಫಿಕೇಷನ್ ಕೇಳುವ ಬಗ್ಗೆ ಈ ರೂಲ್‌ನಲ್ಲಿ ಎಲ್ಲಿಯೂ ಹೇಳಿಲ್ಲ. ಆದುದರಿಂದ ದಯಮಾಡಿ ರೂಲನ್ನು ಗಮನಿಸಬೇಕೆಂದು ಹೇಳುತ್ತೇನೆ. ಕ್ಲಾರಿಫಿಕೇಷನ್ ಕೇಳತಕ್ಕ ಪ್ರಸಂಗ ಈಗ ಇಲ್ಲ. ನಾವು ಆ ಕಡೆ ಇದ್ದಾಗ ಶ್ರೀ ಗುಂಡೂರಾಯರು ಉತ್ತರ ಕೊಟ್ಟ ಮೇಲೆ ತೆಪ್ಪಗೆ ಮನೆಗೆ ಹೋಗುತ್ತಿದ್ದೆವು. ಆದ್ದರಿಂದ, ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲದಿರುವುದರಿಂದ ದಯಮಾಡಿ ವಿಷಯವನ್ನು ಮುಕ್ತಾಯ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಆ ರೂಲ್‌ನಲ್ಲಿ ಎಕ್ಸ್‌ಪ್ಲನೇಷನ್ ಬಗ್ಗೆ ಹೇಳಿದ್ದಾರೆ. Explanation means the clarification sought by us and the explanation given by the hon. Minister. ನಾವು ಈಗ ಕ್ಲಾರಿಫಿಕೇಷನ್ ಕೇಳುತ್ತಿದ್ದೇವೆ. ಮಂತ್ರಿಗಳು ಎಕ್ಸ್‌ಪ್ಲನೇಷನ್ ಕೊಟ್ಟನಂತರ ಮುಗಿಯುವುದಿಲ್ಲ. That is the point.

ಶ್ರೀ ಎಸ್. ಆರ್ ಬೊಮ್ಮಾಯಿ. ಇವತ್ತು ನಾನು ವಿರೋಧ ಪಕ್ಷದ ನಾಯಕರ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇನೆ ಆ ಜಾಗದಲ್ಲಿ ನಾನು ಕುಳಿತು ಕೆಲಸ ಮಾಡಿದ್ದೇನೆ, ಮಾನ್ಯ ದೇವೇಗೌಡರೂ ಮಾಡಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಒಂದೆರಡು ಕ್ಲಾರಿಫಿಕೇಷನ್ ಕೇಳತಕ್ಕ ಸಂಪ್ರದಾಯವನ್ನು ಒಪ್ಪುತ್ತೇನೆ. ತಾವು ಎರಡೂವರೆ ಗಂಟೆಗಳ ಕಾಲ ಮಾತನಾಡಿದಾಗ ನಾವೇನು ಅಡ್ಡಿ ಮಾಡಲಿಲ್ಲ. ಮುಖ್ಯ ಮಂತ್ರಿಗಳು ಮಾತನಾಡುವಾಗಲೂ ಕೂಡ ಯಾರೂ ಅಡ್ಡಿ ಮಾಡಲಿಲ್ಲ. ಈ ಸಭೆಯ ನಾಯಕರಾದ ಮುಖ್ಯ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಎಲ್ಲರೂ ಸಹಕರಿಸಬೇಕು. ಈ ಭಾವನೆಯನ್ನಿಟ್ಟುಕೊಂಡು ಗೌರವ ಕೊಡಬೇಕಾಗುತ್ತದೆ. ನೀವು ಮಾತನಾಡುವಾಗ ಗೌರವ ಕೊಟ್ಟಿದ್ದೇವೆ. ಈಗಾಗಲೇ ತಾವು ಉತ್ತರಕ್ಕೆ ಸಂಬಂಧಪಟ್ಟ ಹಾಗೆ ಒಂದೆರಡು ಕ್ಲಾರಿಫಿಕೇಷನ್ಸ್ ಕೇಳಿದ್ದೀರಿ. ೧೯೮೫ರಲ್ಲಿ ಆದ ಪ್ರಕರಣ

ವನ್ನು ಕ್ಲಾರಿಫಿಕೇಷನ್ ರೂಪದಲ್ಲಿ ಈಗ ಕೇಳುವುದಕ್ಕಾಗುವುದಿಲ್ಲ. ಆಪಾದನೆ ಇದ್ದರೆ ನೋಟೀಸ್ ಕೊಡಿ, ಚರ್ಚೆ ಮಾಡೋಣ. ಆದ್ದರಿಂದ, ಇದು ಇಷ್ಟರಮಟ್ಟಿಗೆ ಮಾತ್ರ ಸೀಮಿತವಾಗಿದೆ ಎಂದು ಹೇಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ನಾನೊಂದು ಕ್ರಿಯಾಲೋಪ ಎತ್ತುತ್ತೇನೆ. ಮುಖ್ಯ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ಈ ವಿಷಯವನ್ನು ಕುರಿತು ಮುಂದೆ ಚರ್ಚೆ ಮಾಡಬಹುದೆ ಇಲ್ಲವೆ ಎಂಬ ಬಗ್ಗೆ ರೂಲ್ ೨೩ರಲ್ಲಿ ಸ್ಪಷ್ಟವಾಗಿ "Shall conclude" ಎಂದು ಹೇಳಿದೆ. ಶ್ರೀ ದೇವೇಗೌಡರು ವಿರೋಧ ಪಕ್ಷದಲ್ಲಿದ್ದಾಗ ಪ್ರಶ್ನೆ ಕೇಳಿದ್ದರು ಶ್ರೀ ಬೊಮ್ಮಾಯಿಯವರು ವಿರೋಧ ಪಕ್ಷದಲ್ಲಿದ್ದಾಗ ಪ್ರಶ್ನೆ ಕೇಳಿದ್ದರು, ಆಗ ಅವರಿಗೆ ಅವಕಾಶ ಕೊಟ್ಟಿದ್ದರು ಎಂದರೆ ಆಗುವುದಿಲ್ಲ. ನಮಗೆ ಗೊತ್ತಿರುವುದು ಇಷ್ಟೆ: ಹೊಸದಾಗಿ ರೂಲ್ಸ್ ಇದೆ, ಇದನ್ನು ನಾವು ಅನುಸರಿಸಬೇಕಾಗಿದೆ, ಈ ರೂಲ್ಸ್‌ನಲ್ಲಿ "Shall conclude" ಎಂದು ಇದೆ. ತಮಗೆ ಕೂಡ ಚರ್ಚೆಗೆ ಅವಕಾಶ ಕೊಡುವುದಕ್ಕೆ ಅಧಿಕಾರ ಇಲ್ಲ. ಆದ್ದರಿಂದ ದಯಮಾಡಿ ಈ ವಿಷಯವನ್ನು ಇಲ್ಲಿಗೆ ಮುಗಿಸಿ ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ವ್ಯಾಖ್ಯಾನ ಮಾಡಲಿಕ್ಕೆ ನಿಂತಿಲ್ಲ.

MR. DEPUTY SPEAKER.—You may seek clarification. The precedents and practice of the House shall have to be taken into consideration and I allow hon. Leader of the Opposition only to seek clarifications and I will not allow him to debate on the matter. He may seek one or two clarifications.

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಷಮಿಸಿ. ಕ್ಲಾರಿಫಿಕೇಷನ್ಸ್‌ನ್ನು ತಾವು ಹೇಗೆ ಕೇಳಬೇಕೆಂದು ಹೇಳಿದರೆ ಆ ರೀತಿ ಕೇಳುತ್ತೇನೆ.

MR. DEPUTY SPEAKER.—If you have got any doubt on the reply given by the hon.Chief Minister, you may seek clarifications. That is all.

ಶ್ರೀ ಎಂ. ವೀರಪ್ಪ ಮೊಯಿಲಿ.—ವಂದನೆಗಳು. ಈಗ ನಾವು ೩ನೇ ಭಾರಿಗೆ ವಿಧಾನ ಸಭೆಗೆ ಬಂದಿದ್ದೇವೆ. ದಯಮಾಡಿ ಕ್ಷಮಿಸಿ. ಇತಿಮಿತಿಯನ್ನು ಅನುಸರಿಸಿಕೊಂಡೇ ನಾವು ಕೂಡ ಇಲ್ಲಿ ಈ ಸದನದಲ್ಲಿ ಕಾರ್ಯಕಲಾಪ ಮಾಡಬೇಕೆಂಬ ಇಚ್ಛೆ ಇದೆ. ಮಾನ್ಯ ಬೊಮ್ಮಾಯಿಯವರು ಕೂಡ ಮುಖ್ಯ ಮಂತ್ರಿಗಳು ಮಾತನಾಡುವಾಗ ನಮ್ಮಲ್ಲಿ ಯಾರೂ ಅಡ್ಡಿ ಆತಂಕ ಮಾಡಲಿಲ್ಲವೆಂದು ಹೇಳಿದರು. ಆ ರೀತಿ ಮಾಡುವ ಅಗತ್ಯವೂ ಇಲ್ಲ, ಮಾಡಲೂ ಬಾರದ . ಆದರೆ ನಾನು ಕೇಳುವಾಗ ಅಡ್ಡಿ ಮಾಡುವು ದಿದ್ದರೆ ಹೇಗೆ ಮಾತನಾಡುವುದು ಆತುರ ಬೇಡ ಅವಕಾಶ ಕೊಟ್ಟರೆ ಎರಡು ನಿಮಿಷದಲ್ಲಿ ಹೇಳ ಬಹುದು, ಇಲ್ಲದಿದ್ದರೆ ಆಗುವುದಿಲ್ಲ. ಈಗ ಎಕ್ಸೈಜ್ ಆಕ್ಷನ್ ಬಗ್ಗೆ ಮುಖ್ಯ ಮಂತ್ರಿಗಳು ಸಂಪೂರ್ಣ ವಿವರಣೆ ಕೊಡುವುದಾಗಿ ಹೇಳಿದರು. ಒಂದು ಸಾವಿರ ಲೈಸೆನ್ಸ್ ಅನ್ನು ಒಂದೇ ದಿನದಲ್ಲಿ ಕೊಡ ಬೇಕಾಗುತ್ತದೆಂದರು. ಜಡ್ಜ್‌ಮೆಂಟಿನಲ್ಲಿ ಫೇವರಿಟಿಸಂ ಆಗಿದೆ ಎಂದು ಕಾಣಿಸಿದ್ದಾರೆಯೋ ಎಂಬುದು ನನ್ನ ಪ್ರಶ್ನೆ. ಎರಡನೆಯದಾಗಿ, ಎಸ್. ಜಿ. ಭಟ್‌ರವರ ಬಗ್ಗೆ ಹೇಳಿದರು. ದಯಮಾಡಿ ಸರ್ಕಾರೀ ಆಜ್ಞೆಯನ್ನು ನೋಡಬೇಕು. ಅದನ್ನು ನೋಡಿದ್ದರೆ ಈ ತರಹ ಹೇಳಿಕೆ ಕೊಡುತ್ತಿರಲಿಲ್ಲ. ಅವರು ಸರಿಯಾದ ಮಾಹಿತಿ ಕೊಡುತ್ತಿಲ್ಲ. ಇದು ಬಹಳ ಮುಖ್ಯವಾದ ಪ್ರಶ್ನೆ. ೩–೩–೧೯೮೩ರ ಮಾಹಿತಿ ಯನ್ನು ಕೊಡುವ ಪ್ರಶ್ನೆ ಅಲ್ಲ. ನಮಗೆ ಎಲ್ಲ ಅಧಿಕಾರಿಗಳ ಪರಿಚಯ ಇದೆ ಅಂದಕೂಡಲೇ ಏನೂ ಆಗುವುದಿಲ್ಲ. ಸರ್ಕಾರಿ ಆಜ್ಞೆ ಹೊರಡುವುದು ಸಾರ್ವತ್ರಿಕವಾಗುತ್ತದೆ. ನೀವು ಅದನ್ನು ಕಬಾಡಿನಲ್ಲಿ ಇಡುವುದಿಲ್ಲ. ೩–೩–೧೯೮೩ರ ಸರ್ಕಾರೀ ಆಜ್ಞೆ ಏನಿದೆ ಇದು ನಮಗೆ ಯಾರೋಕೊಟ್ಟ ಮಾಹಿತಿ ಅಲ್ಲ. ಇದರಲ್ಲಿ ಸ್ಪಷ್ಟವಾಗಿದೆ, ಶ್ರೀ ಎಸ್. ಜಿ. ಭಟ್ ಎಂಬುವವರು ಸ್ಪೆಷಲ್ ಸ್ಟಡೀಸ್ ಡಿವಿಜನ್ನಿನ ಪ್ಲಾನಿಂಗ್ ಇಲಾಖೆಯ ಜಾಯಿಂಟ್ ಡೈರೆಕ್ಟರ್; ಅವರನ್ನು ಅಪ್‌ಗ್ರೇಡ್ ಮಾಡಬೇಕೆಂದು ಆಜ್ಞೆ ಆಗಿದೆ. ಈ ಆಜ್ಞೆಯನ್ನು ಓದಿ ಹೇಳಬಯಸುತ್ತೇನೆ.

"Subsequently the upgraded post of Director, DRP Division, was filled by promotion of C.M.Basavana Gowda, Joint Director, of the said division."

ಈ ಒಂದು ಡಿವಿಜನ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಆಗಿದ್ದ ಶ್ರೀ ಬಸವನಗೌಡರು ಆ ಪೋಸ್ಟ್ ಅಪ್‌ಗ್ರೇಡ್ ಆದಮೇಲೆ ಡೈರೆಕ್ಟರ್ ಆದರು.

"It has now been decided that the post of the Joint Director, Special Studies Division, also be similarly upgraded to that of Director."

ಜಾಯಿಂಟ್ ಡೈರೆಕ್ಟರ್ ಆಗಿರುವ ಭಟ್ ಅವರನ್ನು ಬಸವನಗೌಡರನ್ನು ಡೈರೆಕ್ಟರ್ ಮಾಡಿದಹಾಗೆ ಅದೇ ಕಾರ್ಯಕ್ರಮದಲ್ಲಿ...

ಶ್ರೀ ರಾಮಕೃಷ್ಣ ಹೆಗಡೆ.—ಅದು ಪ್ರೊಮೋಷನ್ ಅಲ್ಲ, ಪೋಸ್ಟ್ ಅಪ್‌ಗ್ರೇಡ್ ಮಾಡಿರುವುದು This proposal was voted when you were the Minister.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗಲಿ. ನನ್ನ ಪ್ರಶ್ನೆ ಇಷ್ಟೆ, ಪ್ರೊಮೋಷನ್ ಮಾಡುವುದಕ್ಕೆ ನನ್ನ ಅಡ್ಡಿ ಇಲ್ಲ. ಅಪ್‌ಗ್ರೇಡ್ ಮಾಡುವುದಕ್ಕೂ ನನ್ನ ಅಡ್ಡಿ ಇಲ್ಲ. ಆದರೆ ಇದಕ್ಕೆಲ್ಲಾ ಕೆಲವು ನಿಯಮಗಳಿವೆ. ಅದನ್ನು ಅನುಸರಿಸಿದ್ದೀರಾ ಎಂಬುದು ಪ್ರಶ್ನೆ. ಎರಡನೆಯದಾಗಿ ಜೂನ್ ೧೯೮೩ರಲ್ಲಿ ಆಗಬೇಕಾದ ಪ್ರೊಮೋಷನ್ ಬಗ್ಗೆ ಮೂರು ತಿಂಗಳ ಮೊದಲು ಅಂದರೆ ಮಾರ್ಚ್ ತಿಂಗಳಲ್ಲೇ ಹುಕುಂ ಅನ್ನು ಹೊರಡಿಸುವ ಅವಸರ ಏನಿತ್ತು ಎಂಬುದು ಮೂಲಭೂತವಾದ ಪ್ರಶ್ನೆ. The promotion will come into effect from 20-6-1983.

SRI RAMAKRISHNA HEGDE.—It is not promotion. The post is upgraded. That's all.

SRI M. VEERAPPA MOILY.—Joint Director is S. P. Bhat. Upgradatin of that Joint Director means upgradation of S. P. Bhat.

ಶ್ರೀ ಎಸ್. ಬಂಗಾರಪ್ಪ.—ಇವರನ್ನು ಬಿಟ್ಟರೆ ಬೇರೆ ಯಾರೂ ಜಾಯಿಂಟ್ ಡೈರೆಕ್ಟರ್ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ಪೆಷಲ್ ಡಿವಿಷನ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಬೇರೆ ಯಾರೂ ಇಲ್ಲ. ಅವರನ್ನು ಅಪ್‌ಗ್ರೇಡ್ ಮಾಡುವುದೆಂದರೆ ಅವರಿಗೆ ಡೈರೆಕ್ಟರ್ ಹುದ್ದೆ ಕೊಡುವ ಉದ್ದೇಶದಿಂದ ಮಾಡಿದ್ದಾರೆ. ಅದನ್ನು ಕ್ರಮಬದ್ಧವಾಗಿ ಮಾಡಬೇಕಾಗಿತ್ತು. ಜೂನ್‌ನಲ್ಲಿ ಜಾರಿಗೆ ಕೊಡುವ ಹುಕುಂ ಅನ್ನು ಇವತ್ತು ಇಷ್ಟು ಮಾಡಲಿಕ್ಕೆ ಪ್ರೆಪ್ರೈಟ್ ಏನಿತ್ತು ? It is minimum understanding Intention of the Government is very clear. ನಾವು ಇದನ್ನೆಲ್ಲಾ ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳಬೇಕೆ ?

SRI S.R. BOMMAI.—The Order itself is very clear. ಮೊದಲಿನಿಂದಲೂ ಈ ರೀತಿ ಪೋಸ್ಟ್ ಅಪ್‌ಗ್ರೇಡ್ ಮಾಡುವುದು ಸರ್ಕಾರದಲ್ಲಿ ನಡೆದಿದೆ. ಇದಕ್ಕೆ ಸಾವಿರಾರು ಉದಾಹರಣೆಗಳಿವೆ. This is the normal course. There is nothing wrong in it. ನಿಮ್ಮ ಕಾಲದಲ್ಲಿ ಕೂಡ ಈ ರೀತಿ ಆಗಿವೆ. ಹಿಂದೆಯೂ ಆಗಿವೆ. ಮುಂದೆ ಕೂಡ ಆಗುತ್ತದೆ. ಇದೇನೂ ಹೊಸದಲ್ಲ. ಪೋಸ್ಟ್ ಅಪ್‌ಗ್ರೇಡ್ ಆಗಿದೆ. ಅದಕ್ಕೆ ಯಾರು ಬರುತ್ತಾರೋ ಗೊತ್ತಿಲ್ಲ.

MR. DEPUTY SPEAKER.—Have you got a copy of the order Sri Moily ?

SRI M. VEERAPPA MOILY.—Yes.

MR. DEPUTY SPEAKER.—Then please pass on

SRI M. VEERAPPA MOILY —That is with the Government. Why should I give a copy of that order ?

SRI RAMAKRISHNA HEGDE —In the order has it been stated that he has been promoted ?

SRI M. VEERAPPA MOILY.—It is stated that the post is upgraded.

SRI RAMAKRISHNA HEGDE.—Only the post is upgraded. Can't you understand this much ?

SRI M. VEERAPPA MOILY.—Sir, please try to understand. There is only one person. With an intention to promote him you have upgraded the post.

(*Interruptions*)

SRI M. VEERAPPA MOILY.—Don't mislead the House. ಕಣ್ಣು ಕಾಣದೇ ಇರುವವರಿಗೂ ಇದು ಅರ್ಥವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರ ವಾದಸರಣಿಯನ್ನು ನೋಡಿದರೆ ಆ ಹುದ್ದೆಯನ್ನು ಅಪ್‌ಗ್ರೇಡ್ ಮಾಡಿ ಓನೇ ತಿಂಗಳಲ್ಲಿ ಆ ಹುದ್ದೆಗೆ ಪ್ರೊಮೋಟ್ ಮಾಡಿ ಹಾಕುತ್ತಾರೆಂಬ ಶಂಕೆ ಅವರಿಗಿದೆ. ಪೋಸ್ಟ್ ಅಪ್‌ಗ್ರೇಡ್ ಮಾಡಿದ್ದಾರೆ; ಇದರ ಜೊತೆಗೆ ಓನೇ ತಿಂಗಳಿಗೆ ಪ್ರೊಮೋಟ್ ಮಾಡಿ ಭರ್ತಿ ಮಾಡುತ್ತಾರೆ ಎಂಬುದು ಅವರ ಆಪಾದನೆ. ಒಬ್ಬರೇ ಒಬ್ಬರು ಜಾಯಿಂಟ್ ಡೈರೆಕ್ಟರ್ ಇರುವುದರಿಂದ ಅವರಿಗೆ ಆ ಹುದ್ದೆಯನ್ನು ಕೊಡುತ್ತೀರಿ ಎಂಬ ಶಂಕೆ ವ್ಯಕ್ತಮಾಡಿದ್ದಾರೆ. ತಾವೂ ಸರ್ಕಾರವನ್ನು ನಡೆಸಿದ್ದೀರಿ. ಒಬ್ಬ ಜಾಯಿಂಟ್ ಡೈರೆಕ್ಟರ್ ಅವರನ್ನಾದರೂ ಸರ್ಕಾರ ಬೇಕಾದರೆ ಬದಲಾವಣೆ ಮಾಡಬಹುದು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮೂರು ವರ್ಷದಲ್ಲಿ ಎಷ್ಟು ಸಾರಿ ತಾವು ಬದಲಾವಣೆ ಮಾಡಿದ್ದೀರಿ ? ಒಂದು ವೇಳೆ ಸರ್ಕಾರಕ್ಕೆ ಸೂಟ್ ಆಗತಕ್ಕ ಅಧಿಕಾರಿ ಸಿಗದಿದ್ದರೆ ಪೋಸ್ಟ್ ಎನ್‌ಕೇಡರ್ ಮಾಡುವುದು. ಡೀಕೇಡರ್ ಮಾಡುವುದು, ಈ ರೀತಿ ನಡೆದಿರುವ ಬಗ್ಗೆ I can give umpteen number of instances. I sought an explanation on the floor of this House but I was unable to get the answer for nearly two years, But I will assure on behalf of the Government that we are not going to give such opportunity hereafterwards.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಭಾಷಣ ಮಾಡಬಹುದು. ಆದರೆ ತಾವು ಮಾಡತಕ್ಕ ನಡವಳಿಕೆಯನ್ನು ನೋಡೋಣ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು ಒಂದು ಕ್ರಿಯಾಲೋಪ ಎತ್ತುತ್ತಿದ್ದೇನೆ. ನಿನ್ನೆ ದಿವಸ ಭಾಷಣ ಮಾಡುವಾಗ ಮಾನ್ಯ ವೀರಪ್ಪ ಮೊಯಿಲಿಯವರು ಆ ಅಧಿಕಾರಿಗೆ ಸರ್ಕಾರ ಬಡ್ತಿ ಕೊಟ್ಟಿದೆ ಎಂದು ಹೇಳಿದರು. ಇವತ್ತು ಪೋಸ್ಟ್ ಅಪ್‌ಗ್ರೇಡ್ ಆಗಿದೆ ಎಂದು ಹೇಳುತ್ತಿದ್ದಾರೆ. ರೆಕಾರ್ಡ್‌ನಲ್ಲಿ ಆ ರೀತಿ ಬಡ್ತಿ ಕೊಟ್ಟಿದೆ ಎಂದು ಹೇಳಿದ್ದು ನಿಜವಾದರೆ If what I have heard is correct, I am moving a motion of privilege because he has misled the House.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರು ಮಿಸ್‌ಲೀಡ್ ಮಾಡಿದ್ದಾರೆ, ಪ್ರಿವಿಲೇಜ್ ಮೋಷನ್ ಯಾರ ಮೇಲೆ ತರಬೇಕು ಎಂಬುದನ್ನು ಆ ಮೇಲೆ ನೋಡೋಣ, ನಾನು ಹೇಳುವುದನ್ನು ಕೇಳುವಂಥ ತಾಳ್ಮೆ ಇಲ್ಲದಿದ್ದರೆ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ,—ತಾವು ದಯವಿಟ್ಟು ಕುಳಿತುಕೊಳ್ಳಿ. I can't leave the House to be misled by you. ಈ ಆರ್ಡರ್ ರೆಫರೆನ್ಸ್‌ನಲ್ಲಿ ಏನಿದೆ ಎಂಬುದನ್ನು ಓದುತ್ತೇನೆ.

1) D.O. letter dated 31 3-81 of Dr. M Nanjundappa, Secretary to Government Planning Department, Government of Karnataka, to Planning Commission, Government of India, new Delhi.

2) Correspondence ending with Government of India letter date 18-8-81 from Dy. Advisor, NEC, Planning Commission Government of India, Delhi.

ಸರ್ಕಾರಿ ಆಜ್ಞೆಯು ಪ್ರಿಯಾಂಬಲ್‌ನಲ್ಲಿ ಏನಿದೆ ಎಂಬುದನ್ನು ಓದುತ್ತೇನೆ.

Government Order dated 26-2-82 ..

"Pursuant to the State Government's proposal for further strengthening of the Planning machinery made in the letter read at (1) above the Planning Commission in its letter read at (2) above conveyed its approval to have the additional post of two Directors, one to head the District and Regional Planning Division and the other to head the Special Studies Division.

ಇದನ್ನು ಬರೆದವರು ಯಾರು ಸ್ವಾಮಿ ? ಈ ಸರ್ಕಾರ ಬಂದಮೇಲೆ ಬರೆಯಿತಾ ? ಇವರೇನು ಹೇಳುತ್ತಾರೋ ನನಗೆ ಗೊತ್ತಾಗುತ್ತಿಲ್ಲ. ಅದಾದಮೇಲೆ ಆರ್ಡರ್ ಏನಿದೆ ಎಂದರೆ,

Government are pleased to accord sanction to the upgradation of the post of Joint Director, Special Studies Division, according to the sanction received from the Planning Commission as Director w.e.f. 20-6-83. The upgraded post of Director will be in the scale of Rs. 1950-2450/-

Government further direct that the upgraded post of Director will be filled up on the first occasion by promotion of the Join Director in the Special Studies Division if he is found suitable for promotion."

ತಾವು ಏತಕ್ಕೆ ಸುಮ್ಮನೆ *ಹೇಳುತ್ತೀರಿ ? ಈ ಕೆಲಸ ಮಾಡಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ. —*ಹೇಳುವುದು ತಾವು, ನಾನಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸುಮ್ಮನಿರಿ...

(ಗೊಂದಲ)

Mr. DEPUTY SPEAKER.—Please, resume your seats. I am satisfied with the answer given by the Government.

SRI M. VEERAPPA MOILY.—Presiding Officer cannot come to that conclusion.

(ಗೊಂದಲ)

---

* The wordis expunged as ordered by the chair.

6–30 P.M.

MR. DEPUTY SPEAKER.—I am satisfied with the answer given by the Government.

SRI M. VEERAPPA MOILY.—I am sorry, the Presiding Officer cannot come to that conclusion. How can the Presiding Officer come to that conclusion ? I have not yet sought the clarification.

MR. DEPUTY SPEAKER.—You have sought the clarification and the answer is given by the Government.

SRI M. VEERAPPA MOILY.—Sir......

(*Interruption*)

SRI BHIMANNA KHANDRE.—Point of order.

MR. DEPUTY SPEAKER.—What is your point of order ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮುಖ್ಯಮಂತ್ರಿಗಳು ಏನು ಪದವನ್ನು ಉಪಯೋಗಿಸಿದ್ದಾರೆ. ಅದು ಪಾರ್ಲಿಮೆಂಟರಿ ಪದ ಅಲ್ಲ. ಅವರು 'ಸತ್ಯಕ್ಕೆ ದೂರ' ಎಂಬ ಪದ ಉಪಯೋಗಿಸಬೇಕಾಗಿತ್ತು. ಆದ್ದರಿಂದ ಆ ಪದವನು ಅವರು ವಾಪಸ್ ಪಡೆಯಬೇಕೆಂದು ನಾನು ಹೇಳುತ್ತೇನೆ,

MR. DEPUTY SPEAKER.—It ,s expunged from the proceedings. I order to expunge it from the proceedings.

SRI H. GANGADHARAN.—I am on a point of order. ಇವತ್ತಿನ ಅಜೆಂಡಾ ಪ್ರಕಾರ ಸಭೆ ೧೧ ಗಂಟೆಯಿಂದ ೫ ಗಂಟೆವರೆಗೆ ನಡೆಯಬೇಕು. ಹಾಗೂ ಸದನ ಹೆಚ್ಚು ಸಮಯ ಕೂರಲು ಒಪ್ಪಿಗೆ ಕೊಟ್ಟಿಲ್ಲ. ಆದ್ದರಿಂದ ತಾವು ಬೇಗ ಮುಗಿಸಬೇಕು Otherwise, the House will not be in order.

SRI M. VEERAPPA MOILY.—This is obstruction. I cannot tolerate,

ಶ್ರೀ ಭೀಮಣ್ಣ ಖಂಡ್ರೆ.—ಕ್ಲಾರಿಫಿಕೇಷನ್ ಕೇಳುವುದು ಬೇಡವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಬಗ್ಗೆ ನಾನು ಪೂರ್ತಿ ಮಾಡಿಲ್ಲ. ನಾನು ಸ್ಪಷ್ಟೀಕರಣ ಕೇಳಬೇಕಾಗಿದೆ. ಮುಖ್ಯಮಂತ್ರಿಯವರು ತಾಳ್ಮೆ ತಪ್ಪಿ ಏಕೆ ಮಾತನಾಡುತ್ತಿದ್ದಾರೆಯೋ ಗೊತ್ತಿಲ್ಲ. ಇದರಲ್ಲಿ ನಾನು ಪ್ರಶ್ನೆ ಏನನ್ನೂ ಕೇಳಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಆ ಬಗ್ಗೆ ಬೇರೆ ನೋಟೀಸ್ ಕೊಟ್ಟು ಪ್ರಸ್ತಾಪ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಅರ್ಧ ಗಂಟೆಯಿಂದ ನಿಂತಿದ್ದೇನೆ. ನನಗೆ ಪೂರ್ತಿ ಮಾಡುವುದಕ್ಕೆ ಬಿಡುತ್ತಾ ಇಲ್ಲ. ನಿಮಗೇ ಇಷ್ಟು ಕಷ್ಟ ಆದಮೇಲೆ...

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಗಂಗಾಧರನ್ ಅವರು ಒಂದು ಕ್ರಿಯಾಲೋಪ ಎತ್ತಿದ್ದರು. ಆ ಬಗ್ಗೆ ಅಧ್ಯಕ್ಷರಿಂದ ರೂಲಿಂಗ್ ಬಂದಿಲ್ಲ.

MR. DEPUTY SPEAKER,—We have already extended time of the House.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಒಬ್ಬ ಅಧಿಕಾರಿ ಪ್ರಶ್ನೆ ಇದೆ. ಎನ್. ಜಿ. ಭಟ್ ಎನ್ನುವವರು ನಿನುಗೂ ಗೊತ್ತು. ಅವರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. We know the excellent service he has rendered. ಆದರೆ ನಾನು ತಮ್ಮ ಹತ್ತಿರ ಒಂದು ಪ್ರಶ್ನೆ ಎತ್ತಿದಾಗ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಆಗಿದೆ ಎಂದು ಸಮಾಧಾನದಿಂದ ಹೇಳಿದಿದ್ದರೆ ನಾವು ಕುಳಿತುಕೊಳ್ಳುತ್ತಿದ್ದೆವು. ಆರ್ಡರ್ ತಮ್ಮ ಕೈಯ್ಯಲ್ಲಿ ಇರಬಹುದು ಆದರೆ ಸ್ಪಷ್ಟೀಕರಣ ಕೊಡುವ ರೀತಿಯಲ್ಲಿ ಉತ್ತರ ಕೊಟ್ಟಿದ್ದರೆ ಸರಿಹೋಗುತ್ತಿತ್ತು. ಆದರೆ ಅವರು ಒಮ್ಮೆಲೇ ನಮ್ಮ ಮೇಲೆ ಬೀಳತಕ್ಕ ಪ್ರಸಂಗ ಮಾಡಿದರೆ...

(ಗೊಂದಲ)

ಶ್ರೀ ಮೈಖೇಲ್ ಬಿ. ಫೆರ್ನಾಂಡಿಸ್.—ತಾವೇ ಇದಕ್ಕೆ ಬುನಾದಿ ಹಾಕಿದ್ದು ಸ್ವಾಮಿ...

(ಗೊಂದಲ)

MR. DEPUTY SPEAKER.—Please allow the member to speak.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ರೀತಿಯ ಪರಿಸ್ಥಿತಿಯಲ್ಲಿ ನಾವು ಹೇಗೆ ಕೆಲಸ ಮಾಡುವುದು ? ಹಾಗಾದರೆ ಪ್ರಶ್ನೆಯನ್ನೆ ಕೇಳಬಾರದೆಂದು ಹೇಳಲಿ ನಮ್ಮ ಪ್ರಶ್ನೆ ಇಷ್ಟೇ, ಯಾವುದೇ ಒಂದು ವಿಚಾರ ಬಂದರೆ, ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದಾಗ, ಸರ್ಕಾರದ ಮಟ್ಟಿಗೆ ಅದು ಸರಿಯಾದ ಒಂದು ಆರ್ಡರ್ ಎಂದು ತಮ್ಮ ಮನಸ್ಸಿನಲ್ಲಿ ಇರಬಹುದು.

(ಗೊಂದಲ)

MR. DEPUTY SPEAKER.—I am on my legs. You must follow the procedure. What is this ?

ಶ್ರೀ ಬಿ. ಶಿವಣ್ಣ.—ಸರ್ಕಾರದವರು ಹೇಳುವುದನ್ನು ಹೇಳಿದ್ದಾರೆ. ಈಗ...

(ಗೊಂದಲ)

MR. DEPUTY SPEAKER.—Please co-operate with me in conducting the proceedings. Order, Order.

ಶ್ರೀ ಗೋವಿಂದ ಪಿ. ಒಡೆಯರಾಜ್.—ನನ್ನದೊಂದು ಕ್ರಿಯಾಲೋಪ ಇದೆ. ಇಲ್ಲಿ ಬಹಳ ಜನ ಸದಸ್ಯರು ಹೊಸಬರಿದ್ದಾರೆ.

(ಗೊಂದಲ)

ನಾನು ಹೊಸಬರು ಎಂದು ಏತಕ್ಕೆ ಹೇಳಿದೆ ಎಂದರೆ, ಈ ರೀತಿ ಚರ್ಚೆ ಆಗುವ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಹೇಳುತ್ತಾರೆ ಮಾನ್ಯ ವಿರೋಧ ಪಕ್ಷದ ನಾಯಕರೂ ಹೇಳುತ್ತಾರೆ. ಹಿಂದೆ ಅಧ್ಯಕ್ಷರಾಗಿದ್ದ ಮಾನ್ಯ ವೈಕುಂಠ ಬಾಳಿಗಾ ಅವರು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, The Opposition must have its say and the Government can have its way ಎಂದು; ದಯಮಾಡಿ ಮಾನ್ಯ ಸದಸ್ಯರು ಈ ವಿಷಯವನ್ನು ತಿಳಿದುಕೊಳ್ಳಬೇಕು. ನಾವು ಏನನ್ನು ಹೇಳುತ್ತೇವೋ ಅದನ್ನು ಕೇಳಬೇಕು. ಆಮೇಲೆ ಏನು ಮಾಡುತ್ತೀರಿ ಎಂಬುದು ತಮಗೆ ಬಿಟ್ಟಿದ್ದು.

(ಗೊಂದಲ)

ವಿರೋಧ ಪಕ್ಷದವರು ಹೇಳುವ ಮಾತನ್ನು ಕೇಳುವ ಸೌಜನ್ಯವನ್ನು ದಯಮಾಡಿ ಅವರು ತೋರಿಸಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸದಸ್ಯರಿಗೆ ತಿಳಿಸಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಮುಖ್ಯಮಂತ್ರಿಗಳಿಗೇ ಮಾಡುವುದಕ್ಕಾಗುವುದಿಲ್ಲ. ಅಧಿಕಾರ ಇದೆಯೆಂದು ಮೇಲೆ ಬೀಳುವುದಕ್ಕೆ ಬರಬೇಡಿ. ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಗೌರವ ಕೊಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಸ್. ಆರ್ ಬೊಮ್ಮಾಯಿ.—ತಾವು ಕೂಡ ಮಾನ್ಯ ಮುಖ್ಯಮಂತ್ರಿಗಳ ಸ್ಥಾನಕ್ಕೆ ಗೌರವ ಕೊಡುವುದನ್ನು ಕಲಿಯಬೇಕು. ವಿರೋಧ ಪಕ್ಷದ ನಾಯಕರ ಸ್ಥಾನದ ಬಗ್ಗೆ ನಮಗೆ ಗೌರವ ಇದೆ.

ಶ್ರೀ ಎಂ ವೀರಪ್ಪಮೊಯ್ಲಿ.— ಮಾನ್ಯ ಸಭಾ ನಾಯಕರೇ ಈ ಸದನದಲ್ಲಿ ಗೊಂದಲಕ್ಕೆ ಪ್ರಚೋದನೆ ಕೊಟ್ಟರೆ ಹೇಗೆ ?

ಶ್ರೀ ಎಂ. ರಘುಪತಿ. —ಇದು ಬಹಳ ಅತಿಯಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಖ್ಯಮಂತ್ರಿಗಳ ಸ್ಥಾನದ ಬಗ್ಗೆ ಆಪಾದನೆ ಮಾಡತಕ್ಕಂಥಾದ್ದು ಒಳ್ಳೆಯದಲ್ಲ.

(ಗೊಂದಲ)

MR. DEPUTY SPEAKER —I order the expunction of that word. No personal attack.

SRI M. VEERAPPA MOILY.—I am not making personal attack. It all started withthe Leader of the House.

MR. DEPUTY SPEAKER.—Even while commencing you attacked. You please come to the point.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ರಘುಪತಿ.—ಇದು ಅವರ ಕಾಲದಲ್ಲೇ ಆಗಿದೆ, ತಾವು ಏನೂ ಹೇಳಬೇಕಾಗಿಲ್ಲ. ಹಿಂದಿನ ಮುಖ್ಯಮಂತ್ರಿಗಳು ತಮ್ಮ ಸ್ಥಾನಮಾನದ ಪರಿವೇ ಇಲ್ಲದೇ ಸದಸ್ಯರನ್ನು ಹೊಡೆಯುವುದಕ್ಕೆ ಹೋಗಿದ್ದರು.

ಶ್ರೀ ಕೆ. ಹೆಚ್. ರಂಗನಾಥ್,—ಇದು ಹೀಗೆ ಮುಂದುವರಿದರೆ ಇನ್ನೂ ಅರ್ಧಗಂಟೆ ಜಾಸ್ತಿ ಕೂತುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸಹಕಾರ ನೀಡಬೇಕು. ಈ ರೀತಿಯಾದರೆ ಸಭೆ ನಡೆಸುವುದಾದರೂ ಹೇಗೆ ? Whether this is a House ? Please come to the point. If they want they can talk anything. This is not the place. Please co-operate with me. It refers to all, not to one side or the other side.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ. ಸರ್ಕಾರ ಮಾಡಿದ ತಪ್ಪುಗಳನ್ನು ಇಲ್ಲಿ ಕೇಳುವಂಥ ಅಧಿಕಾರ ನಮಗೆ ಇದೆ. ಸಂಶಯ ಬಂದ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ವಿವರಣೆ ಕೇಳಬೇಕಾಗುತ್ತದೆ. ಅದಕ್ಕೆ ಮುಖ್ಯಮಂತ್ರಿಯವರು ಉದ್ರೇಕದಿಂದ ಉತ್ತರ ಕೊಡುವುದು ಸರಿಯೇ ?

(*Interruption*)

MR. DEPUTY SPEAKER.—Why do you make funny commentary ? I cannot understand.

ಶ್ರೀ ಎಂ. ವೀರಪ್ಪಮೊಯ್ಲಿ.—ಮುಖ್ಯಮಂತ್ರಿಗಳು ಮಾಡಿದ್ದಾರೆಂಬ ಉದ್ದೇಶದಿಂದ ಹೇಳಲಿಲ್ಲ. ಪೋಸ್ಟನ್ನು ಅಪ್‌ಗ್ರೇಡ್ ಮಾಡುವಾಗ ಮೋಟೀವ್ ಆಟ್ರಿಬ್ಯೂಟ್ ಮಾಡಬೇಡಿ. ಇಲ್ಲಿ ಪೋಸ್ಟನ್ನು ಅಪ್‌ಗ್ರೇಡ್ ಮಾಡಿ, ಬೈ ಪ್ರೊಮೋಷನ್ ಎಂದು ಮತ್ತೊಂದು ಡಿವಿಷನ್‌ನಲ್ಲಿ ಯಾವರೀತಿ ಮಾಡುತ್ತೀರಿ ? ಸರ್ಕಾರದ ಹುಕ್ಕುಂ ಏನಿದೆ ಅದನ್ನು ಪ್ರಸ್ತಾಪ ಮಾಡಿದ್ದೇನೆ. ಸರ್ಕಾರದ ಹುಕ್ಕುಂ ಪ್ರಕಾರ ಜೂನ್ ೮೩ ರಿಂದ ಪ್ರೊಮೋಷನ್ ಕೊಡುವುದು ಎಂದು ಇದೆ. ಇದರ ಬಗ್ಗೆ ಸ್ಪಷ್ಟೀಕರಣ ಮಾಡಿದ್ದರೆ ಈ ಪ್ರಶ್ನೆಯೇ ಇಲ್ಲಿ ಉದ್ಭವವಾಗುತ್ತಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸುಲಭವಾಗಿ ಉದ್ರೇಕಗೊಳ್ಳುವವನಲ್ಲ. ನಿಮ್ಮ ಕೈಯಲ್ಲಿ ಸರ್ಕಾರೀ ಆಜ್ಞೆ ಇದೆ. ಇದೆಯೋ ಇಲ್ಲವೋ ? ತಾವು ಆಜ್ಞೆಯನ್ನು ಇಟ್ಟುಕೊಳ್ಳದೆ ಮಾತನಾಡಿದ್ದಾರೆ. ನನಗೆ ಏನೇನು ಬೇಜಾರಾಗುತ್ತಿರಲಿಲ್ಲ. ಮೊಟ್ಟಮೊದಲಿಗೆ ಪತ್ರ ಬರೆದವರು ಯಾರು ? ಯೋಜನಾ ಆಯೋಗದವರಿಂದ ಯಾವಾಗ ಪತ್ರ ಬಂತು ? ೮೧–೮೨ನೇ ಇಸವಿಯಲ್ಲಿ ಇದು ಆಗಿದೆ. ಒಬ್ಬ ವ್ಯಕ್ತಿಗೆ ಪ್ರೊಮೋಷನ್ ಕೊಟ್ಟಿದ್ದೀರಿ, ಹಾಗಾದರೆ ಜೂನ್ ತಿಂಗಳಲ್ಲಿಯೇ ಮಾಡಿದ್ದಕ್ಕೆ ಕಾರಣ ಏನು ? ತಾವು ಏನು ಮಾಡಿದಿರಿ by promotion, if found suitable for the post. ಸೆಲೆಕ್ಷನ್ ಆಗಿತ್ತೋ ? ತಾವು ಸರ್ಕಾರದ ಆಜ್ಞೆಯಲ್ಲಿರತಕ್ಕ ಒಂದು ಭಾಗದ ವಿಷಯವನ್ನು ಅಡಗಿಸಿಟ್ಟು ಇನ್ನೊಂದು ಭಾಗ ಓದಿದರೆ, ಮಾನ್ಯ ಸದಸ್ಯರ ಭಾವನೆಯಲ್ಲಿ ಏನು ಸಂಶಯ ಬರುತ್ತೆ. ನನಗೆ ಒಂದು ಸಂದೇಹ ಬರುತ್ತಿದೆ, ತಮಗೆ ಕೆಲವು ಭಾಗ ಓದುವುದಕ್ಕೆ ಗೊತ್ತಾಗುತ್ತೆ, ಇನ್ನು ಕೆಲವು ಭಾಗ ಓದುವುದಕ್ಕೆ ಗೊತ್ತಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. To that extent you are illiterate.

ಶ್ರೀ ಮೈಕೇಲ್ ಫರ್ನಾಂಡೀಸ್.—ಮಾನ್ಯ ಮೊಯ್ಲಿಯವರು ಥಿಂಕಿಂಗ್ ಟಾಂಕ್ ಇಟ್ಟುಕೊಳ್ಳಬೇಕಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇದು ಪ್ರೊಮೋಷನ್ ಬೈ ಸೆಲೆಕ್ಷನ್. ಪ್ರೊಮೋಷನ್ ಅಪ್‌ಗ್ರೇಡೇಷನ್ ಅಲ್ಲ. ಅಲ್ಲಿರತಕ್ಕವರು ಒಬ್ಬರೇ ಜಾಯಿಂಟ್ ಡೈರೆಕ್ಟರ್.

ಉಪಾಧ್ಯಕ್ಷರು.—ಈ ವಿಷಯ ಬಿಟ್ಟು, ಮುಂದಿನ ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಡಿ.ಪಿ.ಪಿ.ಯವರ ಪ್ರೊಮೋಷನ್‌ಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾವು ವ್ಯಕ್ತಿಗಳ ಬಗ್ಗೆ ಟೀಕೆ ಮಾಡಿಲ್ಲ. ಮಾಡಿದಂಥ ಕಾರ್ಯಕ್ರಮಗಳು ಸರಿಯೇ ಎನ್ನುವ ಬಗ್ಗೆ ಪ್ರಶ್ನೆ ಮಾಡಿದ್ದೇವೆ. ಕುದೂರು ಆಯೋಗದವರು ಕೆಲಸದಲ್ಲಿ ನಿರ್ಲಕ್ಷ್ಯತನ ತೋರಿರುವುದನ್ನು ನೇರವಾಗಿ ಪ್ರಶ್ನೆ ಮಾಡಿದಂಥ ಒಬ್ಬ ಅಧಿಕಾರಿಗೆ ಪ್ರೊಮೋಷನ್ ಕೊಟ್ಟು ಬೇರೆ ಅಧಿಕಾರಿಗಳನ್ನು ಡೀಮಾರ್ಲೈಸ್ ಮಾಡತಕ್ಕ ಉದ್ದೇಶವಾದರೂ ಏನಿತ್ತು ? ಇದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಭಾಷಣ ಮಾಡುವಾಗ ನ್ಯಾಯಾಂಗ ವಿಚಾರಣೆಗಳ ಬಗ್ಗೆ ಸರ್ಕಾರದ ಉದ್ದೇಶವನ್ನು ವ್ಯಕ್ತ ಮಾಡಿದ್ದಾರೆ. ಇವತ್ತಿನವರೆವಿಗೂ ಯಾವ ನ್ಯಾಯಾಧೀಶರನ್ನು ಕೂಡ ಕೊಡುವುದಕ್ಕಾಗಿಲ್ಲ. ಆಯೋಗಗಳ ವರದಿಯನ್ನು ನೋಡದೆ ಅಧಿಕಾರಿಗಳಿಗೆ ಪ್ರೊಮೋಷನ್ ಕೊಟ್ಟರೆ, ನ್ಯಾಯಾಂಗ ವಿಚಾರಣೆಗೆ ನ್ಯಾಯಾಧೀಶರುಗಳನ್ನು ಹೇಗೆ ಕೊಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಕುದೂರು ಆಯೋಗದ ವರದಿ ಬಂದು ಎಷ್ಟು ದಿವಸಗಳಾಗಿದೆ ? ತಾವು ಏತಕ್ಕೆ ಬಚ್ಚಿಟ್ಟಿದ್ದಿರಿ ? ಪ್ರತಿಯೊಂದು ಆಯೋಗಗಳ ವರದಿಯನ್ನು ತಾವು ೨ನೇ ಸ್ಥಾನದ ಮಂತ್ರಿಗಳಾಗಿದ್ದು ಏತಕ್ಕೆ ಬಚ್ಚಿಟ್ಟಿದ್ದೀರಿ ?

ಶ್ರೀ ಎಂ. ಮಹದೇವ್.—ಮಾನ್ಯ ಮುಖ್ಯ ಮಂತ್ರಿಗಳು ಏತಕ್ಕೆ ಉದ್ರೇಕಗೊಳ್ಳುತ್ತಾರೋ ಗೊತ್ತಿಲ್ಲ.

---

* The words are expunded as ordered by the Chair.

ಶ್ರೀ ಎಂ. ವೀರಪ್ಪಮೊಯ್ಲಿ.—ಅದನ್ನು ನಮ್ಮ ಸರ್ಕಾರವೇ ನೇಮಕಮಾಡಿದ್ದು. ನ್ಯಾಯಾಂಗ ವಿಚಾರಣೆ ವರದಿಗಳನ್ನು ತಾವು ಗೋಡೌನ್‌ಗೆ ಹಾಕತಕ್ಕಂಥ ಕೆಲಸ ಮಾಡಬೇಡಿ.

ಇನ್ನು ಈಗ ಸದನದಲ್ಲಿ ಪ್ರಶ್ನೆಯಾದಂಥ ಮೇನೇಜಿಂಗ್ ಡೈರೆಕ್ಟರ್ ಫಾರ್ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅವರ ಮೇಲೆ ಆಪಾದನೆ ಬಾದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಅದು ನಮ್ಮ ಭಾಷಣದಲ್ಲೂ ಬಂದಿಲ್ಲ, ನಿಮ್ಮ ಭಾಷಣದಲ್ಲೂ ಬಂದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಅದನ್ನು ಏತಕ್ಕೆ ಮುಚ್ಚಿಟ್ಟಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ತಾಳ್ಮೆಯಿಂದ ಇರಬೇಕು. ತಾಳ್ಮೆಗೆಟ್ಟು ಉತ್ತರ ಕೊಟ್ಟರೆ ಹೇಗೆ ಸ್ವಾಮಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ. ನಾನು ಕ್ರಿಯಾಲೋಪ ಎತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕ್ಲಾರಿಫಿಕೇಷನ್ ಕೇಳುವ ಹಕ್ಕು ಇದೆ. ಅದನ್ನು ಸದುಪಯೋಗ ಮಾಡಿಕೊಳ್ಳಬೇಕು ಅವರು ಕ್ಲಾರಿಫಿಕೇಷನ್ ಕೇಳದೆ ಈಗ ಹೊಸ ಪಾಯಿಂಟ್ ಕೇಳುತ್ತಿದ್ದಾರೆ. ಅವರು ಹೊಸ ಪಾಯಿಂಟ್ ಏನು ಕೇಳುತ್ತಿದ್ದಾರೆ, ಅದು ಕ್ಲಾರಿಫಿಕೇಷನ್ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮ್ಮ ನೀತಿ ಏನು ಎನ್ನುವುದನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಆ ಮನೆಯಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಅಲ್ಲಿ ಉತ್ತರವನ್ನು ಹೇಳಿದ್ದಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಭ್ರಷ್ಟ ಅಧಿಕಾರಿಗಳ ಬಗ್ಗೆ ಕೇಳತಕ್ಕ ಹಕ್ಕು ಇದೆ. ತಮಗೆ ಸಮಯ ಬೇಕು ಅಂದರೆ ಸಮಯ ತೆಗೆದುಕೊಳ್ಳಿ. ಭ್ರಷ್ಟಾಚಾರದಲ್ಲಿ ತೊಡಗಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಲೋಚನೆ ಮಾಡಬೇಕೆಂದರೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಆ ಮನೆಯಲ್ಲಿ ಉತ್ತರ ಕೊಟ್ಟಿದ್ದೇವೆ ಭ್ರಷ್ಟಾಚಾರದ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಹೇಳುತ್ತಿದ್ದಾರೆ. ಮಾನ್ಯ ಮೊಯಿಲಿಯವರು ತಮ್ಮ ಹಕ್ಕನ್ನು ಅಧಿಕಾರವನ್ನು ಚಲಾಯಿಸಿ ಕ್ಲಾರಿಫಿಕೇಷನ್ ಕೇಳುವಾಗ ದಯವಿಟ್ಟು ಹೊಸ ವಿಚಾರ ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಭ್ರಷ್ಟ ಅಧಿಕಾರಿಗಳು, ಅವರನ್ನು ಅಲ್ಲಿಂದ ತೆಗೆದುಹಾಕಿ ಎಂದು ನಾವು ಎರಡು ವರ್ಷಗಳಿಂದ ಹೇಳಿಕೊಂಡು ಬಂದರೂ ತಾವು ಅವರನ್ನು ಅಲ್ಲಿಯೇ ಕಂಟಿನ್ಯೂ ಮಾಡಿ ಇವೊತ್ತಿನ ದಿವಸ ಹೇಳುತ್ತಿದ್ದೀರಾ ? ಅಲ್ಲಿ ಅವರನ್ನು ಹಾಕಿದ್ದು ನಮ್ಮ ಸರ್ಕಾರವೋ ಅಥವಾ ನಿಮ್ಮ ಸರ್ಕಾರವೋ ಎಂಬುದನ್ನು ತಾವೇ ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ನಾವು ಮಾತನಾಡುತ್ತಿರುವುದು ಸರಿಯಲ್ಲ ಎಂದು ಅರ್ಥಮಾಡಿಕೊಂಡು, ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ ಮೊಯಿಲಿ.—ಮಾನ್ಯ ಯಡಿಯೂರಪ್ಪನವರು ಅಲ್ಲಿ ಕುಳಿತುಕೊಳ್ಳುವುದಕ್ಕಿಂತಲೂ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಳ್ಳುವುದು ಒಳ್ಳೆಯದು. ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ರಾಜಕೀಯ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೆ, ರೂಲ್ ೨೩ ಸ್ಪಷ್ಟವಾಗಿದೆ. ಅದರಲ್ಲಿ ತಾವು ಒಂದು ನಿಯಮಿತ ಕಾಲವನ್ನು ಗೊತ್ತುಮಾಡಬೇಕೆಂದು ಇದೆ. ಈ ರೀತಿ ಪ್ರತಿಯೊಬ್ಬ ಸದಸ್ಯರು ಒಂದೊಂದು ಪ್ರಶ್ನೆ ಕೇಳುತ್ತಾ ಹೋದರೆ ಹೇಗೆ ? ಅದಕ್ಕೆ ಒಂದು ಕಾಲನಿಯಮ ಬೇಡವೇ ? ತಾವು ದಯವಿಟ್ಟು ಕಾಲ ನಿಯಮ ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ.— ಅಧ್ಯಕ್ಷರೆ, ಈಗ ಎಸೆನ್ಷಿಯಲ್ ಕಮಾಡಿಟೀಸ್ ಪ್ರೈಸ್‌ನ್ನು ಕಡಿಮೆ ಮಾಡಂಪ ಸಲುವಾಗಿ ಹೇಳಿದ್ದಾರೆ, ಅದನ್ನು ನಾನು ವೆಲ್‌ಕಮ್ ಮಾಡುತ್ತೇನೆ. ಬಡವರು ತಿನ್ನುವಂತಹ ಅಕ್ಕಿ ಬೆಲೆಯಲ್ಲಿ ೧೦ ಪೈಸೆ ಕಡಿಮೆ ಮಾಡಿದ್ದೀರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.— ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು.— ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರ ಕ್ರಿಯಾಲೋಪ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ ನಾನು ಕ್ಲಾರಿಫಿಕೇಷನ್ ಕೇಳುವಾಗ ಇತರೆ ಸದಸ್ಯರು ಮಧ್ಯೆ ಪ್ರವೇಶ ಮಾಡಿ ಮಾತನಾಡುವುದು, ಗಲಾಟೆ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.—ನಾನು ತಮ್ಮ ಕ್ರಿಯಾಲೋಪವನ್ನು ತಳ್ಳಿಹಾಕಿದ್ದೇನೆ. ದಯಮಾಡಿ ಮಾನ್ಯ ಭೀಮಣ್ಣ ಖಂಡ್ರೆಯವರು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ದಯಮಾಡಿ ನಾನು ಸಭೆ ನಡೆಸಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ನಾನು ಮೂರು ಬಾರಿಯಿಂದಲೂ ವಿಧಾನ ಸಭಾ ಸದಸ್ಯನಾಗಿ ಆರಿಸಿ ಬರುತ್ತಿದ್ದೇನೆ. ನಾನು ತಮ್ಮನ್ನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಮಾತನಾಡುವಾಗ ಆಡಳಿತ ಪಕ್ಷದವರು ಆಗಾಗ ಎದ್ದು ನಿಂತು ಈ ತರಹ ಉದ್ಧಟತನದ ಪ್ರವೃತ್ತಿ ಮಾಡುತ್ತಿರುವುದನ್ನು ನಾನು ಇದುವರೆಗೂ ನೋಡಿರಲಿಲ್ಲ.

(ಗೊಂದಲ)

ಅಧ್ಯಕ್ಷರೆ, ಇವರ ಉದ್ಧಟತನದ ಪ್ರವೃತ್ತಿಯನ್ನು ಪ್ರತಿಭಟಿಸಿ ನಾವು ಈ ಸಭೆಯಿಂದ ಹೊರಗೆ ಹೋಗುತ್ತೇವೆ.

(ವಿರೋಧ ಪಕ್ಷದ ಸದಸ್ಯರು ಸಭೆಯಿಂದ ಹೊರಗೆ ಹೋದರು)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ ಇವರು ಅಸಮರ್ಥರ ಹಾಗೆ ಪಲಾಯನ ಮಾಡುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್,— ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲಾ ಹೋಗಿದ್ದಾರೆ, ಅವರು ಸುಖವಾಗಿ ಮನೆ ತಲುಪಿದ್ದಾರೆಯೋ ಎಂದು ತಿಳಿದುಕೊಂಡು ಬಿಟ್ಟು ಈ ಸಭೆಗೆ ತಿಳಿಸಿ.

ಉಪಾಧ್ಯಕ್ಷರು.—ಈಗ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ.—

> "ಜನವರಿ ೨೪, ೧೯೮೩ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ".

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಉಪಾಧ್ಯಕ್ಷರು.—ಈಗ ಸಭೆ ಮೇಲೆದ್ದು ನಾಳೆ ಬೆಳಿಗ್ಗೆ ೧೧ ಗಂಟೆಗೆ ಸೇರಿ ಪ್ರಶ್ನೋತ್ತರ ವೇಳೆ ಮುಗಿದನಂತರ ಸಭೆಯು ಮುಕ್ತಾಯವಾಗಿ ಮತ್ತು ಪುನ : ಮಧ್ಯಾಹ್ನ ಎರಡು ಗಂಟೆಗೆ ಸಭೆ ಸೇರುತ್ತದೆ.

ಸದನವು ಏಳು ಗಂಟೆಗೆ ಮುಕ್ತಾಯವಾಗಿ ಪುನಃ ಶುಕ್ರವಾರ ದಿನಾಂಕ ೧೮ನೇ ಮಾರ್ಚಿ ೧೯೮೩ರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.